# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಫೆಬ್ರವರಿ 21, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 280 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಅಜ್ಞಾನದ ರಾತ್ರಿಯಲ್ಲಿ ಜ್ಞಾನ ಸೂರ್ಯನ ಅವತರಣೆಯೇ ನಿಜವಾದ ಶಿವರಾತ್ರಿ

ದಾವಣಗೆರೆ, ಫೆ. 19- ಅಜ್ಞಾನದ ರಾತ್ರಿಯಲ್ಲಿ ಜ್ಞಾನ ಸೂರ್ಯನ ಅವತರಣೆಯೇ ನಿಜವಾದ ಶಿವರಾತ್ರಿ ಎಂದು ಪ್ರಜಾಪಿತ ಈಶ್ವರೀಯ ವಿಶ್ವ ವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಹೇಳಿದರು.

ನಗರದ ಹೈಸ್ಕೂಲ್ ಮೈದಾನದಲ್ಲಿ ಸೋಮವಾರ ಸಂಜೆ ಮಹಾ ಶಿವರಾತ್ರಿ ಕಾರ್ಯಕ್ರಮದಲ್ಲಿ 1008 ದಂಪತಿಗಳಿಂದ ಇಷ್ಟಲಿಂಗ ಪೂಜಾ ಕಾರ್ಯಕ್ರಮದಲ್ಲಿ ಅವರು ಶಿವರಾತ್ರಿ ಸಂದೇಶ ನೀಡಿದರು.

**ಮಹಾ ಶಿವರಾತ್ರಿ ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ**

ಶಿವನು ಅಜ್ಞಾನದ ಕತ್ತಲೆಯನ್ನು ದೂರ ಮಾಡಲು ಅವತರಿಸಿದ ಘಟನೆಯ ಸ್ಮರಣಾರ್ಥವಾಗಿ ನಾವು ಶಿವರಾತ್ರಿಯನ್ನು ಆಚರಿಸುತ್ತೇವೆ ಎಂದು ಹೇಳಿದರು.

ಶಿವ ಜ್ಯೋತಿರ್ಲಿಂಗ ಸ್ವರೂಪಿಯಾಗಿದ್ದಾನೆ. ಅದಕ್ಕಾಗಿಯೇ ನಾವು ದ್ವಾದಶ ಜ್ಯೋತಿರ್ಲಿಂಗದ ರೂಪದಲ್ಲಿ ಶಿವನನ್ನು ಸ್ಥಾಪಿಸಿರುತ್ತೇವೆ. ಆಕಾರ ರಹಿತನಾದ ಶಿವ ನಿರಾಕಾರ ಜ್ಯೋತಿಯಾಗಿದ್ದಾನೆ. ಅವನ ಗುಣಗಳ ಆಧಾರದಿಂದ ಅವನಿಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದೆ ಎಂದರು.

ಎಲ್ಲರಿಗೂ ಪರಮಾತ್ಮ ಒಬ್ಬನೇ ತಂದೆ. ಹೀಗಾಗಿ ಜಗತ್ತಿನ ಎಲ್ಲಾ ಧರ್ಮದವರೂ ಪರಮಾತ್ಮನಿಗೆ ಮಾನ್ಯತೆ ನೀಡಿದ್ದಾರೆ. ನಾವೆಲ್ಲಾ ಶಿವನ ಮಕ್ಕಳೆಂದು ತಿಳಿದಾಗ ಭೇದಭಾವ ಅಳಿಸಿ ಹಾಕಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಸಿನಿಮಾ ಅಥವಾ ಟಿವಿ ನೋಡುತ್ತಾ ಜಾಗರಣೆ ಮಾಡುವುದು ನಿಜವಾದ ಜಾಗರಣೆಯಾಗುವುದಿಲ್ಲ. ಅಜ್ಞಾನದ ನಿದ್ದೆ ಬಿಟ್ಟು ಜಾಗರೂಕರಾಗಿರಬೇಕು. ಕೆಟ್ಟದ್ದನ್ನು ನೋಡಬಾರದು, ಕೆಟ್ಟದ್ದನ್ನು ಕೇಳಬಾರದು, ಕೆಟ್ಟದ್ದನ್ನು ಮಾತನಾಡಬಾರದು. ಕೈಗಳಿಂದ ಕೆಟ್ಟ ಕರ್ಮ ಮಾಡಬಾರದು. ಮನದಲ್ಲಿ ಕೆಟ್ಟ ಆಲೋಚನೆ ಮಾಡಬಾರದು ಎಂಬುದು ಪರಮಾತ್ಮನ ಸಂದೇಶವಾಗಿದೆ. ಶಿವರಾತ್ರಿಯ ನಿಜವಾದ ಜಾಗರಣೆ ವರ್ಷದ ಒಂದು ದಿನಕ್ಕೆ ಮಾತ್ರ ಸೀಮಿತವಾಗದೆ ನಿತ್ಯವೂ (2ನೇ ಪುಟಕ್ಕೆ)

### ಊಟ ಒಪ್ಪತ್ತು, ದೋಸೆ ಇಪ್ಪತ್ತು

ಪ್ರಸ್ತುತ ದಿನಗಳಲ್ಲಿ ಶಿವರಾತ್ರಿ ಅಂಗವಾಗಿ ಮಾಡುವ ಉಪವಾಸ 'ಊಟ ಒಪ್ಪತ್ತು ದೋಸೆ ಇಪ್ಪತ್ತು' ಎನ್ನುವಂತಾಗಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಹೇಳಿದರು.


ಯಾವ ದೇವರೂ ತನ್ನ ಮಕ್ಕಳು ಉಪವಾಸ ಮಾಡಿ ಕಷ್ಟಪಟ್ಟು ಪ್ರಾರ್ಥಿಸುವಂತೆ ಹೇಳುವುದಿಲ್ಲ. ಉಪವಾಸ ಮಾಡುವುದು ಆರೋಗ್ಯಕ್ಕೆ ಒಳ್ಳೆಯದು. ಆದರೆ ಪರಮಾತ್ಮ ಹೇಳಿರುವಂತೆ ನಾವು ಮನಸ್ಸಿನ ಉಪವಾಸ ಮಾಡಬೇಕಿದೆ ಎಂದು ಹೇಳಿದರು. ಉಪ ಎಂದರೆ ಹತ್ತಿರ, ವಾಸ ಎಂದರೆ ಇರುವುದು. ಉಪವಾಸ ಎಂದರೆ ಭಗವಂತನಿಗೆ ಹತ್ತಿರವಾಗಿ ಇರುವುದು ಎಂದರ್ಥ. ಅಂದು ನಾವು ಸದಾ ಪರಮಾತ್ಮನ ಸ್ಮರಣೆಯಲ್ಲಿದ್ದಾಗ ಮಾತ್ರ ಅವನಿಗೆ ಹತ್ತಿರವಾಗಿರಲು ಸಾಧ್ಯವಾಗುತ್ತದೆ. ಇದೇ ನಿಜವಾದ ಉಪವಾಸ ಎಂದು ಲೀಲಾಜಿ ಹೇಳಿದರು.

## ಸಿದ್ದರಾಮಯ್ಯ ಸರ್ಕಾರದ ಹಗರಣಗಳು ಲೋಕಾಯುಕ್ತ ತನಿಖೆಗೆ : ಬೊಮ್ಮಾಯಿ

ಬೆಂಗಳೂರು, ಫೆ.20 - ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಆಡಳಿತದಲ್ಲಿ ನಡೆದಿರುವ ಹಗರಣಗಳನ್ನು ಲೋಕಾಯುಕ್ತಕ್ಕೆ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಮುಖಂಡರುಗಳು ಸದನದ ಹೊರಗೆ ಭ್ರಷ್ಟಾಚಾರದ ಆರೋಪ-ಪ್ರತ್ಯಾರೋಪಗಳನ್ನು ಮಾಡಿ ಸಾರ್ವಜನಿಕರನ್ನು ದಿಕ್ಕೆಡಿಸುವ ಬೆನ್ನಲ್ಲೆ ಮುಖ್ಯಮಂತ್ರಿಯವರು ಕಾಂಗ್ರೆಸ್ ನಾಯಕರು ಮಾಡಿರುವ ಭ್ರಷ್ಟಾಚಾರಗಳಿಗೆ ಸಂಬಂಧಿಸಿದಂತೆ ಸದನದಲ್ಲೇ ತನಿಖೆಗೆ ಆದೇಶ ಮಾಡಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ ಅವರು, ಸಿದ್ದರಾಮಯ್ಯ ಆಡಳಿತ ನಡೆಸುವ ಸಂದರ್ಭದಲ್ಲೇ ಆ ಪಕ್ಷದ ಸಚಿವರು, ಶಾಸಕರು ಮತ್ತು ಮುಖಂಡರ ಮೇಲೆ ಅಲ್ಲದೆ ಸ್ವತಃ ಅಂದಿನ ಮುಖ್ಯಮಂತ್ರಿಗಳ ವಿರುದ್ಧವೇ ಎಸಿಬಿ ಯಲ್ಲಿ ದೂರು ದಾಖಲಾಗಿದ್ದವು ಎಂದರು.



ಅವುಗಳಲ್ಲಿ ಕೆಲವು ತನಿಖೆ ನಡೆಸಿ, ಬಿ ರಿಪೋರ್ಟ್ ಹಾಕಲಾಗಿತ್ತು. ಆ ತನಿಖೆಯ ಬಗ್ಗೆಯೇ ನಮಗೆ ಸಂಶಯವಿದೆ. ಈ ಕಾರಣದಿಂದ ಎಸಿಬಿಯಲ್ಲಿ ಅಂದಿನ ದಿನಗಳಲ್ಲಿ ದೂರು ದಾಖಲಾದ ಎಲ್ಲಾ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸುವುದಾಗಿ ತಿಳಿಸಿದರು. ನಿಮ್ಮ ಆಡಳಿತದಲ್ಲಿ ಪಿಡಬ್ಲ್ಯೂಡಿ ಸೇರಿದಂತೆ ಹಲವು ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದು, ಬೀದಿಗೆ ಬರುವ ಸಮಯದಲ್ಲಿ ಎಲ್ಲವನ್ನೂ ಮುಚ್ಚಿ ಹಾಕಿದಿರಿ. ನೀವು ಮಾಡಿದ ಪಾಪಗಳನ್ನು ನಮ್ಮ ಮೇಲೆ ಹೇರುವ ಕೆಲಸ ಮಾಡುತ್ತಿದ್ದೀರಿ.

ಹಗರಣಗಳನ್ನು ಮುಚ್ಚಿ ಹಾಕಲು ಕೆಂಪಣ್ಣ ಆಯೋಗ ರಚಿಸಿ, ಆರೋಪಗಳಿಂದ ಮುಕ್ತಿ ದೊರಕಿಸಿಕೊಳ್ಳುವ ಪ್ರಯತ್ನ ಮಾಡಿದ್ದೀರಿ.

ನಿಮ್ಮ ಕಾಲದಲ್ಲಿ ನಡೆದಿರುವ ಎಲ್ಲಾ ಹಗರಣಗಳ ಸತ್ಯಾಸತ್ಯತೆ ಸಂವಿಧಾನಾತ್ಮಕವಾದ ಲೋಕಾಯುಕ್ತದಲ್ಲೇ ಹೊರ ಬರಲಿ ಎಂದರು. ತೆರಿಗೆ ದಕ್ಷತೆ, ತೆರಿಗೆ ವಂಚಕರನ್ನು ಪತ್ತೆ ಮಾಡುವುದರ ಜತೆಗೆ ಎಲ್ಲ (2ನೇ ಪುಟಕ್ಕೆ)

## ರೂಪಾ-ಸಿಂಧೂರಿ ವರ್ತನೆಗೆ ಸಿಎಂ ಗರಂ

ಬೆಂಗಳೂರು, ಫೆ. 20 - ಸರ್ಕಾರಕ್ಕೆ ಅಗೌರವ ತರುವ ರೀತಿಯಲ್ಲಿ ಹಾದಿಬೀದಿಯಲ್ಲಿ ಹೇಳಿಕೆ ನೀಡುತ್ತಿರುವ ಇಬ್ಬರು ಹಿರಿಯ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ಅವರಿಂದ ತುರ್ತು ವಿವರಣೆ ಪಡೆಯಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶದಂತೆ ರಾಜ್ಯದ ಮುಖ್ಯಕಾರ್ಯದರ್ಶಿಯವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ಡಿ. ರೂಪಾ ಅವರನ್ನು ತಮ್ಮ ಕಚೇರಿಗೆ ಕರೆಸಿಕೊಂಡು ವಿವರಣೆ ಪಡೆದಿದ್ದಾರೆ.



**ವಿವರಣೆ ಪಡೆದ ಮುಖ್ಯ ಕಾರ್ಯದರ್ಶಿ**

ಇಬ್ಬರೂ ಹಿರಿಯ ಅಧಿಕಾರಿಗಳು ನೀಡಿರುವ ವರದಿಯನ್ನು ತುಲನೆ ಮಾಡಿ, ಮುಖ್ಯಕಾರ್ಯದರ್ಶಿಯವರು ಸರ್ಕಾರಕ್ಕೆ ಯಾವುದೇ ಸಂದರ್ಭದಲ್ಲಿ ವರದಿ ನೀಡಲಿದ್ದಾರೆ.

ಸರ್ಕಾರಕ್ಕೆ ಮುಜುಗರವಾಗುವಂತೆ ಅಧಿಕಾರಿಗಳು ನಡೆದುಕೊಂಡಿರುವ ಬಗ್ಗೆ ಮುಖ್ಯಕಾರ್ಯದರ್ಶಿಯವರು ಉಲ್ಲೇಖ ಮಾಡಿದ್ದಾರೆ, ಅವರನ್ನು ತಕ್ಷಣ ಅಮಾನತ್ತು ಮಾಡಲು ಮುಖ್ಯಮಂತ್ರಿಯವರು ತೀರ್ಮಾನಿಸಿದ್ದಾರೆ. ಈ ಇಬ್ಬರೂ ಅಧಿಕಾರಿಗಳ ಜಗಳ (2ನೇ ಪುಟಕ್ಕೆ)

## ಎನ್.ಪಿ.ಎಸ್. ಹಣವನ್ನು ರಾಜ್ಯಗಳಿಗೆ ಕೊಡಲಾಗದು

ಜೈಪುರ್, ಫೆ. 20- ಈಗಿರುವ ಕಾನೂನುಗಳ ಪ್ರಕಾರ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್.) ನಿಧಿಯಲ್ಲಿ ಜಮಾ ಮಾಡಲಾಗಿರುವ ಹಣವನ್ನು ರಾಜ್ಯ ಸರ್ಕಾರಗಳಿಗೆ ಹಸ್ತಾಂತರಿಸಲಾಗದು ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಎನ್.ಪಿ.ಎಸ್. ಹಣವನ್ನು ರಾಜ್ಯಗಳಿಗೆ ನೀಡಬೇಕು ಎಂಬ ನಿರೀಕ್ಷೆಯನ್ನು ಜಾರಿಗೆ ತರಲು ಸಾಧ್ಯವಾಗದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಹಣಕಾಸು ಕಾರ್ಯದರ್ಶಿ ವಿವೇಕ್ ಜೋಶಿ ಅವರಿಬ್ಬರೂ ತಿಳಿಸಿದ್ದಾರೆ.ಅದಾನಿ ಸಮೂಹದ (2ನೇ ಪುಟಕ್ಕೆ)

## ಒಡಿಶಾದಲ್ಲಿ ಡ್ರೋನ್ ಮೂಲಕ ಪಿಂಚಣಿ

ನೌಪಾದ, ಫೆ. 20 – ಒಡಿಶಾದ ನೌಪಾದ ಜಿಲ್ಲೆಯ ದುರ್ಗಮ ಹಳ್ಳಿಯಲ್ಲಿರುವ ವಿಕಲಚೇತನ ಹೆತರಾಮ್ ಸತ್ನಾಮಿಗೆ ಸರ್ಕಾರದ ಪಿಂಚಣಿಯನ್ನು ಡ್ರೋನ್ ಮೂಲಕ ತಲುಪಿಸಲಾಗಿದೆ.

ಇದಕ್ಕೂ ಮುಂಚೆ ಸತ್ನಾಮಿ ಅವರು ಪಿಂಚಣಿ ಪಡೆಯಲು ಅರಣ್ಯದಲ್ಲಿ ಎರಡು ಕಿ.ಮೀ. ದೂರ ಸಾಗಿ ಬರಬೇಕಿತ್ತು. ಈ ಬಾರಿ ಡ್ರೋನ್ ಮೂಲಕ ಹಣವನ್ನು ಭುಟ್ಕಪಾದ ಹಳ್ಳಿಯಲ್ಲಿರುವ ಅವರ ಮನೆಗೆ ತಲುಪಿಸಲಾಗಿದೆ.

ಡ್ರೋನ್ ಮೂಲಕ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಹಣ ಕಳಿಸಿದ್ದಾರೆ. ಇದು ನನಗೆ ದೊಡ್ಡ ನೆರವಾಗಿದೆ. ಇದಕ್ಕೂ ಮುಂಚೆ ಎರಡು ಕಿ.ಮೀ. ದಟ್ಟ ಅರಣ್ಯದ ಮೂಲಕ ಪಂಚಾಯ್ತಿ ಕಚೇರಿಗೆ ತೆರಳಬೇಕಿತ್ತು ಎಂದು ಸತ್ನಾಮಿ ಹೇಳಿದ್ದಾರೆ. ಸತ್ನಾಮಿ ಸಮಸ್ಯೆ ತಿಳಿದ ನಂತರ ಪಂಚಾಯ್ತಿ (3ನೇ ಪುಟಕ್ಕೆ)

## ಹಡಗಲಿ: ಸಂಭ್ರಮದ ಕುರುವತ್ತಿ ಬಸವೇಶ್ವರ ರಥೋತ್ಸವ



ಹೂವಿನಹಡಗಲಿ, ಫೆ.20- ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಕುರುವತ್ತಿ ಬಸವೇಶ್ವರ ಸ್ವಾಮಿ ರಥೋತ್ಸವ ಸೋಮವಾರ ಸಂಜೆ 5 ಗಂಟೆಗೆ ಸರಿಯಾಗಿ ಅತ್ಯಂತ ವಿಜೃಂಭಣೆಯಿಂದ ಭಕ್ತರ ಹರ ಹರ ಮಹಾದೇವ ಎಂಬ ಹರ್ಷೋದ್ಗಾರ ದೊಂದಿಗೆ ಜರುಗಿತು.

ಜಾಥಾ ರಥೋತ್ಸವಕ್ಕೆ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಎಲ್ಲಾ ಸಕಲ ಸಿದ್ಧತೆಗಳನ್ನು ಕೈಗೊಂಡಿತ್ತು. ತಾಲ್ಲೂಕು ಆಡಳಿತ ಕೂಡ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು. ಸೂಕ್ತವಾಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರಿಂದ ಕುರುವತ್ತಿ ಕ್ರಾಸ್‌ನಿಂದ ಕುರುವತ್ತಿ ಗ್ರಾಮಕ್ಕೆ ತೆರಳುವ ಭಕ್ತರ ಎಲ್ಲ ವಾಹನಗಳನ್ನು ಎರಡು ಕಿಲೋಮೀಟರ್ ದೂರದ ಹಿಂದೆ ತಡೆದು ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿತ್ತು.

ರಥೋತ್ಸವಕ್ಕೆ ದೂರದ ನಗರಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದು ವಿಶೇಷವಾಗಿತ್ತು. ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷಗಳ ಕಾಲ ಜಾತ್ರೆಯನ್ನು (3ನೇ ಪುಟಕ್ಕೆ)

## ಚನ್ನಗಿರಿ : ಕನ್ನಡ ಭವನಕ್ಕೆ ನಿವೇಶನ

### ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ.ಮಧುಕುಮಾರ್ ಸಂತಸ

ಚನ್ನಗಿರಿ, ಫೆ.20- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಬಹುವರ್ಷಗಳ ಬೇಡಿಕೆಯಾದ ಕನ್ನಡ ಸಾಹಿತ್ಯ ಭವನದ ನಿರ್ಮಾಣಕ್ಕೆ ಶಾಸಕ ಮಾಡಾಳ್ ವಿರೂಪಾಕ್ಷಪ್ಪನವರ ಶಿಫಾರಸ್ಸಿನ ಪರಿಣಾಮವಾಗಿ ನಿವೇಶನ ಮಂಜೂರಾಗಿದ್ದು, ಪರಿಷತ್ತಿನ ಸದಸ್ಯರು, ಕನ್ನಡಾಭಿಮಾನಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಚನ್ನಗಿರಿ ಸಮೀಪದ ಅಜ್ಜಿಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಕ್ಕೂಲಿಕೆರೆ ಗ್ರಾಮದಲ್ಲಿ 80x60 ಅಳತೆಯ ವಿಶಾಲವಾದ ನಿವೇಶನವು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿಗೆ ಮಂಜೂರಾಗಿದೆ.


ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವಾಪಟ್ಟಣದ ಎಲ್.ಜಿ.ಮಧುಕುಮಾರ್ ನೇತೃತ್ವದಲ್ಲಿ ಪರಿಷತ್ತಿನ ಪದಾಧಿಕಾರಿಗಳು ಶಾಸಕ ಹಾಗೂ ಕೆಎಸ್‌ಡಿಎಲ್ ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪನವರಿಗೆ ಅಭಿನಂದನೆ ಸಲ್ಲಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಘಟಕವು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದನ್ನು ಮನಗಂಡು ತಾಲ್ಲೂಕಿನಲ್ಲಿ ಸಾಹಿತ್ಯದ ಚಟುವಟಿಕೆಗಳು ನಿರಂತರವಾಗಿ ಸಾಗುತ್ತಿರಲಿ ಎಂಬ ಸದುದ್ದೇಶದಿಂದ ನಿವೇಶನವನ್ನು ಮಂಜೂರು ಮಾಡಿಸಲಾಗಿದೆ. ಶೀಘ್ರದಲ್ಲೇ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿಸಿ, ಕನ್ನಡ ಸಾಹಿತ್ಯ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದರು.

ಕನ್ನಡ ಭವನದ ನಿರ್ಮಾಣಕ್ಕೆ (2ನೇ ಪುಟಕ್ಕೆ)

## ವಿಚ್ಛೇದನ, ಜೀವನಾಂಶಗಳಿಗೆ ಏಕರೂಪ ಕಾನೂನು ತರಬಹುದೇ? ಸುಪ್ರೀಂ ಪ್ರಶ್ನೆ

ನವದೆಹಲಿ, ಫೆ. 20 – ಮದುವೆ, ವಿಚ್ಛೇದನ, ಉತ್ತರಾಧಿಕಾರತ್ವ ಹಾಗೂ ಜೀವನಾಂಶದಂತಹ ವಿಷಯಗಳಿಗೆ ಸಂಬಂಧಿಸಿದಂತೆ ಮತ – ಲಿಂಗ ಭೇದ ರಹಿತವಾದ ಕಾನೂನು ಜಾರಿಗೆ ತರಬಹುದೇ ? ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.



ಭೇದ ಭಾವ ಇಲ್ಲದೇ ಏಕರೂಪವಾದ ವೈಯಕ್ತಿಕ ಕಾಯ್ದೆ ಜಾರಿಗೆ ತರುವ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳನ್ನು ದಾಖಲಿಸಲಾಗಿದೆ. ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ವಿಚಾರಣೆ ನಡೆಸುತ್ತಿದೆ.

ಶಾಸಕಾಂಗಕ್ಕೆ ಸಂಬಂಧಿಸಿದ ಈ ವಿಷಯಗಳಲ್ಲಿ ನ್ಯಾಯಾಲಯ ಎಷ್ಟರ ಮಟ್ಟಿಗೆ ಮಧ್ಯ ಪ್ರವೇಶಿಸಬಹುದು ಎಂಬ ಪ್ರಶ್ನೆ ಇದೆ ಎಂದು ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ. ಪರ್ಡಿವಾಲ ಅವರಿದ್ದಾರೆ.

ನ್ಯಾಯಾಲಯದ ಎದುರು ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ಲಿಂಗ ತಟಸ್ಥವಾದ ಕಾನೂನು ಇರಬೇಕು ಎಂಬ ಬಗ್ಗೆ ತಾತ್ವಿಕವಾಗಿ ಯಾವುದೇ ಆಕ್ಷೇಪ ಇಲ್ಲ. ನ್ಯಾಯಾಂಗದ ಕಡೆಯಿಂದ ಏನು ಮಾಡಬಹುದು (2ನೇ ಪುಟಕ್ಕೆ)


॥ ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ ॥

**ವಿವಾಹ ಮಹೋತ್ಸವ ಆಮಂತ್ರಣ**

ನಾಗರಕಟ್ಟೆ ದಿ॥ ಶ್ರೀಮತಿ ಗಂಗಮ್ಮ ದಿ॥ ಶ್ರೀ ಎನ್.ಕೆ. ಬಸೆಟ್ಟಪ್ಪ
ಅಣಜಿ, ದಾವಣಗೆರೆ ತಾ॥, ಜಿ. ಇವರ ಕೃಪಾಶೀರ್ವಾದಗಳೊಂದಿಗೆ
ಶ್ರೀಮತಿ ವೀಣಾ ಕೆ.ಜಿ. ಮತ್ತು ಶ್ರೀ ಎನ್.ಬಿ. ನಾಗರಾಜಪ್ಪ
ನಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂಡಿ. ಇವರು ಮಾಡುವ ವಿಜ್ಞಾಪನೆಗಳು.
ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನೃಪ ಶಾಲಿವಾಹನ ಶಕೆ 1944ನೇ ಶ್ರೀ ಶುಭಕೃತುನಾಮ ಸಂವತ್ಸರ ಉತ್ತರಾಯಣ ವಸಂತ ಋತು ಫಾಲ್ಗುಣ ಮಾಸ ಶುಕ್ಲಪಕ್ಷ ತದಿಗೆ ದಿನಾಂಕ 22-02-2023ನೇ ಬುಧವಾರ ಬೆಳಿಗ್ಗೆ 09-30 ರಿಂದ 10-25ರವರೆಗೆ ಸಲ್ಲುವ ಮಕರ ಲಗ್ನದ ಶುಭ ಮುಹೂರ್ತದಲ್ಲಿ

ನಮ್ಮ ಸುಪುತ್ರಿ
**ಚಿ॥ ಕುಂ॥ ಸೌ॥ ತನ್ಮಯಿ ಎನ್.ಎನ್.** B.E.Civil., M.S. Construction, USA.
**ಚಿ॥ ರಾ॥ ಮನುಕುಮಾರ್ ಜಿ.** B.E. E&C., M.S. M.I.S., USA.
ಶ್ರೀಮತಿ ಸಿ.ಬಿ. ಚಂದ್ರಕಲಾ ದಿ॥ ಶ್ರೀ ಗಿರಿಯಪ್ಪ,
ಲೆಕ್ಕಾಧೀಕ್ಷರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು, ಇವರ ದ್ವಿತೀಯ ಪುತ್ರ
ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ,

ತಮ್ಮ ಸುಖಾಗಮನವನ್ನು ಬಯಸುವವರು :
ನಾಗರಕಟ್ಟೆ ವಂಶಸ್ಥರು,
ಅಣಜಿ, ದಾವಣಗೆರೆ ತಾ॥
ಸಿದ್ದಯ್ಯನರ ಮಲ್ಲಪ್ಪನವರ ಮಕ್ಕಳು
ಹಾಗೂ ಮೊಮ್ಮಕ್ಕಳು, ಜಾವೂರು, ಹೊಸಳ್ಳಿ,
ತರೀಕೆರೆ ತಾ॥, ಚಿಕ್ಕಮಗಳೂರು ಜಿಲ್ಲೆ.
ಕೂಲಂಬಿ ವಂಶಸ್ಥರು, ಮಳಲಕೆರೆ
ಹಾಗೂ ಬಂಧು-ಮಿತ್ರರು.

ತಮ್ಮ ಆಗಮನಾಭಿಲಾಷಿಗಳು,
✦ ಶ್ರೀಮತಿ ವೀಣಾ ಕೆ.ಜಿ. ಶ್ರೀ ಎನ್.ಬಿ. ನಾಗರಾಜಪ್ಪ ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು ಮತ್ತು ಮಕ್ಕಳು,
✦ ಡಾ. ಧನುಷ್ ಎನ್.ಎನ್., M.B.B.S., ದಾವಣಗೆರೆ.
✦ ಶ್ರೀಮತಿ ಸಿ.ಬಿ. ಚಂದ್ರಕಲಾ ದಿ॥ ಶ್ರೀ ಗಿರಿಯಪ್ಪ, ಬೆಂಗಳೂರು
✦ ಡಾ. ಮಂಜುನಾಥ ಜಿ., M.S. Ortho, ಬೆಂಗಳೂರು
✦ ಡಾ. ಸಿಂಧುರಾಜ್ ಎಂ.ಎನ್., M.D.,Pediatrician, ಬೆಂಗಳೂರು

ಆರತಕ್ಷತೆ : 21-02-2023ನೇ ಮಂಗಳವಾರ ಸಂಜೆ 7-00 ರಿಂದ
ವಿವಾಹ ಮುಹೂರ್ತ : 22-02-2023ನೇ ಬುಧವಾರ ಬೆಳಿಗ್ಗೆ 9-30 ರಿಂದ 10-25 ರವರೆಗೆ
ವಿವಾಹ ಸ್ಥಳ : ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನ ಶಿರಮಗೊಂಡನಹಳ್ಳಿ ರಸ್ತೆ, ದಾವಣಗೆರೆ.

ವಿಶೇಷ ಸೂಚನೆ :
ಆಹ್ವಾನ ಪತ್ರಿಕೆ ಎಲ್ಲರಿಗೂ ಕಳುಹಿಸಲಾಗಿದ್ದು, ಸಮಯದ ಅಭಾವ ಮತ್ತು ಇತರೆ ಕಾರಣಗಳಿಂದ ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.

ಇವರಿಂದ : ಎನ್.ಬಿ. ನಾಗರಾಜಪ್ಪ
ನಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂಡಿ.
# 3683/1A, 26, 8ನೇ ಕ್ರಾಸ್, ವಾಟರ್ ಟ್ಯಾಂಕ್ ಪಾರ್ಕ್ ಹತ್ತಿರ, ಆಂಜನೇಯ ಬಡಾವಣೆ, ದಾವಣಗೆರೆ -577 004.
ಮೊ. : 94481 78348, 88841 80242



**50 ನೇ ವರ್ಷದ ಚಿರಸ್ಮರಣೆ**



ಜನನ : 03-07-1921
ಮರಣ : 21-02-1973

ಖ್ಯಾತ ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು ಹಾಗೂ ದಾನಿಗಳಾಗಿದ್ದ
**ಲಿಂ॥ ಜಯಣ್ಣ ಎಂ. ಚಿಗಟೇರಿಯವರು**
✦ ಶ್ರೀ ಶಂಕರ ಟೆಕ್ಸ್‌ಟೈಲ್ಸ್ ಮಿಲ್ಸ್ ಮ್ಯಾನೇಜಿಂಗ್ ಡೈರೆಕ್ಟರ್
✦ ಬಾಪೂಜಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಉಪಾಧ್ಯಕ್ಷರು
✦ ದಾವಣಗೆರೆ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರು
✦ ಕರ್ನಾಟಕ ಟೆಕ್ಸ್‌ಟೈಲ್ಸ್ ಮಿಲ್ಸ್ ಅಸೋಸಿಯೇಷನ್‌ನ ಸಂಸ್ಥಾಪಕ ಅಧ್ಯಕ್ಷರು
✦ ಇಂಡಿಯನ್ ಕಾಟನ್ ಮಿಲ್ಸ್ ಫೆಡರೇಷನ್ ಮುಂಬೈನ ಉಪಾಧ್ಯಕ್ಷರು
✦ ಬಸವ ಸಮಿತಿಯ ಸಹ ಸಂಸ್ಥಾಪಕರು
✦ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರ್‌ರಾಜ್ಯ ಆಯುಕ್ತರು
✦ ಮೈಸೂರು ರಾಜ್ಯ ರೋಟರಿ ಕ್ಲಬ್, ದಾವಣಗೆರೆ, ಅಧ್ಯಕ್ಷರು

ಸದಾ ಅವರ ಸ್ಮರಣೆಯಲ್ಲಿರುವ
ಶ್ರೀಮತಿ ಶಾಂತಾ ಶಿವಕುಮಾರ್ ಯಾವಗಲ್
ಶ್ರೀಮತಿ ಶೈಲಜಾ ವೀರಣ್ಣ ಗುಳೇದಗುಡ್ಡ
ಶ್ರೀಮತಿ ಸುಧಾ ಮತ್ತು ಶ್ರೀ ಜಯಪ್ರಕಾಶ್ ಜೆ.ಚಿಗಟೇರಿ
ಶ್ರೀಮತಿ ಸುಕನ್ಯ ಮತ್ತು ಡಾ॥ ಬಸವರಾಜ್ ಪಡಸಲಗಿ
ಶ್ರೀಮತಿ ಸುಮಿತ್ರ ಮತ್ತು ಡಾ॥ ಹೆಚ್.ಎಂ.ತಿಪ್ಪೇಸ್ವಾಮಿ
ಶ್ರೀಮತಿ ಶಿವಲೀಲ ಮತ್ತು ಶ್ರೀ ಪ್ರಭುದೇವ ಚಿಗಟೇರಿ
ಶ್ರೀಮತಿ ಸುರೇಖ ಮತ್ತು ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ಮತ್ತು ಮೊಮ್ಮಕ್ಕಳು, ಮರಿಮೊಮ್ಮಕ್ಕಳು,
ಚಿಗಟೇರಿ ಬಂಧು ಬಳಗದವರು
ಮೊ. : 9448116062, 9845178747, 9844411665

# ಉಕ್ಕಡಗಾತ್ರಿ : ಅಜ್ಜಯ್ಯನ ಜಾತ್ರೆಗೆ ಚಾಲನೆ

## ಸುಕ್ಷೇತ್ರದಲ್ಲಿ ಸ್ವಚ್ಛತೆ ಕಾಪಾಡಿ : ಭಕ್ತರಿಗೆ ನಂದಿಗುಡಿ ಶ್ರೀಗಳ ಮನವಿ



**ಇಂದು ಅಜ್ಜಯ್ಯನ ಮಹಾ ರಥೋತ್ಸವ**

ಮಲೇಬೆನ್ನೂರು, ಫೆ.20- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಒಂದು ವಾರ ಕಾಲ ನಡೆಯಲಿರುವ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ನಂದಿ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದರು.

ನಂತರ ದೀಪ ಬೆಳಗಿಸಿ, ಜಾತ್ರಾ ಮಹೋತ್ಸವದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಸಿದ್ದರಾಮೇಶ್ವರ ಶ್ರೀಗಳು ಆಶೀರ್ವಚನ ನೀಡಿ, ಉಕ್ಕಡಗಾತ್ರಿ ಕ್ಷೇತ್ರ ರಾಜ್ಯದಲ್ಲಿ ಅಷ್ಟೇ ಅಲ್ಲದೆ ಹೊರ ರಾಜ್ಯಗಳಲ್ಲೂ ಸಾಕಷ್ಟು ಭಕ್ತರನ್ನು ಹೊಂದಿದ್ದು, ಅಜ್ಜಯ್ಯನ ಪವಾಡಗಳಿಂದಾಗಿ ಭಕ್ತರ ಕಷ್ಟಗಳು ದೂರವಾಗಿ ಸುಖ-ಶಾಂತಿ-ನೆಮ್ಮದಿಯಿಂದ ಬದುಕುತ್ತಿರುವುದು ಸಂತೋಷದ ವಿಷಯ ಎಂದು ಹೇಳಿದರು.

ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್ ಮಾತನಾಡಿ, ಜಾತ್ರೆ ಸಂದರ್ಭದಲ್ಲಿ ಭಕ್ತರು ಬಟ್ಟೆಗಳನ್ನು ನದಿಗೆ ಹಾಕಬಾರದು. ನಿಂಬೆಹಣ್ಣುಗಳನ್ನು ಕಾಲಿನಿಂದ ತುಳಿಯದೆ ಉಟಕ್ಕೆ ಬಳಸಬೇಕು.ಗುಟ್ಕಾ ಹಾಕಿಕೊಂಡು ಎಲ್ಲೆಂದರಲ್ಲ ಉಗುಳಬೇಡಿ. ಕ್ಷೇತ್ರದಲ್ಲಿ ಸ್ವಚ್ಛತೆ ಕಾಪಾಡಿ ಎಂದು ಮನವಿ ಮಾಡಿದರು.

ಗದ್ದುಗೆ ಟ್ರಸ್ಟ್ ಕಮಿಟಿಯ ಗದಿಗೆಯ್ಯ ಪಾಟೀಲ್, ಪ್ರಕಾಶ್ ಕೋಟೇರ್, ಬಸವನಗೌಡ ಪಾಳೇದ್, ಗದಿಗೆಪ್ಪ ಹೊಸಳ್ಳಿ, ವೀರನಗೌಡ ಹಲಗಪ್ಪರ, ಆನಂದ್ ಪಾಟೀಲ್, ವೀರಭದ್ರಗೌಡ ಕೋಟೇರ್, ಗ್ರಾ.ಪಂ. ಸದಸ್ಯ ಭರಮಗೌಡ ಶಿವಪೂಜೆ, ವಿಷ್ಣುಗೌಡ ಜಿಗಳಿ, ಪರಮೇಶ್ವರಪ್ಪ ಬೇವಿನಹಳ್ಳಿ, ಯುವ ಕಲಾವಿದ ಅಜಯ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಬೆಳಿಗ್ಗೆ ಅಮಾವಾಸ್ಯೆ ಅಂಗವಾಗಿ ಅಜ್ಜಯ್ಯನ ಗದ್ದುಗೆಗೆ ವಿಶೇಷ ಪೂಜೆ, ಅಭಿಷೇಕಗಳನ್ನು ಮಾಡಲಾಯಿತು.

**ಭಕ್ತರ ದಂಡು** : ದೂರದ ಊರುಗಳಿಂದ ಸಾಕಷ್ಟು ಭಕ್ತರು ಸೋಮವಾರವೇ ಕ್ಷೇತ್ರಕ್ಕೆ ಆಗಮಿಸಿದ್ದು, ದೇವಸ್ಥಾನದ ಪ್ರಾಂಗಣ, ವಸತಿ ನಿಲಯಗಳು, ಕಲ್ಯಾಣ ಮಂಟಪಗಳು ಜನರಿಂದ ತುಂಬಿ ತುಳುಕುತ್ತಿದ್ದವು.

ಕೆಲವರು ತುಂಗಭದ್ರಾ ನದಿಯ ನಡುಗಡೆಯಲ್ಲಿ ಬಿಡಾರ ಹಾಕಿ ತಂಗಿದ್ದಾರೆ. ಹರಕೆ ಹೊತ್ತ ಭಕ್ತರು ಮಾಲಾಧಾರಿಗಳಾಗಿ ಕ್ಷೇತ್ರಕ್ಕೆ ಆಗಮಿಸುತ್ತಿದ್ದರು.

**ಇಂದು ರಥೋತ್ಸವ** : ಮಂಗಳವಾರ ಬೆಳಿಗ್ಗೆ 8.30 ಕ್ಕೆ ನಂದಿಗುಡಿ ಶ್ರೀಗಳು ರಥಕ್ಕೆ ಪೂಜೆ ಸಲ್ಲಿಸಿದ ನಂತರ ಅಜ್ಜಯ್ಯ ಮಹಾರಥೋತ್ಸವ ಜರುಗಲಿದೆ.

# ಹಿರಿಯ ಸಾಹಿತಿ ಎನ್.ಟಿ. ಎರ್ರಿಸ್ವಾಮಿ ಅವರ 'ನಮ್ಮೂರ ಪ್ರಪಂಚ' ಪುಸ್ತಕ ಬಿಡುಗಡೆ



ಜಗಳೂರು, ಫೆ.20 - ನಿವೃತ್ತ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಎನ್.ಟಿ. ಎರ್ರಿಸ್ವಾಮಿಯವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರೂ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಶಾಸಕ ಎಸ್. ವಿ. ರಾಮಚಂದ್ರ ಹೇಳಿದರು.

ತಾಲ್ಲೂಕಿನ ಹಾಲೇಹಳ್ಳಿ ಗ್ರಾಮದಲ್ಲಿ ಮಹಾಶಿವರಾತ್ರಿ ಜಾಗರಣೆ ಹಾಗೂ ಎನ್.ಟಿ. ಎರ್ರಿಸ್ವಾಮಿಯವರ 'ನಮ್ಮೂರ ಪ್ರಪಂಚ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬರದ ನಾಡನ್ನು ಹಸಿರು ನಾಡನ್ನಾಗಿ ಮಾಡುತ್ತೇನೆ. ಮುಂದಿನ ತಿಂಗಳು ಇನ್ನೂ 15 ದಿನಗಳಲ್ಲಿ ಭದ್ರಾ ಮೆಲ್ದಂಡೆ ನೀರಾವರಿ ಯೋಜನೆಗೆ ಭೂಮಿ ಪೂಜೆ ಮಾಡಲಾಗುವುದು. ಈ ಯೋಜನೆಯಿಂದ ತೊರೆ ಸಾಲುಭಾಗದ ಗ್ರಾಮಗಳಿಗೆ ಹೆಚ್ಚು ಅನುಕೂಲವಾಗಲಿದೆ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ ಮಾಡಿರುವ ಕೆಲಸವನ್ನು ಜನತೆಗೆ ತಿಳಿಸಬೇಕಾಗಿದೆ ಎಂದರು.

ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ಸಾಹಿತ್ಯ ಕ್ಷೇತ್ರವು ಎಲ್ಲರನ್ನು ಒಂದುಗೂಡಿಸುವಂತ ಕೆಲಸವನ್ನು ಮಾಡುತ್ತದೆ. ಇಲ್ಲಿ ಯಾವುದೇ ಜಾತಿ ಮತ ಧರ್ಮದ ಬೇಧಭಾವ ವಿಲ್ಲದೇ ಎಲ್ಲರೂ ಒಂದೇ ಎಂಬ ಭಾವನೆ ಮೂಡಿಸುತ್ತಿದೆ ಎಂದರು.

ನಿವೃತ್ತ ಪ್ರಾಚಾರ್ಯ ಪ್ರಭಾಕರ್ ಲಕ್ಕೋಳ್ ಮಾತನಾಡಿ, ಎನ್.ಟಿ. ಎರ್ರಿಸ್ವಾಮಿಯವರು ಬ್ಯಾಂಕ್ ನೌಕರರಾದರೂ ಸಹ ಸಾಹಿತ್ಯದ ಕಡೆ ತಮ್ಮನ್ನು ತೊಡಗಿಸಿಕೊಂಡು ಇಂದು 30 ಕ್ಕೂ ಅಧಿಕ ಪುಸ್ತಕಗಳನ್ನು ಹೊರತಂದಿದ್ದಾರೆ. ಇವರ ಕೃತಿಯಲ್ಲಿ ಸಂಸಾರದ ಜಂಜಾಟದ ಬಗ್ಗೆ ಬರೆದಿದ್ದಾರೆ ಎಂದರು.

ಜೆಡಿಎಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಲ್ಲೇರುದ್ರೇಶ್ ಮಾತನಾಡಿ, ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಯಡಿ ತಾಲ್ಲೂಕಿಗೆ ಬರಲು ಇನ್ನೂ 5 ವರ್ಷ ಬೇಕಾಗುತ್ತದೆ. ಒಂದು ವರ್ಷದಲ್ಲಿ ಯಾರು ನೀರು ತರುತ್ತಾರೋ ಅವರನ್ನು ಹೆಗಲ ಮೇಲೆ ಕುರಿಸಿಕೊಂಡು ಮೆರವಣಿಗೆ ಮಾಡುತ್ತೇನೆ ಎಂದರು .

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಮಾಜಿ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಹಂಪಿಯ ವಿರುಪಾಪುರಗಡ್ಡೆ, ಬಿ. ಶಿವರಾಮರೆಡ್ಡಿ, ನಿವೃತ್ತ ಪ್ರಾಚಾರ್ಯರಾದ ಎಂ. ಬಸಪ್ಪ, ನಿವೃತ್ತ ಲೋಕಾಯುಕ್ತ ಉಪ ಪೊಲೀಸ್ ವರಿಷ್ಠಾಧಿಕಾರಿ ಬಿ. ಕಲ್ಲೇಶಪ್ಪ, ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ಬಿ. ದೇವೇಂದ್ರಪ್ಪ, ಕೆಪಿಸಿಸಿಯ ಎಸ್ಟಿ ಘಟಕದ ರಾಜ್ಯಾಧ್ಯಾಕ್ಷ ಕೆ.ಪಿ. ಪಾಲಯ್ಯ, ನಿವೃತ್ತ ಉಪನ್ಯಾಸಕ ಸುಭಾಷ್ ಚಂದ್ರ ಬೋಸ್ ಮಾತನಾಡಿದರು,

ಈ ಸಂಧರ್ಭದಲ್ಲಿ ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಜಿ.ಎಸ್. ಚಿದಾನಂದ, ನಿವೃತ್ತ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಉಜ್ಜಿನಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ ಜಿಲ್ಲಾಧ್ಯಕ್ಷ ಪರಮೇಶ್ವರಪ್ಪ, ಗೀತಾಂಜಲಿಪ್ರಕಾಶನದ ಮೋಹನ್, ಕೂಡ್ಲಿಗಿ ತಾಲ್ಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ರವಿಕುಮಾರ್, ಸಾಹಿತಿ ಎನ್.ಟಿ. ಎರ್ರಿಸ್ವಾಮಿ, ಗ್ರಾಮದ ಮುಖಂಡರಾದ ಪ್ರಹ್ಲಾದ ರೆಡ್ಡಿ, ಮನೋಹರ್ ರೆಡ್ಡಿ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಚನ್ನಗಿರಿ ತಾಲ್ಲೂಕು ಕನ್ನಡ ಭವನಕ್ಕೆ ನಿವೇಶನ



**ಶೀಘ್ರದಲ್ಲೇ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ : ಶಾಸಕ ವಿರೂಪಾಕ್ಷಪ್ಪ ಭರವಸೆ**

**(1ನೇ ಪುಟದಿಂದ)** ಅಂದಾಜು 50 ಲಕ್ಷ ರೂ.ಗಳ ಅವಶ್ಯಕತೆಯಿದ್ದು ಅನುದಾನವನ್ನು ನೀಡಿ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸಬೇಕಾಗಿದೆ ಎಂದು ಕಸಾಪ ಅಧ್ಯಕ್ಷ ಎಲ್.ಜಿ.ಮಧುಕುಮಾರ್ ಮನವಿ ಮಾಡಿದ್ದಾರೆ. ಕಸಾಪ ಪದಾಧಿಕಾರಿಗಳಾದ ಮಾಜಿ ಅಧ್ಯಕ್ಷ ಎಂ.ಯು.ಚನ್ನಬಸಪ್ಪ, ಅಜ್ಜಿಹಳ್ಳಿ ಗ್ರಾಪಂ ಉಪಾಧ್ಯಕ್ಷ ಜಿ. ಎಸ್.ಸಂಗಮ್, ಕಸಾಪ ಕಾರ್ಯದರ್ಶಿ ಮಂಟರಘಟ್ಟ ಬಸವನಗೌಡ, ಹೊದಿಗೆರೆ ಪ್ರಭಾಕರ್, ಕೋಶಾಧ್ಯಕ್ಷ ಬಿ.ಇ.ಸಿದ್ದಪ್ಪ, ಜಿಲ್ಲಾ ಸಹ ಕಾರ್ಯದರ್ಶಿ ಕೆ.ಎಸ್.ವೀರೇಶ ಪ್ರಸಾದ್, ಮಾದೇನಹಳ್ಳಿ ಓಂಕಾರಮೂರ್ತಿ ಮತ್ತಿತರರಿದ್ದರು.


# 24ರಂದು ಕೈದಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮಹಾರಥೋತ್ಸವ

ದಾವಣಗೆರೆ, ಫೆ.20- ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮಹಾರಥೋತ್ಸವ ಇದೇ ದಿನಾಂಕ 24ರಂದು ಬೆಳಿಗ್ಗೆ 7.45 ಗಂಟೆಗೆ ನೆರವೇರಲಿದ್ದು, ದಿನಾಂಕ 25ರಂದು ಸಂಜೆ 5 ಗಂಟೆಗೆ ಶ್ರೀ ಸ್ವಾಮಿಯ ದಿಬ್ಬಣ ಕಾರ್ಯಕ್ರಮ ನಡೆಯಲಿದೆ.

ಅಂದು ಮಧ್ಯಾಹ್ನ 3 ರಿಂದ ಜವಳ ಕಾರ್ಯಕ್ರಮವಿದ್ದು, 6.30ಕ್ಕೆ ಜೋಡಿ ಬಸವಗಳ ಹಾಗೂ ಗ್ರಾಮದ ಟ್ರ್ಯಾಕ್ಟರ್‌ಗಳ ಮೂಲಕ ಮೆರವಣಿಗೆಯೊಂದಿಗೆ ಪಾನಕ ವಿತರಣೆ ನಡೆಯಲಿದೆ. ಸಂಜೆ 9.30ಕ್ಕೆ ಅಗ್ನಿಕುಂಡ ಪೂಜೆ ಮತ್ತು ಓಕಳಿ ಹಾಗೂ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ವೀರಗಾಸೆ. ಮುಂಜಾನೆ 2.30ಕ್ಕೆ ಶ್ರೀ ಸ್ವಾಮಿಯ ನಡೆಮಡಿಯೊಂದಿಗೆ ಅಗ್ನಿಕುಂಡ ಪ್ರವೇಶ ಇರಲಿದೆ.

ನಾಳೆ ದಿನಾಂಕ 22ರ ಸಂಜೆ 6.30 ರಿಂದ ಮತ್ತು ಫೆ. 23 ರಂದು ಬೆಳಿಗ್ಗೆ7.30 ರಿಂದ ಉತ್ತರಭಾದ್ರ ನಕ್ಷತ್ರದಲ್ಲಿ ಗೋದೂಳಿ ಉತ್ಸವದೊಂದಿಗೆ ಮತ್ತು ಗಜ ಉತ್ಸವದೊಂದಿಗೆ ಬನ್ನಿ ಮಂಟಪ ಪೂಜೆ, ರಾತ್ರಿ 10.30ಕ್ಕೆ ರಥದ ಕಳಸ ಪ್ರತಿಷ್ಠಾಪನಾ ಕಾರ್ಯಕ್ರಮ. ರಾತ್ರಿ 11 ರಿಂದ ಶ್ರೀ ಸ್ವಾಮಿಯ ರಥಕ್ಕೆ ಅರಿಶಿಣ ಎಣ್ಣೆ ಧಾರಣೆ ನಡೆಯಲಿದೆ.

# ಮಲೇಬೆನ್ನೂರಿನಲ್ಲಿ 24ಕ್ಕೆ ಬಸವೇಶ್ವರ ತೇರು



ಮಲೇಬೆನ್ನೂರು ಪಟ್ಟಣದ ಆರಾಧ್ಯದೈವ ಶ್ರೀ ಬಸವೇಶ್ವರ ದೇವರ ರಥೋತ್ಸವವು ಇದೇ ದಿನಾಂಕ 24ರ ಶುಕ್ರವಾರ ಸಂಜೆ 4.30ಕ್ಕೆ ಜರುಗಲಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಹಾಗೂ ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

ಇಂದು ರಾತ್ರಿ 9 ಗಂಟೆಗೆ ಶ್ರೀ ಮಹಾಗಣಪತಿ ಪೂಜೆಯೊಂದಿಗೆ ಕಂಕಣಧಾರಣೆ ನೆರವೇರಲಿದೆ.ನಾಳೆ ಬುಧವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಮಹಾಗಣಪತಿ ಪೂಜೆ, ರುದ್ರಾಭಿಷೇಕ, ಸಣ್ಣ ಉತ್ಸವಕ್ಕೆ ಅಲಂಕಾರ, ಬಲಿದಾನ ಹಾಗೂ ಉತ್ಸವ ನಡೆಯಲಿದೆ.

ದಿನಾಂಕ 23ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಪೂಜೆ, ರುದ್ರಾಭಿಷೇಕದ ನಂತರ ಸಣ್ಣ ಉತ್ಸವ ಮತ್ತು ರಾತ್ರಿ 9ಕ್ಕೆ ರಥಕ್ಕೆ ಕಳಸಾರೋಹಣ ಮಾಡಲಾಗುವುದು.

ದಿನಾಂಕ 24ರ ಶುಕ್ರವಾರ ಬೆಳಿಗ್ಗೆ ಎಂದಿನಂತೆ ಪೂಜೆ, ರುದ್ರಾಭಿಷೇಕ, ಸಣ್ಣ ಉತ್ಸವ, ಬೆಳಿಗ್ಗೆ 9ಕ್ಕೆ ರಥಕ್ಕೆ ತೈಲಾಭಿಷೇಕ, ಮಧ್ಯಾಹ್ನ 12ಕ್ಕೆ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ, ಸಂಜೆ 4.30ಕ್ಕೆ ಪಟ್ಟಣದ ಎಲ್ಲಾ ದೇವರುಗಳ ಸಮ್ಮುಖದಲ್ಲಿ ಶ್ರೀ ಬೀರಲಿಂಗೇಶ್ವರ ಕಾರ್ಣಿಕ ಹಾಗೂ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ಜರುಗಲಿದೆ.

ದಿನಾಂಕ 25ರ ಶನಿವಾರ ಬೆಳಿಗ್ಗೆ 6 ಗಂಟೆಗೆ ವಿವಿಧ ಪೂಜೆ, 10 ಗಂಟೆಯಿಂದ ಸಂಜೆಯವರೆಗೆ ಜವಳ, ದಿಂಡು ಉರುಳು ಸೇವೆ, ರಾತ್ರಿ 8ಕ್ಕೆ ಓಕುಳಿ ನಂತರ ದೇವರುಗಳನ್ನು ಆಯಾ ದೇವಸ್ಥಾನಗಳಿಗೆ ಬೀಳ್ಕೊಡುವ ಮೂಲಕ ಜಾತ್ರೆಗೆ ತೆರೆ ಎಳೆಯಲಾಗುವುದು ಎಂದು ಕೆ.ಜಿ.ಪರಮೇಶ್ವರಪ್ಪ ಹೇಳಿದರು.

# ನಂದಿತಾವರೆಯಲ್ಲಿ ನಾಡಿದ್ದು ಬಸವಣ್ಣನ ತೇರು




ನಂದಿತಾವರೆ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವವು ನಾಡಿದ್ದು ದಿನಾಂಕ 23ರ ಗುರುವಾರ ರಾತ್ರಿ ಜರುಗಲಿದೆ. ಇಂದು ಬೆಳಿಗ್ಗೆ 8.30ಕ್ಕೆ ಶ್ರೀ ನಂದಿ ಪಟದೊಂದಿಗೆ ಉತ್ಸವ ಮೂರ್ತಿಗೆ ಆನೆ ಉತ್ಸವ ಇರುತ್ತದೆ. ರಾತ್ರಿ ಸ್ವಾಮಿಗೆ ಎಣ್ಣೆ, ಅರಿಶಿಣ ಶಾಸ್ತ್ರ ಮಾಡಲಾಗುವುದು. ನಾಳೆ ಬುಧವಾರ ಬೆಳಿಗ್ಗೆ 5 ರಿಂದ 7 ಗಂಟೆವರೆಗೆ ರುದ್ರಾಭಿಷೇಕ 8.30ಕ್ಕೆ ಕುದುರೆ ಉಚ್ಛಾಯ, ರಾತ್ರಿ 9.30ಕ್ಕೆ ಮಹಾರಥಕ್ಕೆ ಕಳಸಧಾರಣೆ ನೆರವೇರಿಸಲಾಗುವುದು.

ದಿನಾಂಕ 23ರ ಗುರುವಾರ ಬೆಳಿಗ್ಗೆ 5 ರಿಂದ 7 ಗಂಟೆವರೆಗೆ ಶ್ರೀ ಬಸವೇಶ್ವರ ದೇವರಿಗೆ ವಾಸನದ ಜಿ.ನಂದಿಗೌಡ್ರು ಕುಟುಂಬದಿಂದ ರುದ್ರಾಭಿಷೇಕ, ನಂತರ 9.30ಕ್ಕೆ ಸುರಗಿ ನೀರು ಹಾಗೂ ಜಿಗಳಿಯ ಗೌಡ್ರ ವಂಶಸ್ಥರಿಂದ ಬಾಸಿಂಗ ಧಾರಣೆ, 10.30 ರಿಂದ ಕಿವಿ ಚುಚ್ಚುವುದು, ಶಸ್ತ್ರ, ಹರಕೆ ಕಾರ್ಯಕ್ರಮಗಳು ನಡೆಯಲಿವೆ. ಇದೇ ದಿನ ರಾತ್ರಿ 12.30ಕ್ಕೆ ಶ್ರೀ ಬಸವೇಶ್ವರ ಸ್ವಾಮಿ ಮಹಾರಥೋತ್ಸವವು ಜರುಗಲಿದೆ.

ದಿನಾಂಕ 24ರ ಶುಕ್ರವಾರ ಬೆಳಿಗ್ಗೆ ರುದ್ರಾಭಿಷೇಕದ ನಂತರ ಜವಳ, ಸಂಜೆ ದೊಡ್ಡಬಂಡಿ ಪ್ರದರ್ಶನ, ರಾತ್ರಿ ಹರಿಸೇವೆ, ಓಕಳಿ, ಕಂಕಣ ವಿಸರ್ಜನೆಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ. ರಾತ್ರಿ 10 ಗಂಟೆಗೆ ರಸಮಂಜರಿ ಕಾರ್ಯಕ್ರಮವನ್ನು ಗ್ರಾಮದ ಯುವಕರು ಸೇರಿ ಹಮ್ಮಿಕೊಂಡಿದ್ದಾರೆ.

## ಜಿ.ಸಿ. ಕೊಟ್ರೇಶ್ ನಿಧನ




ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಗುಮ್ಮನೂರು ಗ್ರಾಮದ ವಾಸಿ,

**ಜಿ.ಸಿ. ಕೊಟ್ರೇಶ್**

ಇವರು ದಿನಾಂಕ 20.02.2023ರ ಸೋಮವಾರ ಮಧ್ಯಾಹ್ನ 3.00ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 21.02.2023ರ ಮಂಗಳವಾರ ಬೆಳಿಗ್ಗೆ 12.30 ಗಂಟೆಗೆ ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಗುಮ್ಮನೂರು ಗ್ರಾಮದ ಮೃತರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ - ಮೊ : 98443 84263, 78924 37878**

## ಕೈಲಾಸ ಶಿವಗಣಾರಾಧನೆ



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ ವಾಸಿ

**ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು**

ಮಾಡುವ ವಿಜ್ಞಾಪನೆಗಳು.

ನನ್ನ ಪೂಜ್ಯ ಪತಿಯವರಾದ

**ಶ್ರೀ ಡಿ.ವಿ. ರುದ್ರಪ್ಪನವರು**

(ಪಿಡಬ್ಲ್ಯೂಡಿ ನಿವೃತ್ತ ಇಂಜಿನಿಯರ್, ಮಹಾರಾಷ್ಟ್ರ)

ದಿನಾಂಕ 17.02.2023ರ ಶುಕ್ರವಾರ ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 21.02.2023ರ ಮಂಗಳವಾರ ಬೆಳಿಗ್ಗೆ 11.30ಕ್ಕೆ**

**ನಿವೃತ್ತ ನೌಕರರ ಸಭಾ ಭವನ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ**

ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ **ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು.**

**ಮೊ. 98814-03747, 94813-59044**

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

# ರೂಪಾ-ಸಿಂಧೂರಿ ವರ್ತನೆಗೆ ಸಿಎಂ ಗರಂ

**(1ನೇ ಪುಟದಿಂದ)** ಬೀದಿಗೆ ಬಂದು, ಸರ್ಕಾರದ ಮಾನ, ಮರ್ಯಾದೆ ಹರಾಜು ಆಗುತ್ತಿದೆ ಎಂದು ತಮ್ಮ ಆಪ್ತ ಸಚಿವರ ಬಳಿ ಅಸಮಾಧಾನ ತೋಡಿಕೊಂಡಿರುವ ಮುಖ್ಯಮಂತ್ರಿಯವರು, ಇಬ್ಬರ ಬಗ್ಗೆ ಯಾವ ಶಿಸ್ತಿನ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಹಿರಿಯ ಸಚಿವರಿಂದ ಮಾಹಿತಿ ಪಡೆದಿದ್ದಾರೆ.

ವಿಧಾನಸಭೆಯ ಅಧಿವೇಶನ ಆರಂಭವಾಗುವುದಕ್ಕೂ ಮುನ್ನವೇ ಇಬ್ಬರೂ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ತುರ್ತು ತನಿಖೆ ನಡೆಸಿ ವರದಿ ನೀಡುವಂತೆ ಮುಖ್ಯಕಾರ್ಯದರ್ಶಿ ಯವರಿಗೆ ಆದೇಶಿಸಿದ್ದರು.

ಇದರ ಬೆನ್ನಲ್ಲೇ ಮುಖ್ಯ ಕಾರ್ಯದರ್ಶಿಯವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಮೊದಲನೇ ಅರ್ಧ ದಿನ, ಮಧ್ಯಾಹ್ನದ ನಂತರ ಡಿ. ರೂಪಾ ಅವರನ್ನು ವಿಧಾನ ಸೌಧದ ತಮ್ಮ ಕಚೇರಿಗೆ ಕರೆಸಿಕೊಂಡು ಅವರ ಬೀದಿ ಜಗಳದ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ, ಎಚ್ಚರಿಕೆ ನೀಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪರಸ್ಪರ ದೂರುಗಳಿದ್ದರೆ ಸಂಬಂಧಪಟ್ಟವರಿಗೆ ಲಿಖಿತ ಹೇಳಿಕೆ ನೀಡಿ, ಕ್ರಮಕ್ಕೆ ಒತ್ತಾಯಿಸುವ ಬದಲು ಮಾಧ್ಯಮಗಳಲ್ಲಿ ನಿಮ್ಮ ಜಗಳವನ್ನು ಬೀದಿಗೆ ತಂದಿರುವುದು ಸರಿಯಲ್ಲ ಎಂದು ಮುಖ್ಯಕಾರ್ಯದರ್ಶಿಯವರು ಖಾರವಾಗಿ ಹೇಳಿದ್ದಾರೆ ಎಂದು ಇದೇ ಮೂಲಗಳು ತಿಳಿಸಿವೆ.

ಭಾರೀ ಪ್ರಭಾವಿಗಳಾದ ಈ ಇಬ್ಬರೂ ಹಿರಿಯ ಅಧಿಕಾರಿಗಳು ಮುಖ್ಯಕಾರ್ಯದರ್ಶಿಯವರ ಭೇಟಿ ಸಂದರ್ಭದಲ್ಲಿ ಒಬ್ಬರಿಗೊಬ್ಬರು ದೂರಿನ ಸರಮಾಲೆಯನ್ನಿಟ್ಟು ಸೇವೆಯಿಂದ ಅಮಾನತ್ತು ಮಾಡುವಂತೆ ಮತ್ತು ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿಕೊಂಡಿದ್ದಾರೆ ಎನ್ನಲಾಗಿದೆ.

ರೋಹಿಣಿ ಮತ್ತು ರೂಪಾ ಅವರು ಎರಡನೇ ದಿನವಾದ ಇಂದೂ ಕೂಡಾ ಜಾಲತಾಣಗಳಲ್ಲಿ ವಾಕ್ಸಮರ ಮುಂದುವರೆಸುವುದರ ಜೊತೆಗೆ ಮಾಧ್ಯಮಗಳ ಮುಂದೆಯೂ ಹೇಳಿಕೆ ನೀಡಿದ್ದಾರೆ.

ಮುಖ್ಯಕಾರ್ಯದರ್ಶಿಯವರ ಹೇಳಿಕೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರೋಹಿಣಿ ಅವರು, ಐಪಿಎಸ್ ಅಧಿಕಾರಿ ರೂಪಾ ಅವರಿಗೆ ಮಾನಸಿಕ ಚಿಕಿತ್ಸೆ ಅಗತ್ಯವಿದೆ ಎಂದು ನನ್ನ ವಿವರಣೆ ಸಂದರ್ಭದಲ್ಲಿ ತಿಳಿಸಿದ್ದೇನೆ ಎಂದಿದ್ದಾರೆ.

ಆಕೆ ಮಾಡಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ. ನನ್ನನ್ನು ತೇಜೋ ವಧೆ ಮಾಡುವ ಮತ್ತು ಮಾಧ್ಯಮಗಳಲ್ಲಿ ಬಿಂಬಿಸಿಕೊಳ್ಳಲು ಇಂತಹ ಆರೋಪ ಮಾಡುತ್ತಿದ್ದಾರೆ ಎಂದು ದಾಖಲೆ ಸಮೇತ ಮುಖ್ಯಕಾರ್ಯದರ್ಶಿಯವರಿಗೆ ನೀಡಿದ್ದೇನೆ.

ರೂಪಾ ಅವರು ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ನಾವು ಅಧಿಕಾರಿಗಳು ಮಾಧ್ಯಮದ ಮುಂದೆ ಬರಬಾರದು ಎಂಬ ನಿಯಮವಿದೆ. ಆದರೆ ಅವರು ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ ಎಂದರು.

ಅವರ ಕಾರ್ಯವ್ಯಾಪ್ತಿಯೇ ಬೇರೆ, ವೈಯಕ್ತಿಕ ಜೀವನದ ಬಗ್ಗೆ ಮಾತನಾಡಿದ್ದಾರೆ. ಅವರು ನನ್ನ ಮೇಲೆ ಮಾಡಿರುವ ಎಲ್ಲಾ ಆರೋಪಗಳಿಗೂ ಮುಖ್ಯಕಾರ್ಯದರ್ಶಿಯವರಿಗೆ ಸ್ಪಷ್ಟೀಕರಣ ನೀಡಿದ್ದೇನೆ ಎಂದರು.

ತದನಂತರ ಮುಖ್ಯಕಾರ್ಯದರ್ಶಿಯವರನ್ನು ಭೇಟಿ ಮಾಡಿದ ರೂಪಾ ಅವರು, ಸಿಂಧೂರಿ ಅವರು ಸರ್ಕಾರಿ ಆಡಳಿತವನ್ನು ತಮ್ಮ ಪತಿ ಹಾಗೂ ಮಾವನ ರಿಯಲ್ ಎಸ್ಟೇಟ್‌ಗೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಕೆಲವು ದಾಖಲೆ ಸಮೇತ ಮಾಹಿತಿ ನೀಡಿದ್ದಾರೆ.

ತಮ್ಮ ಕುಟುಂಬದ ರಿಯಲ್ ಎಸ್ಟೇಟ್‌ಗೆ ಅನುಕೂಲ ಮಾಡಿಕೊಡಲು ಹಿರಿಯ ಅಧಿಕಾರಿಗಳನ್ನು ಬಳಕೆ ಮಾಡಿಕೊಂಡಿದ್ದಾರೆ. ಇವರು ಅಧಿಕಾರದಲ್ಲಿದ್ದ ಕಡೆ ಎಲ್ಲವೂ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಿವೆ. ಈ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ಮುಖ್ಯಕಾರ್ಯದರ್ಶಿಯವರನ್ನು ಭೇಟಿ ಮಾಡುವುದಕ್ಕೂ ಮುನ್ನ ರೂಪಾ ಅವರು ರೋಹಿಣಿ ಚಿತ್ರವನ್ನು ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ರೋಹಿಣಿ ಅವರು ಡಿಲೀಟೆಡ್ ನಗ್ನ ಚಿತ್ರಗಳ ಬಗ್ಗೆ ಮಾತನಾಡುತ್ತಾರಾ? ಎಂದು ಪ್ರಶ್ನಿಸಿದ ರೂಪಾ, ಈ ಚಿತ್ರಗಳನ್ನು ಅಧಿಕಾರಿಗಳಿಗೆ ಕಳುಹಿಸಿ ತಮ್ಮ ಮೇಲಿ ರುವ ಭ್ರಷ್ಟಾಚಾರ ಆರೋಪಗಳ ತನಿಖೆ ಯಿಂದ ಮುಕ್ತರಾಗಲು ಯತ್ನಿಸಿದ್ದಾರೆ ಎಂದು ಬಲವಾಗಿ ಆರೋಪಿಸಿದ್ದಾರೆ.

ತಮ್ಮ ಫೇಸ್‌ಬುಕ್‌ನಲ್ಲಿ ಮೇಸೆಜ್ ಡೀಲಿಟ್ ಆಗಿರುವ ಚಿತ್ರಗಳ ಸ್ಕ್ರೀನ್‌ಸ್ಯಾಟ್ ಹಂಚಿಕೊಂಡಿರುವ ರೂಪಾ, ಈ ಚಿತ್ರಗಳ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿ ಎಂದು ಸಿಂಧೂರಿ ಅವರನ್ನು ಪ್ರಶ್ನಿಸಿದ್ದಾರೆ.

# ಹಗರಣಗಳು ಲೋಕಾಯುಕ್ತ ತನಿಖೆಗೆ

**(1ನೇ ಪುಟದಿಂದ)** ಬಾಬ್ತುಗಳಿಂದ ಬರಬೇಕಾದ ತೆರಿಗೆ ಸಂಗ್ರಹಕ್ಕೆ ವಿಶೇಷ ಗಮನ ಹರಿಸಿದ್ದರಿಂದ ರಾಜಸ್ವ ಸಂಗ್ರಹದಲ್ಲಿ ಹೆಚ್ಚಳ ಕಂಡುಬಂದಿದೆ.

ಆದರೆ ನೀವು ಕಾಂಗ್ರೆಸ್‌ನವರು ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮೀಷನ್ ಆರೋಪ ಹೊರಿಸಿ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಕಾಲದ ಎಲ್ಲ ಹಗರಣಗಳು ತನಿಖೆಯಿಂದ ಬಯಲಾಗಲಿ ಎಂದರು.

ರಾಜ್ಯಪಾಲರ ಭಾಷಣದಲ್ಲಿ ತಿಳಿಸಿರುವ ಸಂಗತಿಗಳನ್ನು ಬಲವಾಗಿ ಸಮರ್ಥಿಸಿಕೊಂಡ ಅವರು, ರಾಜ್ಯಪಾಲರು ಸತ್ಯ ಮತ್ತು ವಾಸ್ತವಾಂಶದ ಆಧಾರದ ಮೇಲೆ ಭಾಷಣ ಮಾಡಿದ್ದಾರೆ. ರಾಜಕಾರಣ ಇದರಲ್ಲಿ ಇಲ್ಲ ಎಂದು ಪ್ರತಿಪಕ್ಷಗಳ ಟೀಕೆಗಳಿಗೆ ತಿರುಗೇಟು ನೀಡಿದರು.

ಕೋವಿಡ್, ಪ್ರವಾಹದಂತಹ ಸವಾಲುಗಳ ನಡುವೆಯೂ ಕರ್ನಾಟಕ ಸರ್ಕಾರ ಕಳೆದ ಆರ್ಥಿಕ ವರ್ಷದಲ್ಲಿ ವಿವಿಧ ಮೂಲಗಳಿಂದ ಹದಿನೈದು ಸಾವಿರ ಕೋಟಿ ರೂ.ಗೂ ಹೆಚ್ಚು ತೆರಿಗೆ ಸಂಗ್ರಹಿಸಿರುವುದು ರಾಜ್ಯದ ಆರ್ಥಿಕ ಚಕ್ರ ಮೇಲ್ಮುಖವಾಗಿರುವುದಕ್ಕೆ ಕನ್ನಡಿ ಎಂದರು.

# ಅವತರಣೆಯೇ ನಿಜವಾದ ಶಿವರಾತ್ರಿ

**(1ನೇ ಪುಟದಿಂದ)** ನಡೆಯಬೇಕು. ಎಲ್ಲರೂ ಶಿವನನ್ನು ಅರ್ಥೈಸಿಕೊಂಡು ನೆನೆಯುತ್ತಾ ಶಿವಯೋಗಿಗಳಾಗಿ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ದಾರುಕೇಶ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಲಿಂಗ ಸೇರಿದಂತೆ ಪೂಜಾ ಸಾಮಗ್ರಿಗಳನ್ನು ಕೊಟ್ಟು, 1008 ದಂಪತಿಗಳಿಂದ ಒಂದೇ ಸ್ಥಳದಲ್ಲಿ ಪೂಜೆ ಮಾಡಿಸುದು ಇದೊಂದು ಅಭೂತಪೂರ್ವ ಕಾರ್ಯಕ್ರಮವಾಗಿದೆ ಎಂದರು.

ಹೆಬ್ಬಾಳು ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ ಲಿಂಗಪೂಜೆ ನೆರವೇರಿಸಿ, ಆಶೀರ್ವಚನ ನೀಡಿದರು. ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ ಅತಿಥಿಗಳನ್ನು ಸ್ವಾಗತಿಸಿದರು. ಮಹಾನಗರ ಪಾಲಿಕೆ ಮಾಜಿ ಮೇಯರ್ ಬಿ.ಜಿ ಅಜಯ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಚಾರಕ ದೇವಾಲಯಗಳ ಸಂವರ್ಧನಾ ಸಮಿತಿ ರಾಜ್ಯ ಸಂಯೋಜಕ ಮನೋಹರ್ ಮಠದ್ ಉಪಸ್ಥಿತರಿದ್ದರು.

ಆರಂಭದಲ್ಲಿ ಸಂಗೀತ ಶಿಕ್ಷಕ ಅಜಯ್ ನಾರಾಯಣ ಪ್ರಾರ್ಥಿಸಿದರು. ಇಷ್ಟಲಿಂಗ ಪೂಜೆಯ ನಂತರ ಡೊಳ್ಳು ಕುಣಿತ, ಸ್ಯಾಕ್ಸೋಫೋನ್, ವೀಣಾ ವಾದನ, ಚೌಡಿಕೆ, ಭರತನಾಟ್ಯ, ಭಜನೆ, ಸಾಮೂಹಿಕ ನೃತ್ಯ, ಭಕ್ತಿಗೀತೆ ಗಾಯನ ಸಂಸ್ಕೃತಿ ಕಾರ್ಯಕ್ರಮಗಳು ನಡೆದವು.

# ಕಾನೂನು ತರಬಹುದೇ? ಸುಪ್ರೀಂ ಪ್ರಶ್ನೆ

**(1ನೇ ಪುಟದಿಂದ)** ಎಂಬುದನ್ನು ನ್ಯಾಯಮೂರ್ತಿಗಳು ನಿರ್ಧರಿಸಬಹುದು ಎಂದರು.

ಸಮಾನತೆ ಇರಬೇಕು ಎಂದು ವಕೀಲ ಅಶ್ವಿನಿ ಉಪಾಧ್ಯಾಯ್ ಅರ್ಜಿ ದಾಖಲಿಸಿದ್ದಾರೆ. ಈ ಅರ್ಜಿಗೆ ಆಕ್ಷೇಪಿಸಿರುವ ಹಿರಿಯ ವಕೀಲ ಕಪಿಲ್ ಸಿಬಾಲ್, ಈ ಬಗ್ಗೆ ಸರ್ಕಾರ ನಿರ್ಧರಿಸಬೇಕು. ವ್ಯಕ್ತಿಗತ ಅರ್ಜಿಗಳಿಗೆ ಮಾನ್ಯತೆ ನೀಡಬಾರದು. ಸರ್ಕಾರ ಈ ವಿಷಯ ಕೈಗೆತ್ತಿಕೊಳ್ಳುವುದಾದರೆ ಯಾವುದೇ ಆಕ್ಷೇಪವಿಲ್ಲ ಎಂದಿದ್ದಾರೆ.

ಉಪಾಧ್ಯಾಯ್ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಗೋಪಾಲ ಶಂಕರನಾರಾಯಣನ್, ವ್ಯಕ್ತಿಗತ ಅರ್ಜಿಗಳಿಗೆ ಈ ಹಿಂದೆಯೂ ಅವಕಾಶ ನೀಡಲಾಗಿದೆ. ಮುಸ್ಲಿಮ್ ಮಹಿಳೆಯೊಬ್ಬರು ಲಿಂಗ ತಟಸ್ಥವಾದ ವೈಯಕ್ತಿಕ ಕಾನೂನು ಬಯಸಿ ಅರ್ಜಿ ದಾಖಲಿಸಿದ್ದರು. ನ್ಯಾಯಾಂಗ ಕೆಲ ಮಟ್ಟಿಗಿನ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಹೇಳಿದರು. ಈ ಬಗ್ಗೆ ನಾಲ್ಕು ವಾರಗಳ ನಂತರ ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

## ನ್ಯಾಮತಿ ನುಚ್ಚಿನ ಕಮಲಮ್ಮ ನಿಧನ



ಹೊನ್ನಾಳಿ ತಾಲ್ಲೂಕು ನ್ಯಾಮತಿ ಗ್ರಾಮದ ವಾಸಿ, ದಿ. ನುಚ್ಚಿನ ಷಣ್ಮುಖಪ್ಪನವರ ಪತ್ನಿ ಶ್ರೀಮತಿ ನುಚ್ಚಿನ ಕಮಲಮ್ಮ (89) ಅವರು ದಿನಾಂಕ 20.02.2023ರ ಸೋಮವಾರ ರಾತ್ರಿ 8 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.02.2023ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮವಾದ ಹೊನ್ನಾಳಿ ತಾಲ್ಲೂಕು ನ್ಯಾಮತಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಸರೋಜಮ್ಮ ನಿಧನ



ದಾವಣಗೆರೆ ವಿನಾಯಕ ಬಡಾವಣೆ ವಾಸಿ, ಕಂದಗಲ್ಲು ದಿ.ಕುಬೇರಪ್ಪ ಅವರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ (78) ಅವರು ದಿನಾಂಕ 20.02.2023ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.02.2023ರ ಮಂಗವಾರ ಬೆಳಿಗ್ಗೆ 11 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಬಾಡಾ ಮಂಜುನಾಥ್ ನಿಧನ



ದಾವಣಗೆರೆ ತಾಲ್ಲೂಕು ಬಾಡಾ ಗ್ರಾಮದ ವಾಸಿ ಮಂಜುನಾಥ್ (52) ಇವರು ದಿನಾಂಕ: 20-2-2023 ರ ಸೋಮವಾರ ಬೆಳಿಗ್ಗೆ 9ಕ್ಕೆ ನಿಧನರಾದರು. ತಾಯಿ, ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 21-2-2023 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ಬಾಡಾದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಹಣವನ್ನು ರಾಜ್ಯಗಳಿಗೆ ಕೊಡಲಾಗದು

**(1ನೇ ಪುಟದಿಂದ)** ಷೇರುಗಳ ಮೌಲ್ಯ ಕುಸಿತವಾಗಿದ್ದನ್ನು ಉಲ್ಲೇಖಿಸಿದ್ದ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಉದ್ಯೋಗಿಗಳ ಹಣವನ್ನು ಷೇರು ಪೇಟೆಯ ವಶಕ್ಕೆ ಕೊಡಲಾಗದು ಎಂದಿದ್ದರು. ಪ್ರಸಕ್ತ ಎನ್.ಪಿ. ಎಸ್. ಹಣವನ್ನು ಷೇರುಪೇಟೆಯಲ್ಲಿ ಹೂಡಿಕೆ ಮಾಡಲಾಗುತ್ತಿದೆ.

ಈ ಹಣವನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕು. ಈ ಹಣ ವರ್ಗಾಯಿಸದೇ ಹೋದರೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸುತ್ತೇವೆ ಎಂದು ಗೆಹ್ಲೋಟ್ ತಿಳಿಸಿದ್ದರು.

ಒಂದು ರಾಜ್ಯ ಇ.ಪಿ.ಎಫ್.ಒ. (ಭವಿಷ್ಯ ನಿಧಿ) ನಲ್ಲಿರುವ ಹಣ ತನಗೆ ಕೊಡಿ ಎಂದು ಕೇಳಬಹುದು. ಆ ರೀತಿಯ ನಿರೀಕ್ಷೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ. ಇದರ ಮೇಲೆ ಉದ್ಯೋಗಿಗಳಿಗೆ ಹಕ್ಕಿದೆ ಎಂದು ಸಚಿವೆ ಸೀತಾರಾಮನ್ ತಿಳಿಸಿದ್ದಾರೆ.

ಠೇವಣಿ ಮಾಡಿರುವ ಹಣ ಬಡ್ಡಿ ಪಡೆಯುತ್ತಿದೆ. ನಿವೃತ್ತಿಯ ನಂತರ ಈ ಹಣವನ್ನು ಉದ್ಯೋಗಿಗಳಿಗೆ ನೀಡುವ ಬಗ್ಗೆ ಸ್ಪಷ್ಟತೆ ಇದೆ. ಈ ಹಣವನ್ನು ಸರ್ಕಾರದ ಕೈಗೆ ನೀಡಲು ಸಾಧ್ಯವಿಲ್ಲ ಎಂದವರು ತಿಳಿಸಿದ್ದಾರೆ.

ಕೆಲ ರಾಜ್ಯಗಳು ಹಳೆಯ ಪಿಂಚಣಿ ಪದ್ಧತಿ ಅಳವಡಿಸಿಕೊಳ್ಳುತ್ತಿರುವುದು ಒಳ್ಳೆಯದಲ್ಲ. ಇತರೆ ರಾಜ್ಯಗಳೂ ಸಹ ಹಳೆಯ ಪಿಂಚಣಿ ಪದ್ಧತಿಯ ಬೇಡಿಕೆ ಇಡುತ್ತಿವೆ ಎಂದು ಹಣಕಾಸು ಕಾರ್ಯದರ್ಶಿ ಜೋಶಿ ಹೇಳಿದ್ದಾರೆ. ರಾಜ್ಯ ಸರ್ಕಾರಗಳು ತಮ್ಮ ಹೊಣೆಗಾರಿಕೆಯನ್ನು ಮುಂದೂಡುತ್ತಿವೆ. ಈ ರಾಜ್ಯಗಳು ಎನ್.ಪಿ.ಎಸ್. ಹಣವನ್ನು ಕೇಳುತ್ತಿವೆ. ಆದರೆ, ರಾಜ್ಯಗಳಿಗೆ ಈ ಹಣ ನೀಡಲಾಗದು ಎಂದು ಕಾನೂನು ಸ್ಪಷ್ಟವಾಗಿ ತಿಳಿಸುತ್ತದೆ ಎಂದವರು ತಿಳಿಸಿದ್ದಾರೆ.

# ವಿದ್ಯಾರ್ಥಿಗಳು ಸೆಲೆಬ್ರಿಟಿಗಳ ಜೀವನ ಶೈಲಿ ಅನುಕರಣೆ ಮಾಡುತ್ತಿರುವುದು ವಿಷಾದನೀಯ

## ತುರ್ಚಘಟ್ಟದ ಗುರುಕುಲದ ವಾರ್ಷಿಕೋತ್ಸವದಲ್ಲಿ ನ್ಯಾಯಾಧೀಶರಾದ ವಿಜಯಾನಂದ



ದಾವಣಗೆರೆ, ಫೆ. 20- ಇಂದಿನ ವಿದ್ಯಾರ್ಥಿಗಳು ಸೆಲೆಬ್ರಿಟಿಗಳನ್ನು ತಮ್ಮ ಆದರ್ಶ ವ್ಯಕ್ತಿಗಳನ್ನಾಗಿ ಮಾಡಿಕೊಂಡು ಅವರ ಜೀವನ ಶೈಲಿಯನ್ನು ಅನುಕರಣೆ ಮಾಡುತ್ತಿರುವುದು ವಿಷಾದನೀಯ ಎಂದು ನ್ಯಾಯಾಧೀಶರಾದ ವಿಜಯಾನಂದ ತಿಳಿಸಿದರು.

ಸಮೀಪದ ತುರ್ಚಘಟ್ಟದ ಶ್ರೀ ಗುರುಕುಲ ಸಿಬಿಎಸ್‌ಇ ವಸತಿಯುತ ಶಾಲೆಯಲ್ಲಿ ನಡೆದ 14 ನೇ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿಶೇಷ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು. ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅವರಿಗೆ ಕೃಷಿ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಪರಿಗಣಿಸಿ, ಶ್ರೀ ಗುರುಕುಲ ವರ್ಷದ ವ್ಯಕ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿದ್ಯಾಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಭವ್ಯ ಮೇಘರಾಜ್ ಅಧ್ಯಕ್ಷತೆ ವಹಿಸಿದ್ದರು. ಚನ್ನಗಿರಿ ಪಿಎಸ್‌ಐ ಮೇಘರಾಜ್ ಹಾಗೂ ಪ್ರಾಂಶುಪಾಲ ಜಿ. ಬಸವರಾಜ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

# ವಿದ್ಯಾರ್ಹತೆ ನೋಡಿ ಯಾರೂ ಮತ ಕೊಡಲ್ಲ : ಸುಪ್ರೀಂ

ನವದೆಹಲಿ, ಫೆ. 20 – ಭಾರತದಲ್ಲಿ ಯಾರೂ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆ ನೋಡಿ ಮತ ಚಲಾಯಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಉತ್ತರ ಪ್ರದೇಶದ ಬಿಜೆಪಿ ಶಾಸಕ ಹರ್ಷ ವರ್ಧನ್ ಬಾಜಪೇಯಿ ಅವರು ತಮ್ಮ ಶೈಕ್ಷಣಿಕ ಅರ್ಹತೆ ಬಗ್ಗೆ ತಪ್ಪು ಮಾಹಿತಿ ನೀಡುವ ಮೂಲಕ ಚುನಾವಣಾ ಅಕ್ರಮ ಮಾಡಿದ್ದಾರೆ. ಅವರನ್ನು ಅನರ್ಹಗೊಳಿಸಬೇಕು ಎಂದು ದಾಖಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ.

ಮತದಾರರು ಮತ ಚಲಾಯಿಸುವುದಕ್ಕೆ ಮುಂಚೆ ಅಭ್ಯರ್ಥಿಯ ಶೈಕ್ಷಣಿಕ ಹಿನ್ನೆಲೆಯನ್ನು ಪರಿಗಣಿಸುವುದಿಲ್ಲ. ನಮ್ಮ ದೇಶದಲ್ಲಿ ಶೈಕ್ಷಣಿಕ ಅರ್ಹತೆ ನೋಡಿ ಯಾರೂ ಮತ ಚಲಾಯಿಸುವು ದಿಲ್ಲ ಎಂದು ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಮೌಖಿಕವಾಗಿ ಟಿಪ್ಪಣಿ ಮಾಡಿದೆ.

ಕಾಂಗ್ರೆಸ್‌ನ ಅನುಗ್ರಹ್ ನಾರಾಯಣ್ ಸಿಂಗ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಸರಿಯಾದ ಶೈಕ್ಷಣಿಕ ಅರ್ಹತೆ ಪ್ರಕಟಿಸದ ಕಾರಣ ಬಾಜಪೇಯಿ ಅವರ ಆಯ್ಕೆ ಅಸಿಂಧುಗೊಳಿಸಬೇಕು ಎಂದು ಕೋರಿದ್ದರು.

ಸೆಪ್ಟೆಂಬರ್ 2022ರಲ್ಲಿ ಅಲಹಾಬಾದ್ ಹೈಕೋರ್ಟ್ ಸಿಂಗ್ ಅರ್ಜಿಯನ್ನು ತಳ್ಳಿ ಹಾಕಿತ್ತು. ಬಾಜಪೇಯಿ ಅವರ ಅವಧಿ ಈಗಾಗಲೇ ಅಂತ್ಯಗೊಂಡಿರುವ ಕಾರಣ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಅಲ್ಲದೇ, ಅಕ್ರಮದ ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದೂ ಹೈಕೋರ್ಟ್ ಹೇಳಿತ್ತು.

# ಭೌತಿಕ ಸಂಪತ್ತಿಗಿಂತ ಬೌದ್ಧಿಕ ಸಂಪತ್ತಿನ ದಾಹ ಶ್ರೇಷ್ಠ

## ಗಂಗನರಸಿಯ ಧಾರ್ಮಿಕ ಸಭಾದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ



ಹರಿಹರ, ಫೆ.20- ಮಾನವ ಕುಲದ ಭಯಶೋಕಗಳಿಗೆ ಭೌತಿಕ ಸಂಪತ್ತಿನ ದಾಹವೇ ಕಾರಣವಾಗಿದ್ದು, ಇದರ ಬದಲಾಗಿ ಬೌದ್ಧಿಕ ಸಂಪತ್ತನ್ನು ಅರಸಿ ಹೋದಲ್ಲಿ ಆನಂದ ಪ್ರಾಪ್ತಿಯಾಗುತ್ತದೆ ಎಂದು ಹಿರಿಯ ಪತ್ರಕರ್ತ ಹೆಚ್. ಬಿ.ಮಂಜುನಾಥ್ ಅಭಿಪ್ರಾಯ ಪಟ್ಟರು.

ಹರಿಹರ ತಾಲ್ಲೂಕು ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹರಿಹರ ಹಾಗೂ ಕೆ.ಆರ್.ನಗರ ವಲಯದ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಏರ್ಪಾಡಾಗಿದ್ದ ಸಾಮೂಹಿಕ ಶ್ರೀ ಮಹಾಲಕ್ಷ್ಮಿ ಪೂಜಾ ಧಾರ್ಮಿಕ ಸಭೆಯ ಮುಖ್ಯ ಉಪನ್ಯಾಸಕರಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಲಕ್ಷ್ಮಿ ಎಂದರೆ ಐಹಿಕ ಸಂಪತ್ತು ಎಂದು ಭಾವಿಸುವವರೇ ಹೆಚ್ಚು. ಆದರೆ, ಲಕ್ಷ್ಮಿಯನ್ನು ಜ್ಞಾನ ಸಂಪತ್ತಿನ ಪ್ರದಾತೆ ಎಂಬುದಾಗಿ ಭಾವಿಸಿ, ಪೂಜಿಸಿದಲ್ಲಿ ನಮ್ಮಲ್ಲಿನ ಮೋಹವು ದೂರಾಗುತ್ತದೆ.

ಐಹಿಕ ಸಂಪತ್ತು ಇಲ್ಲವಾದಾಗ ದುಃಖವಾಗುತ್ತದೆ. ಅದು ಬಂದಾಗ ಚೋರ, ಭಯ, ತೆರಿಗೆ ಭಯ ಉಂಟಾಗುತ್ತದೆ. ಮೋಹವು ದೂರಾದಾಗ ಭಯ ಶೋಕಗಳು ಇಲ್ಲವಾಗುತ್ತವೆ. ಭಯಶೋಕಗಳು ದೂರವಾದಾಗ ಆನಂದ ಪ್ರಾಪ್ತಿಯಾಗುತ್ತದೆ. ಈ ಆನಂದ ಪ್ರಾಪ್ತಿಗೋಸ್ಕರವೇ ಲಕ್ಷ್ಮಿ ಪೂಜೆಯೆಂದು ಭಾವಿಸಿ ಮಾಡಿದಲ್ಲಿ ಸಾರ್ಥಕ್ಯ ಹೆಚ್ಚು ಎಂದು ಅವರು ಸ್ವಾರಸ್ಯಕರ ಉದಾಹರಣೆಗಳ ಸಹಿತ ಹೇಳಿದರು.

ವೇದ ಕಾಲದಿಂದಲೂ ಸ್ತ್ರೀಶಕ್ತಿಗೆ ಪ್ರಾಶಸ್ತ್ಯ ಕೊಟ್ಟ ಭಾರತದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗೂ ಸೃಷ್ಟಿ, ಸ್ಥಿತಿ ಲಯಕಾರಕ ಸಾಮರ್ಥ್ಯಗಳು ಅವರ ಹೆಂಡತಿಯರಿಂದಲೇ ಪ್ರಾಪ್ತವಾಗಿದ್ದು, ಎಂದರಲ್ಲದೇ, ಗ್ರಾಮದ ಅಭಿವೃದ್ಧಿಯಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದರು.

ಗ್ರಾಮಾಭಿವೃದ್ಧಿ ಯೋಜನಾ ಟ್ರಸ್ಟಿನ ಹಿರಿಯ ಜಿಲ್ಲಾ ನಿರ್ದೇಶಕರಾದ ವಿಜಯ ಕುಮಾರ ನಾಗನಾಳ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ದಿವ್ಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದ ಹರಪನಹಳ್ಳಿ ತಾಲ್ಲೂಕು ನಿಚ್ಚವ್ವನಹಳ್ಳಿ ಬೃಹನ್ಮಠದ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ, ಆರ್ಥಿಕ ಸಬಲತೆಯೊಂದಿಗೆ ಸಂಸ್ಕೃತಿಯ ಸಬಲತೆ ಹಾಗೂ ಸಮೃದ್ಧತೆಯೂ ಅತ್ಯವಶ್ಯ, ಪೋಷಕರು ಮೊಬೈಲ್ ಕಡೆ ಗಮನ ಕೊಡದೇ, ಮಕ್ಕಳ ಓದಿನ ಕಡೆ ಗಮನ ಕೊಡಬೇಕು. ಸಮಾನತೆಯಲ್ಲಿ ಬಾಳುತ್ತಾ ಸಮಗ್ರವಾಗಿ ವಿಚಾರ ಮಾಡುವ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದರು.

ಧರ್ಮದರ್ಶಿ ಮಲ್ಲಿಕಾರ್ಜುನಯ್ಯನವರ ಅಧ್ಯಕ್ಷತೆಯಲ್ಲಿ ಯೋಜನಾಧಿಕಾರಿ ಗಣಪತಿ ಮಾಳಂಜೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಲ್ಲಿಕಾರ್ಜುನಪ್ಪ ಸ್ವಾಗತಿಸಿದರು. ಬಿ. ಮೃತ್ಯುಂಜಯ ನಿರೂಪಿಸಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಜನಜಾಗೃತಿ ವೇದಿಕೆಯ ಶುಭಾ, ಸುಧಾ, ಕೊಂಡಜ್ಜಿಯ ಹನುಮಂತಪ್ಪ, ಮಠದ ನಾಗೇಂದ್ರಪ್ಪ, ಹೊನ್ನಪ್ಪ, ಬಣಕಾರ್ ಮಹದೇವಪ್ಪ, ರುದ್ರಗೌಡ್ರು, ಅಣ್ಣಪ್ಪ, ಅಖಿಲ್ ಸಾಬ್, ಸವಿತಾ, ನಾಗರಾಜ, ಆನಂದಪ್ಪ, ಭಾರತೀ ಮುಂತಾದವರು ಭಾಗವಹಿಸಿದ್ದರು.

ಪತ್ರಕರ್ತ ಹಾಗೂ ಕಲಾವಿದ ಅಣ್ಣಪ್ಪ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

# ಮಕ್ಕಳ ಕಲ್ಯಾಣ: ಪೊಲೀಸ್ ಅಧಿಕಾರಿಗಳಿಗೆ ತರಬೇತಿ



ದಾವಣಗೆರೆ, ಫೆ.20- ಜಿಲ್ಲಾ ಪೊಲೀಸ್, ಮಕ್ಕಳ ವಿಶೇಷ ಪೊಲೀಸ್ ಘಟಕದಿಂದ ಜಿಲ್ಲಾ ಪೊಲೀಸ್ ಕಛೇರಿಯ ಸಭಾಂಗಣದಲ್ಲಿ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳಿಗೆ ಒಂದು ದಿನದ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಬಾಲ ನ್ಯಾಯ ಮಂಡಳಿಯ ಅಧ್ಯಕ್ಷರ, 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಟಿ.ಎಂ. ನಿವೇದಿತಾ ಕಾರ್ಯಾಗಾರ ಉದ್ಘಾಟಿಸಿದರು.

ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ. ಬಸರಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀಮತಿ ಪೂರ್ಣಿಮಾ ಎಂ., ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರಾಮಾನಾಯ್ಕ, ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ ಭಾಗವಹಿಸಿದ್ದರು.

ಮಕ್ಕಳ ನ್ಯಾಯ ಕಾಯ್ದೆ-2015, ನಿಯಮ 2016 ಪ್ರಕರಣ ನಿರ್ವಹಣೆ ಮತ್ತು ಮಕ್ಕಳ ವಿಶೇಷ ಪೊಲೀಸ್ ಘಟಕದ ನಿರ್ವಹಣೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ 2006, ಲೈಂಗಿಕ ಅಪ ರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿ ಯಮ (ಪೋಕ್ಸೋ) 2012, ಮಕ್ಕಳು ಕಾಣೆಯಾದ ಪ್ರಕರಣಗಳಲ್ಲಿ ಪ್ರಾಮಾಣಿಕ ನಿರ್ವಹಣಾ ಪ್ರಕ್ರಿಯೆ, ಮಕ್ಕಳ ಸಾಗಾಣಿಕೆ ಮತ್ತು ಮಕ್ಕಳ ಬಿಕ್ಷಾಟನೆ ವಿಷಯಗಳಿಗೆ ಸಂಬಂಧಿಸಿ ದಂತೆ ಕಾರ್ಯಾಗಾರದಲ್ಲಿ ತರಬೇತಿ ನೀಡಲಾಯಿತು.

ಪೊಲೀಸ್ ತರಬೇತುದಾರರಾದ ರೋಹಿತ್ ಸಿ.ಜಿ. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

# ವಿಧಾನಸಭಾಧ್ಯಕ್ಷರ ರಾಜೀನಾಮೆಗೆ ವೀರಶೇವ ಮಹಾಸಭಾ ಒತ್ತಾಯ

ದಾವಣಗೆರೆ, ಫೆ. 20- ವಿಧಾನಸಭೆಯ ಸಭಾಧ್ಯಕ್ಷ ಸ್ಥಾನದ ಘನತೆ, ಗೌರವಕ್ಕೆ ಧಕ್ಕೆ ತಂದಿರುವ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಭಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ಪ್ರತಿಭಟನಾಕಾರರು, ಕಾಗೇರಿಯವರು ಸಭಾಧ್ಯಕ್ಷ ಸ್ಥಾನಕ್ಕೆ ತಕ್ಕನಾಗಿ ನಡೆದುಕೊಳ್ಳದೇ ಪಕ್ಷದ ವಕ್ತಾರರಂತೆ ವರ್ತಿಸಿರುವುದು ಅಕ್ಷಮ್ಯ ಅಪರಾಧವಾಗಿದೆ. ಸಜ್ಜನ ರಾಜಕಾರಣಿ ಈಶ್ವರ ಖಂಡ್ರೆ ಅವರನ್ನು ಉದ್ದೇಶಿಸಿ ಲಘುವಾಗಿ ಮಾತನಾಡಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಯಾವುದೋ ದುರುದ್ದೇಶವನ್ನಿಟ್ಟುಕೊಂಡು ಸಭಾಧ್ಯಕ್ಷರು ವರ್ತಿಸುವುದು ಸರಿಯಲ್ಲ. ವಿಧಾನಸಭೆ ಚುನಾವಣೆ ಸಮೀಪ ವಿರುವ ಸಂದರ್ಭದಲ್ಲಿ ಒಬ್ಬ ನಾಯಕನಿಗೆ ಅಪಮಾನ ಮಾಡಿರುವುದನ್ನು ಪ್ರಜ್ಞಾವಂತ ಸಮಾಜ ಒಪ್ಪುವುದಿಲ್ಲ. ಸಭಾಧ್ಯಕ್ಷರ ಗೌರವ ಉಳಿಯಬೇಕಾದರೆ ಸಂವಿಧಾನದ ಆಶಯಗಳಿಗೆ ಬದ್ಧರಾಗಿ ನಡೆದುಕೊಳ್ಳುವ ರಾಜಕಾರಣಿ ಆಗಿದ್ದರೆ ಕಾಗೇರಿ ಅವರು ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಒಂದು ವೇಳೆ ರಾಜೀನಾಮೆ ನೀಡದೇ ಇದ್ದರೆ ಅವರನ್ನು ತತ್ವ, ನಿಷ್ಠೆ ಇಲ್ಲದ ರಾಜಕಾರಣಿ ಎಂದು ಭಾವಿಸಬೇಕಾಗುತ್ತದೆ. ಅಲ್ಲದೇ ಇಂತಹ ವರ್ತನೆ ಸರಿಪಡಿಸಿಕೊಳ್ಳದಿದ್ದರೆ ಮಹಾಸಭಾದಿಂದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಹಾಸಭಾದ ಪದಾಧಿಕಾರಿಗಳಾದ ಶಂಭು ಉರೇಕೊಂಡಿ, ಬಿ.ಜೆ. ರಮೇಶ್, ಕೆ.ಜಿ. ಶಿವಕುಮಾರ್, ಬಸವಕುಮಾರ್, ಕೊರಟಕೆರೆ ಶಿವಕುಮಾರ್, ಅಣಬೇರು ಸಂದೀಪ್, ಆಲೂರು ಅಜಿತ್, ಶಿವು, ಗೀತಾ ಚಂದ್ರಶೇಖರ್, ಸುಷ್ಮಾ ಪಾಟೀಲ್, ಹೇಮಂತ್, ಯಶೋಧ, ಪ್ರಕಾಶ್, ಮಂಜುಳಾ, ಕರೇಶಿವಪ್ಪ ಸಿದ್ದೇಶ್ ಮತ್ತಿತರರಿದ್ದರು.

## ಜಿ.ಬೇವಿನಹಳ್ಳಿ : ಇಂದು ನೇತ್ರ ಪರೀಕ್ಷಾ ಶಿಬಿರ

ಮಲೇಬೆನ್ನೂರು ಸಮೀಪದ ಜಿ.ಬೇವಿನಹಳ್ಳಿ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಬಳಿ ಇಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ದೃಷ್ಟಿ ಕಣ್ಣಿನ ಆಸ್ಪತ್ರೆ, ಚಿತ್ರದುರ್ಗ ಇವರ ವತಿಯಿಂದ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

# ಐತಿಹಾಸಿಕ ನಾಟಕಗಳು ನಮ್ಮ ಸಂಸ್ಕೃತಿ, ಪರಂಪರೆಯ ಮಹತ್ವ ಪರಿಚಯಿಸುತ್ತವೆ



ರಾಣೇಬೆನ್ನೂರು, ಫೆ.20- ಐತಿಹಾಸಿಕ ನಾಟಕಗಳು ನಮ್ಮ ಸಂಸ್ಕೃತಿ, ಪರಂಪರೆಯ ಮಹತ್ವವನ್ನು ಇಂದಿನ ಪೀಳಿಗೆಗೆ ಮನಮುಟ್ಟುವಂತೆ ಪರಿಚಯಿಸುತ್ತವೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದ ಎಸ್‌ಜೆಎಂವಿ ಮಹಿಳಾ ಕಾಲೇಜಿನ ಆವರಣದಲ್ಲಿ ಭಾನುವಾರ ಸಂಜೆ ಆಯೋಜಿಸಲಾಗಿದ್ದ ಸಾಣೇಹಳ್ಳಿಯ ಶಿವಸಂಚಾರ ನಾಟಕೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು. 12ನೇ ಶತಮಾನದ ಘಟನಾವಳಿಗಳನ್ನು ನಾಟಕಗಳನ್ನು ಪ್ರಸ್ತುತಪಡಿಸುತ್ತಿರುವ ಸಾಣೇಹಳ್ಳಿ ಶ್ರೀಗಳ ಕಾರ್ಯ ಶ್ಲಾಘನೀಯವಾಗಿದೆ. ಮೂರು ದಿನಗಳ ನಡೆಯಲಿರುವ ನಾಟಕಗಳನ್ನು ಜನರು ವೀಕ್ಷಣೆ ಮಾಡುವ ಮೂಲಕ ಶ್ರೀಗಳ ಶ್ರಮ ಸಾರ್ಥಕಗೊಳಿಸಬೇಕು ಎಂದರು.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು.


ಬಸವರಾಜ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಶಿವಪ್ಪ ನಂದಿಹಳ್ಳಿ, ಜಟ್ಟೆಪ್ಪ ಕರೇಗೌಡ್ರ, ಮಂಜುನಾಥ ಗೌಡಶಿವಣ್ಣನವರ, ಜಿ.ಬಿ.ಮಾಸಣಗಿ ಮತ್ತಿತರರಿದ್ದರು. ಶಿವ ಸಂಚಾರದ ಕಲಾವಿದರು ಪ್ರದರ್ಶಿಸಿದ ಬಿಜ್ಜಳ ನ್ಯಾಯ ನಾಟಕ ಸಭಿಕರ ಮನಸೂರೆಗೊಂಡಿತು.

## ಕುರುವತ್ತಿ ಬಸವೇಶ್ವರ ರಥೋತ್ಸವ

(1ನೇ ಪುಟದಿಂದ) ನಿರ್ಬಂಧಿಸಲಾಗಿದ್ದರಿಂದ ಈ ವರ್ಷ ಜಾತ್ರೆ ಬಹಳ ಅದ್ಧೂರಿಯಾಗಿ ಜರುಗಿತು. ಮುಜರಾಯಿ ಇಲಾಖೆಯ ಕಾರ್ಯ ನಿರ್ವಹ ಣಾಧಿಕಾರಿ ಬಿ.ಎಂ. ಕೃಷ್ಣಪ್ಪ, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಹ ಣಾಧಿಕಾರಿ ಎಸ್. ಎಸ್. ಪ್ರಕಾಶ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ನಗರದಲ್ಲಿ ನಾಡಿದ್ದು ಸಿದ್ಧ ಕಣ್ಣಿನ ಹನಿ

ದಾವಣಗೆರೆ, ಫೆ.20 - ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 23ರ ಗುರುವಾರ



ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

# ದೇವರಾಜ ಅರಸು ಬಡಾವಣೆಯಲ್ಲಿ ಛತ್ರಪತಿ ಶಿವಾಜಿ ಜಯಂತ್ಯೋತ್ಸವ



ದಾವಣಗೆರೆ, ಫೆ. 20- ನಗರದ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್, 9ನೇ ಕ್ರಾಸ್‌ನಲ್ಲಿ ಈಚೆಗೆ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸ್ನೇಹಜೀವಿ ಸೇವಾ ಟ್ರಸ್ಟ್ ಅಧ್ಯಕ್ಷ ಆರ್.ಎಸ್. ರಾಜು, ಕಾರ್ಯದರ್ಶಿಗಳಾದ ಶ್ರೀಧರ್ ಘೋರ್ಪಡೆ, ಎನ್. ಪ್ರಕಾಶ್, ಜಿ.ಕೆ. ಕೃಷ್ಣ, ಹೆಚ್. ಸುರೇಶ್, ಯು. ಹಾಲೇಶ್, ಎಸ್.ಟಿ.ಪಿ. ತಿಪ್ಪೇಶ್, ಗಂಗಾಧರ್ ಅಂಗಡಿ, ಜಯಂತ್, ಕೆ.ಎಂ. ವೀರಯ್ಯ, ಮಂಜುನಾಥ್, ಉಮೇಶ್, ಕಾಂಗ್ರೆಸ್ ಮುಖಂಡರು, ಮಂಜಣ್ಣ ಕಂಬಳಿ, ಕಿರಣ್ ಬಾಳೆಹೊಲದ ಉಪಸ್ಥಿತರಿದ್ದರು.

## ವಿವಿಧ ವೃತ್ತಿಗಳ ಅಪ್ರೆಂಟಿಶಿಪ್ ತರಬೇತಿ

ಚನ್ನಗಿರಿ, ಫೆ. 20 - ಟೊಯೋಟಾ ಕಿರ್ಲೋಸ್ಕರ್ ಕಂಪನಿ ಲಿಮಿಟೆಡ್ ವತಿಯಿಂದ ಇದೇ ದಿನಾಂಕ 28 ರಂದು ಚನ್ನಗಿರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಿವಿಧ ವೃತ್ತಿಗಳ ಅಪ್ರೆಂಟಿಶಿಪ್ ತರಬೇತಿಗಾಗಿ ಐ.ಟಿ.ಐ ಉತ್ತೀರ್ಣರಾಗಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ವಿವರಕ್ಕೆ 08189-295009 ಮತ್ತು 9844710844ನ್ನು ಸಂಪರ್ಕಿಸಲು ಚನ್ನಗಿರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ತರಬೇತಿ ಅಧಿಕಾರಿ ತಿಳಿಸಿದ್ದಾರೆ.

## ಡ್ರೋನ್ ಪಿಂಚಣಿ

(1ನೇ ಪುಟದಿಂದ) ಅಧ್ಯಕ್ಷರಾದ ಸರೋಜ ಅಗರ್ವಾಲ್ ಅವರು ಆನ್‌ಲೈನ್ ಮೂಲಕ ಡ್ರೋನ್ ಖರೀದಿಸಿದ್ದರು. ನಮ್ಮ ಪಂಚಾಯ್ತಿ ವ್ಯಾಪ್ತಿಯ ಭುಟ್ಕಪಾದ ಹಳ್ಳಿ ದಟ್ಟ ಅರಣ್ಯದಲ್ಲಿದೆ. ಸತ್ನಾಮಿ ಹುಟ್ಟಿನಿಂದಲೇ ವಿಕಲಚೇತನರಾಗಿದ್ದು, ನಡೆಯಲು ಸಾಧ್ಯವಾಗುವುದಿಲ್ಲ ಎಂದು ಅಗರ್‌ವಾಲ್ ಹೇಳಿದ್ದಾರೆ.

ಬೇರೆ ದೇಶಗಳಲ್ಲಿ ಡ್ರೋನ್ ಮೂಲಕ ಸರಕುಗಳನ್ನು ರವಾನಿಸುವುದನ್ನು ನೋಡಿದ್ದೆ. ಹೀಗಾಗಿ ನಾವೂ ಸಹ ಡ್ರೋನ್ ಮೂಲಕ ಪಿಂಚಣಿಯನ್ನು ಮನೆ ಬಾಗಿಲಿಗೆ ಕಳಿಸುವ ವ್ಯವಸ್ಥೆ ಮಾಡಿದ್ದೇವೆ ಎಂದು ಅಗರ್‌ವಾಲ್ ತಿಳಿಸಿದ್ದಾರೆ. ಡ್ರೋನ್ ಮೂಲಕ ಸೇವೆ ಸಲ್ಲಿಸಲು ಸರ್ಕಾರಿ ಯೋಜನೆಯಲ್ಲಿ ಅವಕಾಶ ಇಲ್ಲ. ಅಗರ್‌ವಾಲ್ ಅವರು ತಾವೇ ಮುಂದಾಗಿ ಈ ಯೋಜನೆ ಕೈಗೊಂಡಿದ್ದಾರೆ ಎಂದು ನೌಪಾದ ಬಿ.ಡಿ.ಒ. ಸುಬದರ್ ಪ್ರಧಾನ್ ತಿಳಿಸಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಕಿಶೋರ್‌ಕುಮಾರ್ ಆರ್. ಮತ್ತು ಶ್ರೀಮತಿ ಸ್ನೇಹ ಎಂ.ಆರ್.** ಇವರು **ನಾರಾಯಣ ಟಿ. ಬಿನ್ ತಿಮ್ಮಪ್ಪ ಎನ್.ರೇವಣ್ಣಕರ್** ದಾವಣಗೆರೆ ಇವರಿಂದ ದಾವಣಗೆರೆ ತಾಲ್ಲೂಕು ಹಿರಿಯ ಉಪ ನೋಂದಣಾಧಿಕಾರಿಗಳ ಕಛೇರಿ ವ್ಯಾಪ್ತಿಯ ಒಳಪಟ್ಟ ದಾವಣಗೆರೆ ಸಿಟಿ 5ನೇ ವಾರ್ಡ್, 10ನೇ ಎ ಡಿವಿಜನ್, ವಿನೋಬನಗರದ ಪಶ್ಚಿಮ ದಿಕ್ಕಿನ ಕಡೆಗೆ ಬರತಕ್ಕ ಕಣದ ಪ್ರದೇಶದಲ್ಲಿನ ಸೈಟುಗಳ ಪೈಕಿ ಸೈಟ್ ನಂ.72 ಇದರ ಡೋರ್ ನಂ 1922/3, ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ. 1922/3ಸಿ, ಇದರ ಅಳತೆ 50*100=5000 ಚ.ಅಡಿ. (ಪೂರ್ವದಿಂದ ಪಶ್ಚಿಮಕ್ಕೆ 50 ಅಡಿ, ಉತ್ತರದಿಂದ ದಕ್ಷಿಣಕ್ಕೆ 100 ಅಡಿವುಳ್ಳ ಪೂರ್ತಿ ನಿವೇಶನದಲ್ಲಿ ಪಶ್ಚಿಮ ಭಾಗದ ಕಡೆಗೆ ಓಡಾಡಲು (ದಾರಿಗಾಗಿ) ಪೂ–ಪ 10ಅಡಿ, ಉ–ದ 100ಅಡಿ ಜಾಗವನ್ನು ಬಿಟ್ಟಿದ್ದು, ಉಳಿದ 40*100=4000 ಚ.ಅಡಿ ನಿವೇಶನದ ಪೈಕಿ ನಾನು ಈ ಹಿಂದೆ ಕ್ರಯಕ್ಕೆ ಪಡೆದ ಮಧ್ಯ ಭಾಗದ ಅಳತೆ 40*20=800 ಚ.ಅಡಿ (ಪೂ–ಪ 40ಅಡಿ, ಉ–ದ 20ಅಡಿ) ವುಳ್ಳ ನಿವೇಶನದ ಚದರಿ ನಿವೇಶನಕ್ಕೆ ನಗರ ಭೂಮಾಪನ ಕಛೇರಿಯ ವಿಭಾಗ ಸಂಖ್ಯೆ:09, ಸಿಟಿ ಸರ್ವೆ ನಂ.1475, ಸವಿಸ್ತಾರ ನಕಾಶೆ ಸಂಖ್ಯೆ 170 ಹಿಡುವಳಿ ಹಕ್ಕು ಟೆನ್ಯೂರ್ 'ಎ' ವುಳ್ಳ ಸೊತ್ತಗಿರುತ್ತದೆ.

ಈ ರೀತಿ ಇರುವ 20*40=800 ಚ.ಅಡಿವುಳ್ಳ ಖಾಲಿ ನಿವೇಶನಕ್ಕೆ **ಚೆಕ್ಕುಬಂದಿ: ಪೂರ್ವಕ್ಕೆ:** ಬಾಳೇಹೊಲದ ಮಹೇಶ್ವರಪ್ಪ ಇವರ ಸ್ವತ್ತು, **ಪಶ್ಚಿಮಕ್ಕೆ:** ಇದೇ ಸೈಟ್ ನಂ.ನಲ್ಲಿ ಓಡಾಡಲು ಬಿಟ್ಟಿರುವ 10 ಅಡಿ ಅಗಲದ ಪ್ಯಾಸೇಜ್, **ಉತ್ತರಕ್ಕೆ:** ಗಂಗಾಧರ ಅಡಾಪ ಬಿನ್ ಬಸಪ್ಪ ಇವರ ಸ್ವತ್ತು, **ದಕ್ಷಿಣಕ್ಕೆ:** ವಿದ್ಯಾಧರ ಬಿನ್ ಗೋವಿಂದ್ ಮತ್ತು ಟಿ.ಚೌಡಪ್ಪ ಬಿನ್ ತಿಪ್ಪೇರುದ್ರಪ್ಪ ಇವರ ಸ್ವತ್ತು.

ಮೇಲ್ಕಂಡ ಜಾಗವನ್ನು ನಮ್ಮ ಕಕ್ಷಿದಾರರು ಖರೀದಿಸಲು ಇಚ್ಛೆಸಿದ್ದು, ಯಾರಾದರೂ ಹಕ್ಕು, ತಂಟೆ, ತಕರಾರು, ಬೋಜಾ ಯಾವುದಾದರು ಇದ್ದಲ್ಲಿ ಈ ನೋಟಿಸ್ ಪ್ರಕಟಣೆಗೊಂಡ 7 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಒಂದೊಮ್ಮೆ ಯಾವುದೇ ತಕರಾರು ಬಾರದಿದ್ದಲ್ಲಿ ಮುಂದೆ ನಮ್ಮ ಕಕ್ಷಿದಾರರು ಖರೀದಿ ಪತ್ರವನ್ನು ನೊಂದಾಯಿಸಿಕೊಳ್ಳುವವರಿದ್ದು, ನಂತರ ಬಂದ ತಕರಾರುಗಳು ನಮ್ಮ ಕಕ್ಷಿದಾರರಿಗೆ ಬಾದಿಸುವುದಿಲ್ಲ ಅಂತ ಕೊಟ್ಟ ಸಾರ್ವಜನಿಕ ಪ್ರಕಟಣೆ.

**ಕಿಶೋರ್‌ಕುಮಾರ್ ಆರ್. ಕಕ್ಷಿದಾರ, ದಾವಣಗೆರೆ. ಮೊ: 9964526127**

**ಸದಾಶಿವ ಎಸ್.ಎನ್. ವಕೀಲರು, ದಾವಣಗೆರೆ. ಮೊ: 9743905218**



## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **1ನೇ ರುದ್ರಪ್ಪ ಬಿನ್ ಲೇಟ್ ನಿಂಗಪ್ಪ, ವಯಸ್ಸು 75 ವರ್ಷ ಹಾಗೂ 2ನೇ ಸರ್ವಕ್ಕ ಕೋಂ ರಾಮಪ್ಪ, ಬಿನ್ ಪಕ್ಕೀರಪ್ಪ, ವಯಸ್ಸು 70 ವರ್ಷ, ಈರ್ವರ ವಾಸ : ಹಳೇ ಕುಂದವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ** ವಾಸಿಗಳು ಕೊಟ್ಟ ಮಾಹಿತಿ ಮೇರೆಗೆ ಅವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಈ ಕೆಳಕಂಡ ಷೆಡ್ಯೂಲ್ ಸ್ವತ್ತು ನನ್ನ ಕಕ್ಷಿದಾರರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಅಂದರೆ ನನ್ನ ಕಕ್ಷಿದಾರರುಗಳ ತಾಯಿಗಳ ತಂದೆ ಆಸ್ತಿಯಾಗಿರುತ್ತದೆ. ನನ್ನ ಕಕ್ಷಿದಾರರುಗಳ ತಾಯಿಗಳ ತಂದ ಬಾಳೆ ಗಂಗಪ್ಪ ನನ್ನ ಕಕ್ಷಿದಾರರ ಪೂರ್ವಜರಾಗಿರುತ್ತಾರೆ. ಸದರಿ ಬಾಳೆ ಗಂಗಪ್ಪನವರಿಗೆ ಗಂಡು ಸಂತತಿ ಇರಲಿಲ್ಲ. ಅಂದರೆ ನಾಲ್ಕು ಜನ ಹೆಣ್ಣು ಮಕ್ಕಳು ಅವರೆಂದರೆ, **1) ಗೌರಮ್ಮ 2) ಸಣ್ಣನಿಂಗಮ್ಮ, 3) ತುಂಗಮ್ಮ, 4) ಗಂಗಮಾಳಮ್ಮ. ಸಣ್ಣ ನಿಂಗಮ್ಮ ನನ್ನ 1ನೇ ಕಕ್ಷಿದಾರರ ತಾಯಿಯಾಗುತ್ತಾರೆ. ಗಂಗಮಾಳಮ್ಮ ನನ್ನ 2ನೇ ಕಕ್ಷಿದಾರರ ತಾಯಿಯಾಗಿರುತ್ತಾರೆ. ಹೀಗಾಗಿ ಬಾಳೆ ಗಂಗಪ್ಪನವರಿಗೆ ನನ್ನ ಕಕ್ಷಿದರಾರು ಮೊಮ್ಮಕ್ಕಾಳಗಬೇಕು.**

ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಬಾಳೆ ಗಂಗಪ್ಪನವರ ಕಾಲದಿಂದಲೂ ಬಾಳೆ ಗಂಗಪ್ಪನ ವಾರಸುದಾರರು ಜಂಟಿಯಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಈ ವಿಷಯ ಗೊತ್ತಿದ್ದರೂ ನನ್ನ ಕಕ್ಷಿದಾರರಿಗೆ ತಿಳಿಯದಂತೆ ನನ್ನ ಕಕ್ಷಿದಾರರುಗಳ ತಾಯಿ ಸಹೋದರಿ ತುಂಗಮ್ಮನ ಮಗನಾದ ಹೆಚ್ .ಬಿ.ಕರಿಬಸಪ್ಪನವರು ಷೆಡ್ಯೂಲ್ ಸ್ವತ್ತಿನಲ್ಲಿ ಬಾಳೆ ಗಂಗಪ್ಪನ ದತ್ತು ಮಗನೆಂದು ಸುಳ್ಳು ಹೇಳಿ ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಖಾತೆಯನ್ನು ಹೆಚ್.ಬಿ.ಕರಿಬಸಪ್ಪ ದತ್ತು ತಂದೆ ಬಾಳೆ ಗಂಗಪ್ಪ ಎಂದು ಖಾತೆ ಸೃಷ್ಟಿಸಿ ಕೊಂಡಿರುತ್ತಾರೆ. ಈ ವಿಷಯ ನನ್ನ ಕಕ್ಷಿದಾರರಿಗೆ ತಿಳಿದು, ಆ ಕುರಿತು ಕರಿಬಸಪ್ಪನವರನ್ನು ಪ್ರಶ್ನಿಸಿದಾಗ ಇಲ್ಲಸಲ್ಲದ ಸಬೂಬು ಹೇಳುತ್ತಾ ಬಂದಿರುತ್ತಾರೆ. ನನ್ನ ಕಕ್ಷಿದಾರರ ಅಜ್ಜನಾದ ಬಾಳೆ ಗಂಗಪ್ಪನವರು ಯಾರನ್ನೂ ಸಹ ದತ್ತು ತೆಗೆದು ಕೊಂಡಿರುವುದಿಲ್ಲ. ಹೆಚ್.ಬಿ.ಕರಿಬಸಪ್ಪನವರಿಗೆ ಕೆಳಕಂಡ ಷೆಡ್ಯೂಲ್ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಇರುವುದಿಲ್ಲ. ಹೆಚ್.ಬಿ.ಕರಿಬಸಪ್ಪನವರು ಬಾಳೆ ಗಂಗಪ್ಪನವರಿಗೆ ಮೊಮ್ಮಗನಾಗಬೇಕು. ಹೀಗಾಗಿ ನನ್ನ ಕಕ್ಷಿದಾರರಿಗೂ ಹಾಗೂ ಬಾಳೆ, ಗಂಗಪ್ಪನ ಇತರೆ ವಾರಸುದಾರರಿಗೆ ಹಕ್ಕು ಇರುತ್ತದೆ. ಈ ವಿಷಯ ಗೊತ್ತಿದ್ದು ಹೆಚ್.ಬಿ.ಕರಿಬಸಪ್ಪನವರು ನನ್ನ ಕಕ್ಷಿದಾರರಿಗೆ ಹಾಗೂ ಬಾಳೆ ಗಂಗಪ್ಪನ ಇತರೆ ವಾರಸುದಾರರಿಗೆ ಮೋಸ ಮಾಡಿ ಆಸ್ತಿ ಲಪಟಾಯಿಸುವ ದುರುದ್ದೇಶದಿಂದ ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಲು ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆ ರೀತಿ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವುದಕ್ಕಾಗಲೀ ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಕ್ಕಾಗಲೀ ಹೆಚ್.ಬಿ.ಕರಿಬಸಪ್ಪನವರಿಗೆ ಯಾವುದೇ ರೀತಿಯ ಸಂಪೂರ್ಣ ಹಕ್ಕು. ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವುದಾಗಲೀ, ಜಂಟಿ ಅಭಿವೃದ್ಧಿ ಕರಾರು ಮತ್ತು ಯಾವುದೇ ಕರಾರುಗಳನ್ನಾಗಲೀ ಹಾಗೂ ವ್ಯವಹಾರವನ್ನಾಗಲೀ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನನ್ನ ಕಕ್ಷಿದಾರರ ಬಾಳೆ ಗಂಗಪ್ಪ ಇತರೆ ವಾರಸುದಾರರ ಹಕ್ಕಿಗೆ ಯಾವುದೇ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದ ರಿ.ಸ.ನಂ.155/1 ರಲ್ಲಿನ 5 ಎಕರೆ 35 ಗುಂಟೆ ಜಮೀನಿಗೆ ಚಕ್ಕುಬಂದಿ - ಪೂರ್ವಕ್ಕೆ : ರಿ.ಸ.ನಂ.156 ಖಾತೆದಾರರ ಜಮೀನು ಮತ್ತು ಹಳೇ ಕುಂದುವಾಡ ಗ್ರಾಮ, ಪಶ್ಚಿಮಕ್ಕೆ : ಬಾತಿ ರಸ್ತೆ, ಉತ್ತರಕ್ಕೆ : ರಿ.ಸ.ನಂ.163 ರ ಖಾತೆದಾರರ ಜಮೀನು, ದಕ್ಷಿಣಕ್ಕೆ : ರಿ.ಸ.ನಂ.155/2 ರ ಜಮೀನು

ಕಕ್ಷಿದಾರರ ಪರ ವಕೀಲರು

**K.H. DHANANJAYA** Advocate

Roll : KAR/738/98,

#4884/7, 1st Floor, Shamanur Road, Near Batali Building,

S.S layout, `A' Block, Davangere-577004

**Ph No. 94487 27238, Emial : khd.adv@gmail.com**



## ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

**ನಂ:ದಾಮಪಾ:ಕಾಅ3.ಇ.ಟೆಂಡರ್:14:2022–23**

**ದಿನಾಂಕ: 17.02.2023**

## ಟೆಂಡರ್ ಪ್ರಕಟಣೆ

**(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**

2022–23 ನೇ ಸಾಲಿನ ಎಸ್.ಎಫ್.ಸಿ ಪ್ರವೇಶ ತೆರಿಗೆ ಅವತರಣದಡಿ ಕುಡಿಯುವ ನೀರು ಅನುದಾನ–02 ಕಾಮಗಾರಿ, 2019–20ನೇ ಸಾಲಿನ ಎಸ್‌ಎಫ್‌ಸಿ ಕುಡಿಯುವ ನೀರು ಅನುದಾನ ನಿಧಿ(ಉಳ್ವಿಕೆ)–01 ಕಾಮಗಾರಿ, 2020– 21ನೇ ಸಾಲಿನ ಎಸ್‌ಎಫ್‌ಸಿ ಕುಡಿಯುವ ನೀರು ಅನುದಾನ ನಿಧಿ(ಉಳಿಕೆ)–01 ಕಾಮಗಾರಿ, 2020–21ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್–01 ಕಾಮಗಾರಿ, 2021–22ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್–01 ಕಾಮಗಾರಿ, 2022–23ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ–05 ಕಾಮಗಾರಿ, 2022– 23ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ). – 01 ಕಾಮಗಾರಿ ಒಟ್ಟು 12 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡ ಕರೆಯಲಾಗಿದ್ದು, ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು.

ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ. ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 09–03–2023 ಸಮಯ: 16.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 10–03–2023 ಸಮಯ: 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 13–03–2023 ಸಮಯ: 11.00

ವಾಸಾಇ/ದಾವಣಗೆರೆ/938/ ಕೆಎಸ್‌ಎಂಸಿಎ/2022–23

**ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ**

# ಹರಿಹರದಲ್ಲಿ ನಾಳೆಯಿಂದ ಉರುಸ್



ಹರಿಹರ, ಫೆ. 20 - ನಗರದ ಹಳೆ ಪಿ.ಬಿ. ರಸ್ತೆ, ತುಂಗಭದ್ರಾ ನದಿಯ ದಡದ ಸಮೀಪದ ಐತಿಹಾಸಿಕ ಪರಂಪರೆಯುಳ್ಳ ಹಜರತ್ ಸೈಯದ್ ನಾಡಬಂದ್ ಷಾವಲಿ ದರ್ಗಾದ ಉರುಸೆ ಷರಿಫ್ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 22 ರಿಂದ ಮೂರು ದಿನಗಳ ಕಾಲ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ ಎಂದು ಹಜರತ್ ಸೈಯದ್ ನಾಡಬಂದ್ ಷಾವಲಿ ದರ್ಗಾ ಸಮಿತಿಯ ಗೌರವಾಧ್ಯಕ್ಷ ಬಿ.ಕೆ. ಸೈಯದ್ ರೆಹಮಾನ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ದಿನಾಂಕ 22 ರಂದು ಬುಧವಾರ ಮಧ್ಯಾಹ್ನ 2-30 ಕ್ಕೆ ದರ್ಗಾದಿಂದ ಸಂದಲ್ ಫಕ್ಕೀರ್ ದರ್ವೇಷ್ ಭಕ್ತಾದಿಗಳಿಂದ ಮೆರವಣಿಗೆ ಮೂಲಕ ಗಾಂಧಿನಗರ ರಸ್ತೆ ಮಾರ್ಗವಾಗಿ ಹರಪನಹಳ್ಳಿ ರಸ್ತೆ, ಹಳ್ಳದಕೇರಿ ರಸ್ತೆ, ಜಾಮೀಯಾ ಮಸೀದಿ ರಸ್ತೆ, ಶಿಬಾರ ವೃತ್ತ ಮುಖಾಂತರ ಹಾದು ಹೋಗಿ ಪುನಃ ದರ್ಗಾಕ್ಕೆ ತಲುಪಲಿದೆ.

ದಿನಾಂಕ 23 ರಂದು ಗುರುವಾರ ಬೆಳಗ್ಗೆಯಿಂದ ಸಂಜೆಯವರೆಗೆ ಫಾತೇಹ, ಉರುಸೆ ಷರೀಫ್ ನಿಮಿತ್ತವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮ ಜೊತೆಗೆ ಸಾಮಾಜಿಕ ಪ್ರವಚನಗಳು ನಡೆಯುತ್ತವೆ. ರಾತ್ರಿ 10 ಗಂಟೆಗೆ ನಾಗಪುರ ಖಲೀಲ್ ಸೈಯದ್ ಮತ್ತು ಹೈದರಾಬಾದ್ ಮಹಮ್ಮದ್ ಅಲಿ ಸಾದಿಕ್ ಸಿಸ್ತೆ ಯವರಿಂದ ನಾತ್ ಎ , ಖವ್ವಾಲಿ ಕಾರ್ಯಕ್ರಮ ನಡೆಯುತ್ತವೆ. ಈ ವೇಳೆ ವೇದಿಕೆಯ ಸಮಾರಂಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರಾದ ಹೆಚ್. ಎಸ್. ಶಿವಶಂಕರ್, ಬಿ.ಪಿ. ಹರೀಶ್, ಎಂ.ಎಲ್.ಸಿ. ಅಬ್ದುಲ್ ಜಬ್ಬಾರ್ ಸೇರಿದಂತೆ ಅನೇಕ ರಾಜಕೀಯ ಮತ್ತು ವಿವಿಧ ಸಮಾಜಗಳ ಗಣ್ಯರು ಆಗಮಿಸುತ್ತಾರೆ.

ದಿನಾಂಕ 24 ರಂದು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ದರ್ಗಾದ ಆವರಣದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದರ್ಗಾ ಸಮಿತಿಯ ಗೌರವಾಧ್ಯಕ್ಷ ಆಹ್ಮದ್ ಖಾನ್, ಉತ್ಸವ ಸಮಿತಿಯ ಅಧ್ಯಕ್ಷ ಆಸೀಫ್ ಜುನೇದಿ, ರಹಮತ್‌ವುಲ್ಲಾ ರೆಹಮಾನ್, ಇಬ್ರಾಹಿಂ ಸಾಬ್, ಸೈಯದ್ ಮಕ್ಬೂಲ್, ಆಲಿ ಆಹ್ಮದ್ ಇತರರು ಹಾಜರಿದ್ದರು.

**ಒಮ್ಮತದಿಂದ ಮಾತ್ರ ರಸ್ತೆ ದುರಸ್ತಿ :** ನಗರದ ದರ್ಗಾ ಮುಂದಿನ ರಸ್ತೆ ದುರಸ್ತಿಗಾಗಿ ಎಲ್ಲಾ ರಾಜಕೀಯ ಪಕ್ಷದವರು ಒಮ್ಮತದ ತೀರ್ಮಾನ ಮಾಡಬೇಕಿದೆ. ಆಗ ಮಾತ್ರ ಇಲ್ಲಿನ ರಸ್ತೆಯನ್ನು ದುರಸ್ತಿ ಪಡಿಸಲು ಸಾಧ್ಯ ಎಂದು ಹಜರತ್ ಸೈಯದ್ ನಾಡಬಂದ್ ಷಾವಲಿ ದರ್ಗಾ ಸಮಿತಿಯ ಗೌರವಾಧ್ಯಕ್ಷ ಆಹ್ಮದ್ ಖಾನ್ ತಿಳಿಸಿದರು.

# ದಿವಾಳಿ ಪಾಕ್ : ಸಾಲ ನೀಡಿದ ಚೀನಾಗೀಗ ಚಿಂತೆ



ಬೀಜಿಂಗ್, ಫೆ. 20 – ಪಾಕಿಸ್ತಾನ ಈಗಾಗಲೇ ದಿವಾಳಿ ದೇಶ ಎಂದು ಅಲ್ಲಿನ ರಕ್ಷಣಾ ಸಚಿವ ಖವಾಜ ಆಸಿಫ್ ಹೇಳಿರುವುದು ಅಂತರರಾಷ್ಟ್ರೀಯ ಸಂಬಂಧಗಳ ಮೇಲೆ ಪರಿಣಾಮ ಬೀರಲಿದೆ. ವಿಶೇಷವಾಗಿ, ಪಾಕ್‌ಗೆ ಅತಿ ಹೆಚ್ಚಿನ ಸಾಲ ನೀಡಿರುವ ಚೀನಾದ ಮುಂದಿನ ಹೆಜ್ಜೆಯ ಬಗ್ಗೆ ಚಿಂತಿಸಬೇಕಾಗಿ ಬಂದಿದೆ. ಪಾಕಿಸ್ತಾನ 126 ಶತಕೋಟಿ ಡಾಲರ್‌ಗಳ ವಿದೇಶಿ ಸಾಲ ಹೊಂದಿದೆ. ಇದರಲ್ಲಿ 30 ಶತಕೋಟಿ ಡಾಲರ್ ಸಾಲ ಚೀನಾದಿಂದ ಪಡೆದಿದ್ದು. ಚೀನಾದಿಂದ ಪಡೆದ ಸಾಲ ಐ.ಎಂ.ಎಫ್. ನಿಂದ ಪಡೆದ ಸಾಲದ (7.8 ಶತಕೋಟಿ ಡಾಲರ್) ಮೂರು ಪಟ್ಟು ಹೆಚ್ಚಾಗಿದೆ.

ಪಾಕಿಸ್ತಾನವು ಈ ಹಿಂದಿನಿಂದಲೂ ಚೀನಾಗೆ ನಿಕಟವರ್ತಿಯಾಗಿದೆ. ತನ್ನ ಪರಿಸ್ಥಿತಿ ಶ್ರೀಲಂಕಾದ ರೀತಿ ಆಗದಂತೆ ಚೀನಾ ಕೈ ಹಿಡಿಯಲಿದೆ ಎಂದು ಪಾಕ್ ನಿರೀಕ್ಷಿಸುತ್ತಿದೆ. ಈ ನಡುವೆಯೇ, ಪಾಕ್ ಆರ್ಥಿಕ ಸ್ಥಿತಿ ದಿನೇ ದಿನೇ ಹದಗೆಡುವುದು ಮುಂದುವರೆದಿದೆ.

ಪಾಕ್‌ನ ಚಾಲ್ತಿ ಖಾತೆ ಕೊರತೆ ಜನವರಿಯಲ್ಲಿ ಶೇ.90.2ರಷ್ಟು ಕಡಿಮೆಯಾಗಿ 0.24 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ ಚಾಲ್ತಿ ಖಾತೆ ಕೊರತೆ 2.47 ಶತಕೋಟಿ ಡಾಲರ್ ಆಗಿತ್ತು. ವಿದೇಶಿ ವಿನಿಮಯ ಇಲ್ಲದ ಕಾರಣಕ್ಕಾಗಿ ಪಾಕಿಸ್ತಾನದ ಸರ್ಕಾರಿ ಬ್ಯಾಂಕ್ ಆಮದುಗಳ ಮೇಲೆ ತೀವ್ರ ನಿರ್ಬಂಧ ಹೇರಿದೆ. ವಿನಿಮಯ ಕೊರತೆಯಿಂದಾಗಿ ಪಾಕಿಸ್ತಾನ ಈಗ ಸಾಲ ಬಾಕಿದಾರನಾಗುವ ಅಂಚಿನಲ್ಲಿದೆ.

ಚೀನಾದಿಂದ ಭಾರೀ ಪ್ರಮಾಣದ ಸಾಲ ಪಡೆದಿದ್ದ ಶ್ರೀಲಂಕ ಹಾಗೂ ಆಫ್ರಿಕಾದ ಕೆಲ ದೇಶಗಳು ತೀವ್ರ ಸಂಕಷ್ಟದಲ್ಲಿವೆ. ಸಾಲ ಮರು ಪಾವತಿಸಲು ಸಾಧ್ಯವಾಗುತ್ತಿಲ್ಲ. ಈ ಸಾಲಗಳನ್ನು ಕೈ ಬಿಟ್ಟರೆ, ಈಗಾಗಲೇ ಮಂದವಾಗುತ್ತಿರುವ ಚೀನಾದ ಆರ್ಥಿಕತೆ ಮೇಲೆ ಇನ್ನಷ್ಟು ಹೊರೆ ಬೀಳಲಿದೆ.

ಪಾಕಿಸ್ತಾನ ದಿವಾಳಿಯಾಗಿದೆ ಎಂದು ಸಚಿವ ಆಸಿಫ್ ನೀಡಿರುವ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿರುವ ಚೀನಾ ವಿದೇಶಾಂಗ ಸಚಿವಾಲಯ, ಪಾಕ್ ಬಗ್ಗೆ ಸಹಾನುಭೂತಿ ಇದೆ ಎಂದು ಹೇಳಿದೆ.

ಪಾಕಿಸ್ತಾನ ಸರ್ವಕಾಲದ ಸಹಭಾಗಿ ಹಾಗೂ ನಿಕಟ ಸ್ನೇಹಿತ. ಪಾಕ್‌ನ ಸಂಕಷ್ಟಗಳ ಬಗ್ಗೆ ಸಹಾನುಭೂತಿ ಇದೆ. ಪಾಕಿಸ್ತಾನ ಸಮಸ್ಯೆ ಎದುರಿಸಲು ಸಕ್ರಿಯ ನೆರವು ನೀಡುವುದಾಗಿ ಚೀನ ಹೇಳಿದೆ. ಶ್ರೀಲಂಕಾ 51 ಶತಕೋಟಿ ಡಾಲರ್‌ಗಳ ವಿದೇಶಿ ಸಾಲ ಬಾಕಿ ಹೊಂದಿದೆ. ಇದರಲ್ಲಿ ಸುಮಾರು 10 ಶತಕೋಟಿ ಡಾಲರ್‌ಗಳು ಚೀನಾದಿಂದ ಪಡೆದಿದೆ. ಶ್ರೀಲಂಕ ಸಾಲದ ಮರು ಪಾವ ತಿಗೆ ಎರಡು ವರ್ಷಗಳ ತಡೆ ಹಾಕುವುದಾಗಿ ಚೀನಾದ ಎಕ್ಸಿಮ್ ಬ್ಯಾಂಕ್ ತಿಳಿಸಿತ್ತು.

## ರಾಷ್ಟ್ರೀಯ ಮುಕ್ತ ಕರಾಟೆ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳು




ದಾವಣಗೆರೆ, ಫೆ.20- ಬೆಂಗಳೂರಿನ ಎಸ್‌ಇವಿ ಗ್ರೂಫ್ ಸಂಸ್ಥೆಯಡಿಯಲ್ಲಿ ನಡೆದ 7ನೇ ರಾಷ್ಟ್ರೀಯ ಮುಕ್ತ ಕರಾಟೆ ಚಾಂಪಿಯನ್ ಶಿಪ್ - 2023ರ ಈ ಸ್ಪರ್ಧೆಯಲ್ಲಿ ನಗರದ ದುಷ್ಯಂತ್ ಎಸ್.ಕನ್ನಪ್ಪ, ಎಂ.ಸಿ.ಅಮೂಲ್ಯ, ಯಶೋಧ, ಎಂ.ನಿತಿನ್, ತೇಜು, ಎಂ.ಬಿ.ಸ್ನೇಹ, ಕೆ.ಎಂ.ಅಪೇಕ್ಷ, ಎಸ್.ಶಮಿ, ಎಂ. ಇಬ್ರಾಹಿಂ ಅವರುಗಳು ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರಿಗೆ ಸನ್‌ಸೈಯ್ ಹನುಮಂತ ಅವರು ತರಬೇತುದಾರರಾಗಿದ್ದರು.

## ಐ ಕರಾಟೆ ಟೀಂ ಡಿವಿಜಿ ಶಾಲೆ ಮಕ್ಕಳಿಗೆ ರಾಜ್ಯಮಟ್ಟದ ಕರಾಟೆಯಲ್ಲಿ ಸ್ವರ್ಣ



ದಾವಣಗೆರೆ, ಫೆ.20- ಈಚೆಗೆ ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಓಪನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ನಗರದ ಅಮೃತಾನಂದ ಮಯಿ ಶಾಲೆ ಬಳಿಯಿರುವ 'ಐ ಕರಾಟೆ ಟೀಂ ಡಿವಿಜಿ' ಶಾಲೆಯ ವಿದ್ಯಾರ್ಥಿಗಳು ಸ್ವರ್ಣ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಕತಾ ವಿಭಾಗದಲ್ಲಿ ಸಂಗಮೇಶ್ ಮತ್ತು ದಾನೀಶ್ ಪ್ರಥಮ ಸ್ಥಾನ ಹಾಗೂ ಅಮೃತ, ಆಕಾಶ್, ಆಯತ್ ದ್ವಿತೀಯ, ಫೈಟಿಂಗ್‌ನಲ್ಲಿ ಸಂಗಮೇಶ್ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ತರಬೇತುದಾರ ಸೆನ್ಸಾಯ್ ಎಸ್. ಇಮ್ತಿಯಾಜ್ ತಿಳಿಸಿದ್ದಾರೆ.

## ಓಪಿಯಂ, ಪಾಪಿಸ್ಟ್ರಾ ಪೌಡರ್, ಮದ್ಯ ವಶ : ಬಂಧನ

ದಾವಣಗೆರೆ, ಫೆ.20 - ಅಬಕಾರಿ ಇಲಾಖೆ ತಂಡ ನಗರದಿಂದ ಹರಿಹರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ 48 ರಸ್ತೆಯ ಹತ್ತಿರ ಇರುವ ಮಳಿಗೆಯೊಂದರ ಮೇಲೆ ಇದೇ ದಿನಾಂಕ 9 ರಂದು ದಾಳಿ ನಡೆಸಿ ಆರೋಪಿ ಅವತಾರ್ ಸಿಂಗ್ ಎಂಬಾತ ಅಕ್ರಮವಾಗಿ ಸಂಗ್ರಹಿಸಿದ್ದ ರೂ. 53,140/- ರೂ. ಮೊತ್ತದ ಓಪಿಎಂ, ಪಾಪಿಸ್ಟ್ರಾ ಪೌಡರ್ ಮತ್ತು ಮದ್ಯವನ್ನು ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದೆ. ಆರೋಪಿಯಿಂದ ಪ್ಲಾಸ್ಟಿಕ್ ಚೀಲದಲ್ಲಿದ್ದ 26 ಕೆ.ಜಿ.ಓಪಿಯಂ, ಪಾಪಿಸ್ಟ್ರಾ ಪೌಡರ್ ಮತ್ತು ಪ್ಲಾಸ್ಟಿಕ್ ಕವರ್‌ನಲ್ಲಿದ್ದ 3 ಕೆ.ಜಿ 180 ಗ್ರಾಂ ಓಪಿಯಂ, ಪಾಪಿಸ್ಟ್ರಾವನ್ನು ವಶಪಡಿಸಿಕೊಳ್ಳಲಾಗಿದೆ.

ಹೊಸಪೇಟೆ ವಿಭಾಗದ ಅಬಕಾರಿ ಜಂಟಿ ಆಯುಕ್ತರ ನಿರ್ದೇಶನದ ಮೇರೆಗೆ, ಅಬಕಾರಿ ಉಪ ಆಯುಕ್ತ ಬಿ. ಶಿವಪ್ರಸಾದ್ ಮಾರ್ಗದರ್ಶನದಲ್ಲಿ ಅಬಕಾರಿ ಉಪ ಅಧೀಕ್ಷಕ ರವಿ ಎಂ. ಮರಿಗೌಡ್ರು, ಅಬಕಾರಿ ನಿರೀಕ್ಷಕರಾದ ರಶ್ಮಿ ಕೆ.ಆರ್, ಉಪನಿರೀಕ್ಷಕರಾದ ಮಂಜಪ್ಪ. ಎಂ ಅವರು ದಾಳಿ ನಡೆಸಿದ್ದರು.

## ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೋಬೋಟಿಕ್ ವಸ್ತು ಪ್ರದರ್ಶನ



ದಾವಣಗೆರೆ, ಫೆ 20- ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ ಆವರಣದಲ್ಲಿ ಪಿಎಸ್‌ಎಸ್‌ಇಎಂಆರ್ ಮತ್ತು ಡಾ. ಎಸ್.ಎಸ್.ಎನ್.ಪಿ. ಶಾಲೆಯ ಜಂಟಿ ನಿರ್ದೇಶನದಲ್ಲಿ ಆವಿಷ್ಕಾರ್ ಮತ್ತು ತಂತ್ರವಿಜ್ಞಾನ ರೋಬೋಟಿಕ್ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು.

ದಕ್ಷಿಣ ವಲಯ ಶಿಕ್ಷಣಾಧಿಕಾರಿ ಧಾರುಕೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಆರ್. ಚೇತನ, ಪ್ರಕಾಶ್ ಗೌಡ, ಎನ್.ಆರ್. ನಳಿನಿ, ಮಂಜುನಾಥ್ ರಂಗರಾಜು, ಜೆ.ಎಸ್. ವನಿತಾ, ಡಾ. ಪ್ರೀತಿ ಸಿಂಗ್, ಬಿ.ಎನ್. ಕಮಲಾ, ರಮೇಶ್ ಬಾಬು, ಎಸ್. ಮಂಜುಳ, ಸಿ.ರುತಿಕಾ, ಸಿ. ಮಂಜಪ್ಪ, ಪಿ.ವಿ. ಪ್ರಭು, ಸವಿತಾ ರಮೇಶ್, ಸುಮಾ ಕುಲಕರ್ಣಿ, ಸುಮಂಗಲ ಉಪಸ್ಥಿತರಿದ್ದರು.

## ದೇಶದ ಶಾಂತಿ, ನೆಮ್ಮದಿಗೆ ಸಂವಿಧಾನವೇ ಕಾರಣ



ದಾವಣಗೆರೆ, ಫೆ.,20- ದೇಶ ಸುಭಿಕ್ಷೆ ಮತ್ತು ಶಾಂತಿ ನೆಮ್ಮದಿಯಿಂದ ಇರಲು ನಮ್ಮ ಸಂವಿಧಾನವೇ ಕಾರಣವಾಗಿದೆ ಎಂದು ಕುರ್ಕಿ ಕೆ.ಜಿ. ವೇದಮೂರ್ತಿ ಗೌಡ್ರು ಹೇಳಿದರು.

ತಾಲ್ಲೂಕಿನ ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ 74 ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಮ್ಮ ಸಂವಿಧಾನ ನ್ಯಾಯ, ಸಮಾನತೆ ಸ್ವಾತಂತ್ರ್ಯ, ಭ್ರಾತೃತ್ವ ಎಂಬ ಮೂಲ ತತ್ವಗಳ ಹಾಗೂ ಧ್ಯೇಯೋದ್ದೇಶಗಳ ಆಧಾರದ ಮೇಲೆ ರಚಿತವಾಗಿದೆ. ಹಾಗಾಗಿ ಭಾರತವನ್ನು ಪ್ರಜಾಪ್ರಭುತ್ವದ ಜನನಿ ಎಂದು ಕರೆಯುತ್ತಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ 167 ಮಕ್ಕಳಿಗೂ ಆಂಗ್ಲ ಭಾಷಾ ಶಬ್ದಕೋಶಗಳನ್ನು ಕೊಡುಗೆಯಾಗಿ ನೀಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶಾಲೆಗೆ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿ ಕು. ಜಯಲಕ್ಷ್ಮಿ ಹಾಗೂ ಯೋಗಾಸನದಲ್ಲಿ ವಿಭಾಗೀಯ ಮಟ್ಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ ಕೆ. ಪಿ. ವಿಕಾಸ್‌ಗೆ ಬಹುಮಾನ ನೀಡಿ ಅಭಿನಂದಿಸಿದರು.

ಶಾಲೆಯ ಹಿರಿಯ ಶಿಕ್ಷಕ ಸಿ. ಜಿ. ಜಗದೀಶ್ ಕೂಲಂಬಿ, ಮಕ್ಕಳಿಗೆ ಸಂವಿಧಾನಾತ್ಮಕ ಬೆಳವಣಿಗೆಯ ಐತಿಹಾಸಿಕ ಹಿನ್ನಲೆಯನ್ನು ತಿಳಿಸುತ್ತಾ, ಸಂವಿಧಾನ ರಚನೆ ಮಾಡಲು ಸುಮಾರು 2 ವರ್ಷ 11 ತಿಂಗಳು 18 ದಿನಗಳ ಕಾಲಾವಧಿಯನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಸಂವಿಧಾನವು 22 ಭಾಗಗಳನ್ನು, 395 ವಿಧಿಗಳನ್ನು ಹಾಗೂ 9 ಅನುಸೂಚಿಗಳನ್ನು ಒಳಗೊಂಡಂತಹ ಲಿಖಿತ ಬೃಹತ್ ಸಂವಿಧಾನವಾಗಿದೆ ಇಂತಹ ವಿಶಿಷ್ಟವಾದ ಸಂವಿಧಾನವನ್ನು ರಚಿಸಿದ ಡಾ. ಬಿ. ಆರ್. ಅಂಬೇಡ್ಕರ್ ರವರಿಗೆ ನಾವು ಋಣಿಯಾಗಿರಬೇಕು ಎಂದು ಹೇಳಿದರು.

ಮುಖೋಪಾಧ್ಯಾಯ ಆರ್. ಗಣೇಶಾಚಾರಿ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಓಂಕಾರಪ್ಪ ಧ್ವಜಾರೋಹಣ ನೆರವೇರಿಸಿದರು. ಎಸ್‌ಡಿಎಂಸಿ ಸದಸ್ಯರಾದ ನಾಗರಾಜ್, ಚೆನ್ನಪ್ಪ, ಉಷಾ, ಶಿಕ್ಷಕರಾದ ನಾಗರಾಜ್, ಶಾಂತಕುಮಾರಿ ಉಪಸ್ಥಿತರಿದ್ದರು ದೈಹಿಕ ಶಿಕ್ಷಕ ರಾಘವೇಂದ್ರ ಧ್ವಜ ನಿರ್ವಹಣೆ ಮಾಡಿದರು. ಶಿಕ್ಷಕರಾದ ವಿರುಪಾಕ್ಷಿ ಸ್ವಾಗತಿಸಿದರು. ಶಕುಂತಲಾ ನಿರೂಪಿಸಿದರು. ಪಾರ್ವತಮ್ಮ ವಂದಿಸಿದರು.

## ರಾಜ್ಯ ಮಟ್ಟದ 'ಅಂಚೆ-ಕುಂಚ' ಸ್ಪರ್ಧೆ

ದಾವಣಗೆರೆ, ಫೆ.20- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ 50 ಪೈಸೆ ಅಂಚೆ ಕಾರ್ಡಿನಲ್ಲಿ ರಾಜ್ಯ ಮಟ್ಟದ ಚಿತ್ರ ಬರೆಯುವ 'ಅಂಚೆ-ಕುಂಚ' ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಯಾವುದೇ ಕಲಾ ಪ್ರಕಾರಗಳಲ್ಲಿ ಎಷ್ಟಾದ ರೂ ಶಿವನ ಚಿತ್ರ ಬರೆದು ಕನ್ನಡದಲ್ಲಿ ತಮ್ಮ ಹೆಸರು, ವಿಳಾಸ ವಯಸ್ಸು, ವ್ಯಾಟ್ಸಾಪ್ ಸಂಖ್ಯೆ ಕಳಿಸಬೇಕು. ಚಿತ್ರ ಬರೆದು ಅಂಚೆ ಕಾರ್ಡ್ ಕಳುಹಿಸುವ ವಿಳಾಸ # 431, 'ಕನ್ನಡ ಕೃಪಾ' ಕುವೆಂಪು ರಸ್ತೆ, ಕಸ್ತೂರಬಾ ಬಡಾವಣೆ, ದಾವಣಗೆರೆ- 577 002, ಮೊ. 9538732777.

# ಮದುವೆಗೆ ಸಮಾನ ವಯಸ್ಸು : ಅರ್ಜಿ ತಳ್ಳಿ ಹಾಕಿದ ಸುಪ್ರೀಂ ಕೋರ್ಟ್

ನವದೆಹಲಿ, ಫೆ. 20 – ಮಹಿಳೆಯರು ಹಾಗೂ ಪುರುಷರಿಬ್ಬರಿಗೂ ಮದುವೆಗೆ ಒಂದೇ ಕನಿಷ್ಠ ವಯೋಮಾನ ನಿಗದಿಪಡಿಸಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಕೆಲ ವಿಷಯಗಳು ಸಂಸತ್ತಿಗೆ ಸೇರಿದ್ದು, ಇವುಗಳ ಬಗ್ಗೆ ನ್ಯಾಯಾಂಗ ಕಾನೂನು ರೂಪಿಸಲಾಗದು ಎಂದು ತಿಳಿಸಿದೆ. ಈ ಕುರಿತು ಕಾನೂನು ರೂಪಿಸಲು ನ್ಯಾಯಾಂಗ ಸೂಚನೆ ನೀಡಲು ಸಾಧ್ಯವಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ತಿಳಿಸಿದೆ.

ನ್ಯಾಯಾಂಗ ಒಂದೇ ಸಂವಿಧಾನದ ಪಾಲಕ ಎಂದು ಹೇಳಲಾಗದು. ಸಂಸತ್ ಸಹ ಸಂಸತ್ತಿನ ಪಾಲಕನಾಗಿದೆ ಎಂದು ಪೀಠ ತಿಳಿಸಿದೆ.

ಮಹಿಳೆ ಹಾಗೂ ಪುರುಷರಿಬ್ಬರಿಗೂ ಮದುವೆಗೆ ಕನಿಷ್ಠ ವಯೋಮಾನ ಒಂದೇ ಆಗಿರಬೇಕು ಎಂದು ವಕೀಲ ಅಶ್ವಿನಿ ಉಪಾಧ್ಯಾಯ್ ಅರ್ಜಿ ದಾಖಲಿಸಿದ್ದರು. ಪ್ರಸಕ್ತ ಪುರುಷರ ಕನಿಷ್ಠ ವಯೋಮಾನ 21 ಹಾಗೂ ಮಹಿಳೆಯರ ಕನಿಷ್ಠ ವಯೋಮಾನ 18 ಆಗಿದೆ. ಅಲ್ಲದೇ, ಮುಸ್ಲಿಂ ವೈಯಕ್ತಿಕ ಕಾನೂನಿನ ಅನ್ವಯ ಯುವತಿಯರು ಮದುವೆಯಾಗಲು ಕನಿಷ್ಠ ವಯೋಮಾನ 15 ಆಗಿದೆ. ಈ ಬಗ್ಗೆ ಹಲವಾರು ಪ್ರಕರಣಗಳು ನ್ಯಾಯಾಲಯದ ಎದುರಿನಲ್ಲಿವೆ.

## ನೆಹರು ಯುವ ಕೇಂದ್ರದಿಂದ ಸ್ಪರ್ಧೆಗಳ ಆಯೋಜನೆ

ದಾವಣಗೆರೆ, ಫೆ.20- ಜಿಲ್ಲಾ ನೆಹರು ಯುವ ಕೇಂದ್ರದಿಂದ 2022-23 ನೇ ಸಾಲಿನ ಜಿಲ್ಲಾ ಮಟ್ಟದ ಯುವ ಉತ್ಸವ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

**ಸ್ಪರ್ಧೆಗಳ ವಿವರ:** ಪೇಂಟಿಂಗ್, ಕವನ ಬರವಣಿಗೆ, ಮೊಬೈಲ್ ಫೋಟೋಗ್ರಫಿ, ಸಾಂಸ್ಕೃತಿಕ, ಜನಪದ ಮತ್ತು ಸಾಂಪ್ರದಾಯಿಕ ನೃತ್ಯ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವವರು. 15 ರಿಂದ 29 ವರ್ಷ ವಯೋಮಾನದವರಾಗಿರಬೇಕು. ಆಸಕ್ತ ಅರ್ಹ ಅಭ್ಯರ್ಥಿಗಳು ಹೆಸರನ್ನು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ನೆಹರು ಯುವ ಕೇಂದ್ರದ ಕಾರ್ಯಾಲಯ , ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಟ್ಟಡದ ಕೊಠಡಿ ಸಂಖ್ಯೆ 42 ರ ನೆಹರು ಯುವ ಕೇಂದ್ರ ಕಾರ್ಯಾಲಯ ಅಥವಾ ಮೊ. ಸಂ. 9901863789 ಸಂಪರ್ಕಿಸಬಹುದು.

## ಉಕ್ರೇನ್‌ಗೆ ಬಿಡೆನ್ ಭೇಟಿ; ನೆರವಿನ ಘೋಷಣೆ

ಕೀವ್, ಫೆ. 20 – ಉಕ್ರೇನ್ ಮೇಲೆ ರಷ್ಯಾ ನಡೆಸಿದ ದಾಳಿಗೆ ವರ್ಷ ತುಂಬುವ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರು ಉಕ್ರೇನ್‌ಗೆ ಅಘೋಷಿತ ಭೇಟಿ ನೀಡಿದ್ದಾರೆ. ಉಕ್ರೇನ್‌ಗೆ ಇನ್ನಷ್ಟು ನೆರವು ನೀಡುವುದಾಗಿ ಪ್ರಕಟಿಸಿದ್ದಾರೆ. ಉಕ್ರೇನ್ ಅಧ್ಯಕ್ಷ ವೊಲಿಡಿಮಿರ್ ಜೆಲೆನ್‌ಸ್ಕಿ ಅವರ ಜೊತೆ ಮಾತುಕತೆ ನಡೆಸಿರುವ ಬಿಡೆನ್, ಉಕ್ರೇನ್ ಜೊತೆ ತಾವಿರುವುದಾಗಿ ಹೇಳಿದ್ದಾರೆ. ಬೇಸಿಗೆ ಅವಧಿಯಲ್ಲಿ ದಾಳಿ ತೀವ್ರಗೊಳಿಸಲು ಉಕ್ರೇನ್ ಹಾಗೂ ರಷ್ಯಾ ಸಿದ್ಧತೆ ನಡೆಸಿವೆ. ಈ ಹಿನ್ನೆಲೆಯಲ್ಲಿ ಬಿಡೆನ್ ಭೇಟಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಉಕ್ರೇನ್‌ಗೆ ಹೆಚ್ಚುವರಿಯಾಗಿ 50 ಶತಕೋಟಿ ಡಾಲರ್ ನೆರವು ನೀಡಲಾಗುವುದು ಎಂದು ಬಿಡೆನ್ ತಿಳಿಸಿದ್ದಾರೆ. ಇದರ ಜೊತೆಗೆ ಹೊವಿಟ್ಜರ್ ಗುಂಡುಗಳು, ಟ್ಯಾಂಕ್ ವಿರೋಧಿ ಕ್ಷಿಪಣಿಗಳು, ರಡಾರ್ ಮತ್ತಿತರೆ ಶಸ್ತ್ರಗಳನ್ನು ಪೂರೈಸುವುದಾಗಿ ತಿಳಿಸಿದ್ದಾರೆ. ಆದರೆ, ಯಾವುದೇ ಆಧುನಿಕ ಶಸ್ತ್ರಗಳನ್ನು ನೀಡುವ ಬಗ್ಗೆ ಮಾತನಾಡಿಲ್ಲ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 40x40, 30x56, 30x54, 40x35, ಪೂರ್ವ- ಉತ್ತರ ಕಾರ್ನರ್ 35x55, ಪಶ್ಚಿಮ 40x30, 30x50, 30x40, ಬನಶಂಕರಿ ಬಡಾವಣೆ ಪೂರ್ವ 50x80 (60 ಅಡಿ ರಸ್ತೆ & ಕಮರ್ಷಿಯಲ್ ಸೈಟ್) 40x61, ಪಶ್ಚಿಮ 30x65 (ಅಕ್ಕ-ಪಕ್ಕ )
ಐಗೂರು ವಿಜಯಕುಮಾರ :
99457 02495

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 North, 40 ಅಡಿ ರೋಡ್‌ಗಿದೆ, ಪಾರ್ಕ್ ಎದುರುಗಡೆ ಇದೆ, 40x60 South.
ಐನಳ್ಳಿ ಚನ್ನಬಸಪ್ಪ ಏಜೆಂಟ್.
99166 12110

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರಿನ ಪಾರ್ಕ್ ಪಕ್ಕದಲ್ಲಿ 20x30 ಅಳತೆಯಲ್ಲಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
98442 94446

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ ಉತ್ತರ 35x45, 30x50, ಎಂ.ಸಿ.ಸಿ. 'A' ಬ್ಲಾಕ್ ಪೂರ್ವ 30x50, 60x60, ಬಸವೇಶ್ವರ ಬಡಾವಣೆ ಪೂರ್ವ 40x60.
ಐಗೂರು ವಿಜಯಕುಮಾರ :
99457 02495

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ಹತ್ತಿರ 60x90 ಪಶ್ಚಿಮ. ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ. ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, 40x80 ಪೂರ್ವ. ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 ಉತ್ತರ.
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu & Khatha Change Building Licence**
Call :
96118-66449

**ಕಾರುಗಳು ಮಾರಾಟಕ್ಕಿವೆ**
MARUTHI BREZAA VDI 2019 HONDA JAZZ PETROL 2016 SKODA RAPID 2015 HYUNDAI EON 2012 DAIVIK IYNAHALLI
99456 43223

**ಮನೆ ಬಾಡಿಗೆಗೆ ಇದೆ**
1st ಫ್ಲೋರ್, 2 ಬೆಡ್ ರೂಂ ಎಸ್.ಎಸ್. ಲೇಔಟ್, B ಬ್ಲಾಕ್, ನವೋದಯ (Edu Asia) school ಹತ್ತಿರ, ದಾವಣಗೆರೆ
90196 81452

**TO -LET**
2BHK, 3BHK, Single room with attached bathroom 303/4, 2nd Main Road, P.J Extension.
96111 74878, 89707 89513

**ಬಟ್ಟೆ ಅಂಗಡಿಗೆ ಅನುಭವಿ ಕೆಲಸಗಾರರು ಬೇಕಾಗಿದ್ದಾರೆ**
ಸಂಪರ್ಕಿಸಿ :
94838 30863

**ಮನೆ ಬಾಡಿಗೆಗೆ/ಲೀಸ್‌ಗೆ**
ಕುಂದುವಾಡ ಕೆರೆ ಹತ್ತಿರ, ಮಹಾಲಕ್ಷ್ಮಿ ಲೇಔಟ್‌ನಲ್ಲಿ ಹಾಗೂSS ಹೈ-ಟೆಕ್ ಹಾಸ್ಪಿಟಲ್ ಹತ್ತಿರ, ಲಕ್ಷ್ಮಿ ಲೇಔಟ್‌ನಲ್ಲಿ ಎರಡು ಬೆಡ್ ರೂಂ ಹಾಗೂ ಅಟ್ಯಾಚ್ ಬಾತ್ ರೂಂವುಳ್ಳ ಮನೆಗಳು ಇವೆ.
96388 17967, 73380 43912

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಕಿರುವಾಡಿ ಲೇ ಔಟ್ 1ನೇ ಮೇನ್‌ನಲ್ಲಿ ಮೊದಲನೇ ಮಹಡಿಯಲ್ಲಿ 3 ಬೆಡ್ ರೂಮ್ ವಿತ್ ಅಟ್ಯಾಚ್ಡ್ ಮತ್ತು ವಾಸ್ತುಪ್ರಕಾರವಿರುವ ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
ಮೊ. 99451 59582

**ಮನೆ ಲೀಸ್‌ಗೆ ಇದೆ**
2 ಬೆಡ್ ರೂಮ್ ದಕ್ಷಿಣ ಪೇಸ್, ಸಿದ್ದವೀರಪ್ಪ ಬಡಾವಣೆ, 11 ನೇ ಕ್ರಾಸ್.
ಫೋ : 99867 01322

**ಗೋಡೌನ್ ಬಾಡಿಗೆಗೆ ಇದೆ**
35x26 ದೊಗ್ಗಳ್ಳಿ ಕಾಂಪೌಂಡ್, ಕೆ.ಆರ್. ರೋಡ್, ದಾವಣಗೆರೆ.
94487 54140
98452 55995

**ಹೋಟೆಲ್ ಸಾಮಾನುಗಳು ಮಾರಾಟಕ್ಕಿವೆ.**
ಬೇಕಾದವರು ಈ ನಂಬರ್‌ಗೆ ಸಂಪರ್ಕಿಸಿ.
9964471666

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ.ನಂ. 240/2, 4ನೇ ಮೇನ್, ಪಿ.ಜೆ. ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಸರ್ಕಲ್ ಬಳಿ 2 ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
97429 61169, 81974 00298

**ಮನೆ ಮಾರಾಟಕ್ಕಿದೆ**
ಕೆಟಿಜೆ ನಗರ 15ನೇ ಕ್ರಾಸ್, 2ನೇ ಮೇನ್‌ನಲ್ಲಿ 30x40 ಅಳತೆಯಲ್ಲಿ ಕಟ್ಟಿಸಿರುವ ಹಳೆಯ ಮನೆ ಮಾರಾಟಕ್ಕಿದೆ.
96388 17967, 73380 43912

**WANTED**
Banking Sector Tele Caller (Female Only)
Qualification : Any Degree.
81237 63199
Interview time : 11AM

**WANTED**
Experienced Female Accountant
Contact
Samyak Ceramics
Hadadi Road. Near Vani Rice Mill, Davangere.
M-94486 58255

**ಬೇಕಾಗಿದ್ದಾರೆ**
ಹಾಸ್ಟೆಲ್ ಗೆ ಪುರುಷ ವಾರ್ಡನ್, ಆಯಾ ಮತ್ತು ಡ್ರೈವರ್ ಬೇಕಾಗಿದ್ದಾರೆ. ಈ ಕೂಡಲೇ ಸಂಪರ್ಕಿಸಿ. ಎಂ.ಇ.ಎಸ್. ಕಾನ್ವೆಂಟ್ ಆಂಜನೇಯ ಬಡಾವಣೆ. 9ನೇ ಕ್ರಾಸ್. ದಾವಣಗೆರೆ-4
98804 36414

**ಬಾಡಿಗೆಗೆ ಮನೆ ಬೇಕಾಗಿದೆ**
ನಾಲ್ಕು ಬೆಡ್ ರೂಂ ಅಥವಾ ಮೂರು ಬೆಡ್ ರೂಂ ಇರುವ Out House ಮನೆ ಬಾಡಿಗೆಗೆ ಬೇಕಾಗಿದೆ. 1. ಬನಶಂಕರಿ ಲೇ ಔಟ್, 2. ಶಿರಮಗೊಂಡನಹಳ್ಳಿ, 3. ಟಿ.ವಿ. ಸ್ಟೇಷನ್ ಹತ್ತಿರ ಅಥವಾ ವಿದ್ಯಾನಗರ ಕೊನೆಯ ಸ್ಟಾಪ್ ಹತ್ತಿರ ಇರುವ ಮನೆ ಬಾಡಿಗೆಗೆ ಬೇಕಾಗಿದೆ.
96060 96697, 99457 88776
96060 96695

**Online EC**
ಹಾಗೂ **ಮನೆ ಕಂದಾಯ**
ಫಾರಂಗಳಿಗೆ ಸಂಪರ್ಕಿಸಿ
9964222628
9945140495
9844540559

**ಸೈಟು ಮಾರಾಟಕ್ಕಿದೆ**
ಹಳೇ ಬನಶಂಕರಿ (ವಿದ್ಯಾನಗರ) 40x60 ಉತ್ತರ. ಬ್ರೋಕರ್‌ಗಳಿಗೆ ಅವಕಾಶವಿಲ್ಲ.
Owner :
98450 05696

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
8749098879

**ಫ್ಯಾಕ್ಟರಿ ಸೂಪರ್ ವೈಸರ್ ಬೇಕಾಗಿದ್ದಾರೆ**
ಸಂಬಳ - 12 ರಿಂದ 14000. ಸಂಕೇಶ್ವರ ಇಂಡಸ್ಟ್ರೀಸ್, ಕರೂರು ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
97387 08495
99018 69371

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED**
Girls required for data entry and billing work at Food Mart Supermarket.
Quli : Bcom
Mob : 9886463531

**REQUIRED**
Tellecallers Only For Ladies.
For Science PU College
Location : Davangere.
Anjanaya Badavane, BIET Road.
CONTACT :
78999 05792 / 87628 67557
Salary:- 8,000/- monthly

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**WANTED**
EX-Service men. Cum Driver. Field Officer, Security Guard.
Contact :
86603 98210, 80731 29613

**GURUDATT ACADEMY**
SSLC - MATHS
30 DAYS CRASH COURSE
M: 97398 65711

**WANTED**
Skippi ice pops company.
Accountant (BBM, B COM)
Timings : 9.30 AM to 7 PM
FRESHER OR EXPERIENCED
Delivery partners (SSLC,PUC)
FRESHER OR EXPERIENCED
Timings : 10.30 AM to 10.30 PM
83101 75650, 88613 80136

**ಮ್ಯಾನೇಜರ್ ಬೇಕಾಗಿದ್ದಾರೆ**
ಎಸ್‌ಎಸ್.ಫಿಲ್ಲಿಂಗ್ ಸ್ಟೇಷನ್
JOb : ಮ್ಯಾನೇಜರ್
ವಿಳಾಸ : ಲೋಕಿಕೆರೆ ಮೇನ್ ರೋಡ್, ಇಂಡಸ್ಟ್ರೀಯಲ್ ಏರಿಯಾ ದಾವಣಗೆರೆ - 577005.
99806 29965, 99865 51303

**Work From Homeಗಾಗಿ**
ಸಂಪರ್ಕಿಸಿರಿ.
97417 55721
77952 28716

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮಾರಾಟಕ್ಕೆ**
ಶಕ್ತಿ ನಗರ (ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು, 3 ಫ್ಲೋರ್ ಇರುವ ಮನೆ 20x30, ದುರ್ಗಾಂಬಿಕಾ ಬಡಾವಣೆ ನಿಟ್ಟುವಳ್ಳಿ ಸೈಟ್ (ಪೂರ್ವ) 20x30, ಬನಶ್ರೀ ಲೇಔಟ್ (ಶಾಮನೂರು) ಸೈಟ್ (ಉತ್ತರ ) 30x50,20x30, ಲಕ್ಷ್ಮಿ ಲೇಔಟ್ (ಜಯನಗರ)ಸೈಟ್ (ಪೂರ್ವ) 25x35.
78996 36597
99165 25828

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ : 20 ರಿಂದ 25 (ಅವಿವಾಹಿತರು). ದಾವಣಗೆರೆ ನಗರದಲ್ಲಿ ವಾಸಿಸುವವರು ಮಾತ್ರ. ಸ್ವ-ವಿವರಗಳೊಂದಿಗೆ ಬೆಳಿಗ್ಗೆ 9.30 ರಿಂದ ರಾತ್ರಿ 8ರವರೆಗೆ ಸಂಪರ್ಕಿಸಿರಿ.
ಗುಪ್ತ ಗೋಲ್ಡ್ ಪ್ಯಾಲೇಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
80957 43423

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ಜರೇಕಟ್ಟೆ
ಫೋ.: 89049 07242

**WANTED**
Company Management Female
SSLC, any Degree. Male - Female,
Helper's female
88614-38237

# ಸಮ ಸಮಾಜ ನಿರ್ಮಾಣಕ್ಕೆ ಕಾಯಕ ಶರಣರ ಮೌಲ್ಯಾದರ್ಶಗಳು ಅಗತ್ಯ



**ಜಿಲ್ಲಾಧಿಕಾರಿ ಶಿವಾನಂದ ಕಾಪಶಿ**

ದಾವಣಗೆರೆ, ಫೆ.20- ಮಾನವ ವಿಶ್ವಮಾನವನಾಗಲು ಬೇಕಾದ ಜೀವನ ಮೌಲ್ಯಗಳನ್ನು ಸರ್ವಜ್ಞ ತ್ರಿಪದಿಗಳಲ್ಲಿ ನೀಡಿದ್ದಾರೆ. ಸಮ ಸಮಾಜದ ನಿರ್ಮಾಣಕ್ಕೆ 12ನೇ ಶತಮಾನದಲ್ಲಿನ ಕಾಯಕ ಶರಣರು ವಚನಗಳ ಮೂಲಕ ಸಂದೇಶಗಳನ್ನು ನೀಡಿದ್ದಾರೆ. ಈ ಮಹನೀಯರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಇಂದು ನಡೆದ ಸಂತ ಕವಿ ಸರ್ವಜ್ಞ ಹಾಗೂ ಕಾಯಕ ಶರಣರ ಜಯಂತ್ಯೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದದರು.

ಸರ್ವಜ್ಞ ಸತ್ಯ ಶುದ್ಧವಾದ ಕಾಯಕವನ್ನು ಮಾಡುತ್ತಾ, ಸಮಾಜದ ಅಂಕುಡೊಂಕುಗಳನ್ನು ತ್ರಿಪದಿಗಳ ಮೂಲಕ ತಿದ್ದುವಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಸಂತ ಕವಿ ಎಂದೇ ಪ್ರಸಿದ್ಧವಾಗಿರುವ ಇವರು ರಚಿಸಿದ ತ್ರಿಪದಿಗಳು ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿವೆ. ಕಾಯಕ ತತ್ವ, ಅನುಭವದ ತತ್ವಗಳನ್ನು ಸಾಮಾನ್ಯ ಭಾಷೆಯಲ್ಲೇ ಸಾಮಾನ್ಯರಿಗೆ ತಿಳಿಯುವಂತೆ ರಚಿಸಿದ್ದಾರೆ. ಇವರ ತ್ರಿಪದಿ ಹಾಗೂ ವಚನಗಳನ್ನು ಅಧ್ಯಯನ ಮಾಡಬೇಕು, ಕೇಳಬೇಕು ಎಂದು ಹೇಳಿದರು.

ಕಾಯಕ ಶರಣರು ಮೂಢನಂಬಿಕೆ, ಜಾತಿ ಪದ್ಧತಿ, ಅಸಮಾನತೆ ವಿರುದ್ಧ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ, ಸಮಸಮಾಜ ಕಟ್ಟುವಲ್ಲಿ ಕಾಯಕ ನಿಷ್ಠೆ ಮೆರೆದ ಶರಣರ ಕೊಡುಗೆ ಅಪಾರ. ಬಸವಣ್ಣನವರ ಸಮಾನತೆ ತತ್ವವನ್ನು ಆಧರಿಸಿ, ಅವರ ಹಾದಿಯಲ್ಲಿ ನಡೆದ ಶರಣರಾದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ಧೂಳಯ್ಯ, ಉರಿಲಿಂಗ ಪೆದ್ದಿಯವರು ಶರಣ ಪಡೆಯ ಮಹನೀಯರಾಗಿದ್ದಾರೆ. ಇವರು ವಚನಗಳ ಮೂಲಕ ಸಾಹಿತ್ಯವನ್ನು ಸರಳ ಕನ್ನಡದಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿ ತಿಳಿಸಿದ್ದಾರೆ. ಕಾಯಕದಲ್ಲಿ ಸ್ವರ್ಗ ಕಾಣಬಹುದು. ಕಾಯಕವೇ ದೇವರು ಎಂದು ತಿಳಿಸಿಕೊಟ್ಟಿದ್ದಾರೆ. ಶರಣರ ನಡೆ-ನುಡಿಗಳನ್ನು ಪಾಲಿಸಿದರೆ ಸಮಾಜದಲ್ಲಿ ಸಾಮಾಜಿಕ ಬದಲಾವಣೆಯನ್ನು ಕಾಣಬಹುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಸರ್ವಜ್ಞ ಸಮಾಜದ ಅಧ್ಯಕ್ಷ ಪುಷ್ಪರಾಜ್, ಕಾರ್ಯದರ್ಶಿ ತಿಪ್ಪೇಸ್ವಾಮಿ, ಉಪನ್ಯಾಸಕರಾದ ಸೌಭಾಗ್ಯ ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕು ಪತ್ರಕ್ಕೆ ಆಗ್ರಹ




ದಾವಣಗೆರೆ, ಫೆ.20- ಬಗರ್ ಹುಕ್ಕುಂ ಸಾಗುವಳಿ ದಾರರಿಗೆ ಹಕ್ಕು ಪತ್ರ ವಿತರಿಸುವಂತೆ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದೆ.

ಭೂ ಹೀನ ಮತ್ತು ಬಡ ರೈತ ಕೃಷಿ ಕಾರ್ಮಿಕರು ಕಂದಾಯ ಅರಣ್ಯದ ಕುರುಚಲು ಗಿಡ, ಕಲ್ಲು ಭೂಮಿ ಇರುವ ಪ್ರದೇಶದಲ್ಲಿ ತಮ್ಮ ಜೀವನೋಪಾಯಕ್ಕಾಗಿ ಸಾಗುವಳಿ ಮಾಡುತ್ತಿದ್ದಾರೆ. ಬಹುಪಾಲು ರೈತರಿಗೆ ಇದರಿಂದ ಬರುವ ಅಲ್ಪ ಸ್ವಲ್ಪ ವರಮಾನವೇ ಜೀವನಾಧಾರವಾಗಿದೆ. ಇಲ್ಲಿಯವರೆಗೆ ಆಳ್ವಿಕೆ ಮಾಡಿದ ಎಲ್ಲ ಸರ್ಕಾರಗಳಿಗೂ ಈ ಬಡ ರೈತರ ಜೀವನದ ವಸ್ತು ಸ್ಥಿತಿಯ ಅರಿವಿದ್ದೇ ಸರ್ಕಾರಕ್ಕೆ ಸೇರಿದ ಜಮೀನಿನಲ್ಲಿ ಉಳುಮೆಗೆ ಅವಕಾಶ ಕೊಡುತ್ತಾ ಬಂದಿವೆ.

ಕೈಗಾರಿಕೆಗಳು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗದೇ ಇದ್ದುದರಿಂದ ಯಾವುದೇ ಕೆಲಸವಿಲ್ಲದೆ ಬದುಕಲು ಅನಿವಾರ್ಯವಾಗಿ ಹಲವು ದಶಕಗಳಿಂದಲೂ ಕಂದಾಯ ಹಾಗೂ ಅರಣ್ಯದಂಚಿನ ಜಮೀನಿನಲ್ಲಿ ರಾಜ್ಯದಾದ್ಯಂತ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆ. ಆದರೆ ಸದರಿ ಸರ್ಕಾರಗಳು ಇಲ್ಲಿಯವರೆಗೂ ಉಳುಮೆಗೆ ಅವಕಾಶ ಕೊಟ್ಟಿದ್ದರೂ, ಸಾಗುವಳಿದಾರರಿಗೆ ಹಕ್ಕುಪತ್ರ ವನ್ನು ನೀಡಲು ಅಗತ್ಯ ಕ್ರಮ ಕೈಗೊಂಡಿಲ್ಲ.

ಜಿಲ್ಲೆಯಲ್ಲಿಯೂ ಸಹ ವಿವಿಧ ಸರ್ಕಾರಿ ಜಮೀನು ಗಳಲ್ಲಿ ಸಾಗುವಳಿ ಮಾಡುತ್ತಿರುವ ಬಡ ರೈತರು ಫಾರಂ ನಂ. 53 ಹಾಗೂ ಫಾರಂ ನಂ. 57 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈಗಾಗಲೇ ಫಾರಂ ನಂ. 53ರಲ್ಲಿ ಹಲವಾರು ಅರ್ಜಿಗಳು ತಿರಸ್ಕೃತಗೊಂಡಿರುವ ಕಾರಣ ಅವುಗಳನ್ನು ತಾವುಗಳು ಪುನರ್ ಪರಿಶೀಲಿಸಿ, ಅರ್ಜಿ ಸಲ್ಲಿಸಿದ ಎಲ್ಲಾ ಬಡ ರೈತರಿಗೂ ಹಕ್ಕುಪತ್ರ ವಿತರಿಸಬೇಕೆಂದು ತಮ್ಮಲ್ಲಿ ಒತ್ತಾಯಿಸುತ್ತಿದ್ದೇವೆ.

ಜಿಲ್ಲೆಯ ನೀರ್ಥಡಿ, ನಲ್ಕುಂದ, ಮ್ಯಾಸರಹಳ್ಳಿ, ಗುಡಾಳು, ಕಂದನಕೋವಿ ಕೆಂಚೇನಹಳ್ಳಿ, ಹುಣಸೇಕಟ್ಟೆ, ಮಾಯಕೊಂಡ, ಬುಳ್ಳಾಪುರ, ಬಾವಿಹಾಳು ಇನ್ನೂ ಮುಂತಾದ ಅನೇಕ ಗ್ರಾಮಗಳ ಸಾಗುವಳಿದಾರರ ನೆರವಿಗೆ ತಾವು ದಾವಿಸಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಮಧು ತೊಗಲೇರಿ ಮತ್ತು ಕಾರ್ಯದರ್ಶಿ ನಾಗಸ್ಮಿತಾ ಆಗ್ರಹಿಸಿದ್ದಾರೆ.

# ಬಿಜೆಪಿ ಮಾಯಕೊಂಡ ಕ್ಷೇತ್ರಕ್ಕೆ 15 ಅಪೇಕ್ಷಿತರು

**ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್**

ದಾವಣಗೆರೆ, ಫೆ. 20- ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಸ್ಪರ್ಧಿಸಲು 15 ಜನ ಅಪೇಕ್ಷಿತರು ತಮಗೆ ಅರ್ಜಿ ಸಲ್ಲಿಸಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಹರಿಹರ ಕ್ಷೇತ್ರದಲ್ಲಿ ಸ್ಪರ್ಧಿಸಲು 3 ಜನ, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ 6 ಹಾಗೂ ಉತ್ತರಕ್ಕೆ 8 ಜನ ಜನ ಅಪೇಕ್ಷಿತರಿದ್ದಾರೆ. ಚನ್ನಗಿರಿ, ಹೊನ್ನಾಳಿ ಹಾಗೂ ಜಗಳೂರು ಕ್ಷೇತ್ರದಲ್ಲಿ ಶಾಸಕರು ಗಳೇ ಇದ್ದು, ಬೇರೆಯವರು ಯಾರೂ ತಮಗೆ ಅರ್ಜಿ ನೀಡಿಲ್ಲ ಎಂದವರು ಹೇಳಿದರು. ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪಕ್ಷದ ವರಿಷ್ಠರೇ ತೀರ್ಮಾನಿಸಲಿದ್ದಾರೆ ಎಂದವರು ಹೇಳಿದರು.

ಕಳೆದ ಫೆ.17ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿರುವ ಬಜೆಟ್ ರೈತ, ಕಾರ್ಮಿಕ ಸ್ನೇಹಿಯಯಾಗಿದೆ. ಹಿಂದುಳಿದ ವರ್ಗದವರ ಪರವಾಗಿದೆ. ಹೆಣ್ಣು ಮಕ್ಕಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗಲು, ಗ್ರಾಮೀಣ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯಕ್ಕೆ ಪ್ರಾತಿನಿಧ್ಯ ನೀಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಬಲಪಡಿಸಲು ಹೊಸ ಎಸ್.ಡಿ.ಆರ್.ಎಫ್ ಕಂಪನಿ ಮಂಜೂರು ಮಾಡಲಾಗಿದೆ. ವಿಮಾನ ನಿಲ್ದಾಣಕ್ಕೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗಿದೆ. ಷಹಜಿ ಮಹಾರಾಜರ ಸಮಾಧಿಗೆ 5 ಕೋಟಿ ರೂ., ಸೂರಗೊಂಡನಕೊಪ್ಪ ಅಭಿವೃದ್ಧಿಗೆ 5 ಕೋಟಿ ರೂ. ನೀಡಲಾಗಿದ್ದು, 3ನೇ ವಿಶ್ವ ಕನ್ನಡ ಸಮ್ಮೇಳನ ಆಯೋಜನೆ ಮಾಡುವ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ವಕ್ತಾರ ಡಿ.ಎಸ್. ಶಿವಶಂಕರ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಶ್ರೀನಿವಾಸ ದಾಸಕರಿಯಪ್ಪ, ಶಿವರಾಜ ಪಾಟೀಲ್, ನರೇಶ್ ಹೊರಹಟ್ಟಿ, ಜಗದೀಶ್, ಬಸವರಾಜ ನಾಯ್ಕ, ಕೆ.ಎಂ. ಸುರೇಶ್, ವಿಶ್ವಾಸ್ ಇತರರಿದ್ದರು.

# 25 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ನೀರು : ಸಿಎಂ

ಬೆಂಗಳೂರು, ಫೆ. 20 - ಜಲ ಜೀವನ ಮಿಷನ್ ಯೋಜನೆಯಡಿ ಮುಂದಿನ ವರ್ಷ ರಾಜ್ಯದ 25 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ನೀರು ಒದಗಿಸಲು ಅನುಮೋದಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಗೆ ತಿಳಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ ನಲ್ಲಿ ಮೂಲಕ ಮನೆಗಳಿಗೆ ನೀರು ಒದಗಿಸಲುವ ಯೋಜನೆಗೆ ಬಜೆಟ್ ಅನುದಾನ ಒದಗಿಸಲಾಗಿದೆ. ಉತ್ತಮ ನೀರು ಕೊಟ್ಟಾಗ ಜನರ ಸ್ವಾಸ್ಥ್ಯವೂ ಹೆಚ್ಚುತ್ತದೆ ಎಂದರು. ಹಿಂದುಳಿದ ವರ್ಗದ ಎರಡೂವರೆ ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯ ಪಡೆದಿದ್ದಾರೆ. ಹೆಚ್ಚುವರಿ 30 ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲು 250 ಕೋಟಿ ರೂ. ಒದಗಿಸಲಾಗಿದೆ. ಕಳೆದ ವರ್ಷಕ್ಕಿಂತ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಹಾಗೂ ವಿದ್ಯಾಸಿರಿ ಸೌಲಭ್ಯ ಕೊಟ್ಟಿದ್ದೇವೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ರಾಜ್ಯದ 5ಕಡೆ ಮೆಗಾ ಹಾಸ್ಟೆಲ್ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದಿದೆ. ತಲಾ ಒಂದು ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ದೊರೆಯಲಿದೆ. ಇದು ಹೊಸ ಪರಿಕಲ್ಪನೆಯಾಗಿದ್ದು, ಇನ್ನಷ್ಟು ಮೆಗಾ ಹಾಸ್ಟೆಲ್ ನಿರ್ಮಿಸಲಾಗುವುದು ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರನ್ನು ಮುಖ್ಯವಾಹಿನಿಗೆ ತರಲು ಹಲವು ಕಾರ್ಯಕ್ರಮಗಳಿದ್ದು, ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು ಎಂದು ಹೇಳಿದರು.

# ರಾಯಚೋಟಿಯಲ್ಲಿ ನಾಳೆ ಶ್ರೀ ವೀರಭದ್ರ ಸ್ವಾಮಿ ರಥೋತ್ಸವ



ದಾವಣಗೆರೆ, ಫೆ.20- ಆಂಧ್ರ ಪ್ರದೇಶ ಕಡಪಾ ಜಿಲ್ಲೆ ರಾಯಚೋಟಿ ಯಲ್ಲಿ ನಾಡಿದ್ದು ದಿನಾಂಕ 22 ರ ಬುಧವಾರ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿ ರಥೋತ್ಸವ ಜರುಗ ಲಿದೆ. ಅಂದು ಪ್ರಾತಃಕಾಲ 4 ಗಂಟೆಗೆ ಅಗ್ನಿಕುಂಡ ಪ್ರವೇಶ ನಂತರ 11.45 ಕ್ಕೆ ವಜ್ರದ ತ್ರಿನೇತ್ರ ಧಾರಣೆ ಹಾಗೂ ಮಹಾ ನೈವೇದ್ಯ ನಡೆಯಲಿದೆ. ಸಂಜೆ 4.30 ಕ್ಕೆ ರಥೋತ್ಸವ ಜರುಗುವುದು.

# ಭಗವಾನ್ ನಿಧನ : ಜೆಂಬಿಗಿ ಮೃತ್ಯುಂಜಯ ಸಂತಾಪ

ದಾವಣಗೆರೆ, ಫೆ. 20- ಕನ್ನಡ ಚಿತ್ರರಂಗದ ಪ್ರಖ್ಯಾತ ನಿರ್ದೇಶಕ ಭಗವಾನ್ ಅವರು ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರ. ಕನ್ನಡದ ನೂರಾರು ಚಿತ್ರಗಳಿಗೆ ನಿರ್ದೇಶನ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಸಂಧ್ಯಾರಾಗ, ಮಂತ್ರಾಲಯ ಮಹಾತ್ಮೆ, ಜೇಡರ ಬಲೆ, ಕಸ್ತೂರಿ ನಿವಾಸ, ಜೀವನ ಚೈತ್ರ, ಒಡಹುಟ್ಟಿದವರು, ಹೀಗೆ ಸಾಲು ಸಾಲು ಚಿತ್ರಗಳು ಕಣ್ಮುಂದೆ ಸಾಗಿ ಹೋಗುತ್ತವೆ. ಇವರ ನಿಧನದಿಂದ ಕನ್ನಡ ಚಿತ್ರರಂಗಕ್ಕೆ ಅಪಾರ ನಷ್ಟವಾಗಿದೆ ಎಂದು ಕನ್ನಡ ಉಪನ್ಯಾಸಕರು ಹಾಗೂ ಸಾಹಿತಿ ಜೆಂಬಿಗಿ ಮೃತ್ಯುಂಜಯ ಸಂತಾಪ ಸೂಚಿಸಿದ್ದಾರೆ.

# ಇಂದು ರಾಜ್ಯ ವೃತ್ತಿಪರ ಛಾಯಾಗ್ರಾಹಕ ಸಂಘಟನೆಗಳ ಒಕ್ಕೂಟದ ಲೋಕಾರ್ಪಣೆ

ದಾವಣಗೆರೆ, ಫೆ. 20- ಕರ್ನಾಟಕ ರಾಜ್ಯ ವೃತ್ತಿಪರ ಛಾಯಾಗ್ರಾಹಕ ಸಂಘಟನೆಗಳ ಒಕ್ಕೂಟದ ಲೋಕಾರ್ಪಣಾ ಸಮಾರಂಭವು ನಾಳೆ ದಿನಾಂಕ 21ರಂದು ಬಿಐಇಟಿ ಕಾಲೇಜು ಆವರಣದಲ್ಲಿನ ಎಸ್. ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ನಡೆಯಲಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಲ್ಸನ್ ಜಾರ್ಜ್ ಗೊನ್ಸಾಲ್ವಿಸ್ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾ ಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ಶಾಸಕ ಶಾಮನೂರು ಶಿವಶಂಕರಪ್ಪ ಒಕ್ಕೂಟದ ಲೋಕಾ ರ್ಪಣೆ ಹಾಗೂ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಫೋಟೋಗ್ರಾಫರ್ ವೆಲ್‌ಫೇರ್ ಅಸೋಸಿಯೇಷನ್ ಆಫ್ ಇಂಡಿಯಾ ನವದೆಹಲಿಯ ಪ್ರಧಾನ ಕಾರ್ಯ ದರ್ಶಿ ಸುನಿಲ್ ಕುಮಾರ್ ಸಿಂಗ್ ಆಗಮಿಸಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಜೆ.ಜಿ., ಸಹ ಕಾರ್ಯದರ್ಶಿ ವಿಜಯ್ ಯು.ಬಿ., ಖಜಾಂಚಿ ಚಂದ್ರಶೇಖರಯ್ಯ ಹಿರೇಮಠ್, ಸಾರ್ವಜನಿಕ ಸಂಪರ್ಕಾಧಿಕಾರಿ ಬಾಬು ಜಿ.ಎಸ್., ನಿರ್ದೇಶಕ ಹೆಚ್.ಕೆ. ಸಿ.ರಾಜು, ಶಿಕಾರಿ ಶಂಭು, ಕೆ.ಪಿ. ನಾಗರಾಜ್, ಶ್ರೀನಾಥ ಅಂಗಡಿ, ಬಸವರಾಜ್, ಕಿರಣ್ ಕುಮಾರ್, ಕೆ.ಬಿ. ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಿದ ವಿಜಯನಗರ ಎಸ್ಪಿ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 20- ಪಟ್ಟಣದಲ್ಲಿರುವ ಫುಟ್ಪಾತ್, ಟ್ರಾಫಿಕ್ ವ್ಯವಸ್ಥೆ ಸುಧಾರಣೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಅನಧಿಕೃತ ಮದ್ಯ ಮಾರಾಟ ತಡೆಗಟ್ಟಲು ಸಹ ಕ್ರಮ ಕೈಗೊಳ್ಳಲಾ ಗುವುದು ಎಂದು ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಹೇಳಿದರು.

ಪಟ್ಟಣದ ಡಿವೈಎಸ್‌ಪಿ ಕಛೇರಿಯ ಆವರಣದಲ್ಲಿ ಹರಪನಹಳ್ಳಿ ಪೊಲೀಸ್ ಇಲಾಖೆಯಿಂದ ಉಪವಿಭಾಗಕ್ಕೆ ಸಂಬಂಧಿಸಿ ದಂತೆ ಜನಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಸಾರ್ವಜನಿಕರಿಂದ ಸಮಸ್ಯೆಗಳನ್ನು ಶಾಂತಚಿತ್ತದಿಂದ ಆಲಿಸಿ, ನಂತರ ಸಮಸ್ಯೆಗಳಿಗೆ ಉತ್ತರ ನೀಡಿ ಮಾತನಾಡಿದರು.

ಈಗಾಗಲೇ ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ 68 ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ವಹಿಸಲಾಗಿದೆ. ಒಟ್ಟು 16 ಜನರನ್ನು ಗಡೀಪಾರು ಮಾಡಲಾಗುವುದು. ಅದರಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿಯೇ 10 ಜನ ಗಡೀಪಾರು ಆಗಲಿದ್ದಾರೆ ಎಂದು ತಿಳಿಸಿದರು.

ಆಟೋಗಳಲ್ಲಿ, ಟ್ರ್ಯಾಕ್ಟರ್‌ಗಳಲ್ಲಿ ಕರ್ಕಶ ಧ್ವನಿವರ್ಧಕ ತಡೆಗಟ್ಟಲು ಸಹ ಮುಂದಿನ ದಿನಗಳಲ್ಲಿ ಉಪವಿಭಾಗಾಧಿಕಾರಿಗಳ ಮಟ್ಟದಲ್ಲಿ ಕಾನೂನು ಕ್ರಮ ವಹಿಸಲಾಗುವುದು. ಮೊಬೈಲ್ ಕಳ್ಳತನಕ್ಕೆ ಸಂಬಂಧಿಸಿದಂತೆ ಮಾತನಾ ಡಿದ ಅವರು, ಜನರು ದೂರು ಕೊಡುವಾಗ ಮೊಬೈಲ್‌ನ ಐಎಂಇಐ ನಂಬರ್ ಸಹಿತ ನೀಡಿದಲ್ಲಿ ಬ್ಲಾಕ್ ಮಾಡಿಸಲಾಗುವುದು ಎಂದು ಹೇಳಿದರು.

ಡಿವೈಎಸ್‌ಪಿ ವಿ.ಎಸ್. ಹಾಲಮೂರ್ತಿ ರಾವ್ ಮಾತನಾಡಿ, ಯಾವುದೇ ಸಮಸ್ಯೆಗಳಿದ್ದಲ್ಲಿ ಮುಕ್ತವಾಗಿ ಚರ್ಚಿಸಲು ಈ ಸಭೆ ಆಯೋಜಿಸಲಾಗಿದ್ದು, ನಮ್ಮ ಇಲಾಖೆ ಜೊತೆಗೆ ಇತರೆ ಇಲಾಖೆಯ ಸಮಸ್ಯೆಗಳನ್ನು ಹೇಳಿಕೊಳ್ಳಲು ಸಾರ್ವಜನಿಕರಿಗೆ ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಎಂ. ಅಜ್ಜಣ್ಣ ಮಾತನಾಡಿ, ಪಟ್ಟಣದಲ್ಲಿ ಫುಟ್‌ಪಾತ್ ಅಂಗಡಿ ಗಳನ್ನು ತೆರವುಗೊಳಿಸಬೇಕು. ಮನೆ ಕಟ್ಟಲು ಎತ್ತಿನ ಬಂಡಿಯಲ್ಲಿ ಮರಳು ಉಪಯೋಗಿಸಲು ಅನುಮತಿ ನೀಡಬೇಕು ಎಂದು ಕೋರಿದರು.

ಪುರಸಭೆ ಅಧ್ಯಕ್ಷ ಎಚ್. ಎಂ. ಅಶೋಕ ಮಾತನಾಡಿ, ಪಟ್ಟಣದಲ್ಲಿ ಸಿಗ್ನಲ್ ವ್ಯವಸ್ಥೆ ಹಾಗೂ ಟ್ರಾಫಿಕ್ ಪೊಲೀಸ್ ಠಾಣೆ ಆಗಬೇಕು. ನೂತನ ಬಡಾವಣೆಗಳಲ್ಲಿ ರಸ್ತೆಯ ಮೇಲೆಯೇ ಮದ್ಯ ಸೇವನೆ ಮಾಡುವವರ ಸಂಖ್ಯೆ ಹೆಚ್ಚಿದ್ದು ತಡೆಗಟ್ಟಲು ಕೋರಿದರು.

ಪುರಸಭೆ ಸದಸ್ಯ ಜಾಕೀರ್ ಹುಸೇನ್ ಮಾತನಾಡಿ, ಆಟೋದವರು ಹೆಚ್ಚು ಬಾಡಿಗೆ ಸಂಗ್ರಹಿಸುತ್ತಾರೆ ಅದನ್ನು ತಡೆಗಟ್ಟಬೇಕು ಎಂದು ಮನವಿ ಮಾಡಿದರು.

ಡಗ್ಗಿಬಸಾಪುರದ ಅಣ್ಣಪ್ಪ, ಉಚ್ಚಂಗಿದುರ್ಗದ ಭರಮಣ್ಣ, ಗುಡಿಹಳ್ಳಿ ಹಾಲೇಶ್‌ರವರು ಮಾತನಾಡಿ, ಅರಸೀಕೆರೆ ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿ ಕೊರತೆ, ಠಾಣಾ ಕಟ್ಟಡ ಶಿಥಿಲಗೊಂಡಿದೆ, ಕಿರಾಣಿ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಪ್ರಕಾಶ ಮತ್ತಿಹಳ್ಳಿ ಮಾತನಾಡಿ, ಮತ್ತಿಹಳ್ಳಿ ಗ್ರಾಮದ ಮಧ್ಯದಲ್ಲಿರುವ ಮದ್ಯದ ಅಂಗಡಿ ಸ್ಥಳಾಂತರ ಮಾಡಬೇಕು, ಹಗರಿ ಗಜಾಪುರದ ಗೌರಿಪುರ, ಬಸವನಾಳು ಸಮೀಪ ಮರಳು ಟಿಪ್ಪರ್, ಟ್ರ್ಯಾಕ್ಟರ್ ವಾಹನಗಳು ಹೆಚ್ಚು ಓಡಾಡುತ್ತಿವೆ. ಇದರಿಂದ ಶಾಲಾ ಮಕ್ಕಳಿಗೆ ತೊಂದರೆಯಾಗಲಿದೆ ಎಂದು ಎಸ್‌ಪಿ ಗಮನಕ್ಕೆ ತಂದರು.

ಪಟ್ಟಣದಲ್ಲಿರುವ ಅವೈಜ್ಞಾನಿಕ ವೃತ್ತಗಳನ್ನು ತೆರವುಗೊಳಿಸಲು ವರುಣ, ಚಂದ್ರಪ್ಪ ಗಾಂಧಿ, ಇತರರು ಒತ್ತಾಯಿಸಿದರು.

ಎಚ್. ವೆಂಕಟೇಶ, ಹಾರಕನಾಳು ಪ್ರಕಾಶ ಗೌಡ ಮಾತನಾಡಿ, ಮೊಬೈಲ್‌ಗಳು ಹೆಚ್ಚು ಕಳ್ಳತನ ಆಗುತ್ತಿವೆ ಎಂದು ಗಮನ ಸೆಳೆದರು.

ಈ ಸಂದರ್ಭದಲ್ಲಿ ಪಿಎಸ್‌ಐಗಳಾದ ಶಾಂತಮೂರ್ತಿ, ಕಿರಣಕುಮಾರ್, ಗುರುರಾಜ, ಟಿ.ಜಿ. ನಾಗರಾಜ, ಹಲುವಾಗಲು ದನಕಾಯೋರ ಸೋಮಲಿಂಗಪ್ಪ, ಮಲ್ಕಪ್ಪ ಅಧಿಕಾರ, ಶಿವಾನಂದ, ಕೆಂಚಪ್ಪ, ಕೆ. ಗೋಣೆಪ್ಪ, ಬಾಗಳಿ ಕೊಟ್ರೇಶಪ್ಪ ಸೇರಿದಂತೆ ಇತರರು ಇದ್ದರು.

# ಗೊಲ್ಲರಹಳ್ಳಿಯಲ್ಲಿ ಹುಂಡಿ ಕಳುವು

ದಾವಣಗೆರೆ, ಫೆ.20- ತಾಲ್ಲೂಕಿನ ಗೊಲ್ಲರಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಹುಂಡಿ ಕಳ್ಳತನವಾಗಿದೆ. ದೇವಸ್ಥಾನದ ಬಾಗಿಲಿನ ಬೀಗ ಮುರಿದು ಒಳ ಪ್ರವೇಶಿಸಿದ ಕಳ್ಳರು, ಕಾಣಿಕೆ ಹೊಂಡಿಯನ್ನು ಕಳ್ಳತನ ಮಾಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಲಾಗಿದೆ.

# BEND THE TREND
EXCLUSIVE PARTY WEARS, ETHNC WEARS, LEHENGA CHOLI, CASUAL WEARS FOR ALL YOUR SPECIAL OCCASIONS.

Add. : VV Residency, 2nd main Road, SS Layout 'A' Block, Behind Lakshmi flour mill, Davangere-4.
Contact : + 91 84549 62227, 98861 75076



ಹೃತ್ಪೂರ್ವಕ ಅಭಿನಂದನೆಗಳು

ದಾವಣಗೆರೆ ಸಮೀಪದ ಶಿರಮಗೊಂಡನಹಳ್ಳಿ ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ
ಶ್ರೀ ಕೆ.ವೀರಾಚಾರಿ
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.
ನಿರ್ದೇಶಕರು
♦ ಎನ್.ಸುರೇಶ್ ಬಾಬು ♦ ಎ.ಬಿ.ಕರಿಬಸಪ್ಪ ♦ ಕೆ.ಜಿ.ರವಿಕುಮಾರ್ ♦ ಜಿ.ಹೆಚ್.ಉಮೇಶ್ ♦ ಚಂದ್ರಕಲಾ ♦ ರಾಮಚಂದ್ರಪ್ಪ ♦ ಭಾಗ್ಯಮ್ಮ ಐ.ಎಸ್., ♦ ರುದ್ರಮುನಿ ♦ ಹಾಲಮ್ಮ ಕರಿಯಪ್ಪ ♦ ಗಣೇಶಪ್ಪ ♦ ರಾಮಚಂದ್ರ ♦ ರೇವಣಸಿದ್ದಪ್ಪ ♦ ವಿಜಯಕುಮಾರ್ ♦ ಕಾರ್ಯದರ್ಶಿ : ನಾಗರಾಜ್
ಹಿತೈಷಿಗಳು
♦ ಎಸ್.ಎ.ವಿಜಯಕುಮಾರ್ ♦ ಕೋಲ್ಕುಂಟೆ ಅಶೋಕ್ ♦ ಎ.ವಸಂತಕುಮಾರ್ ♦ ಡಿ.ಎಂ.ವೀರೇಂದ್ರ ಪಾಟೀಲ್ ♦ ಕೇಶವಮೂರ್ತಿ ♦ ಜಿ.ಎ.ಮಂಜುನಾಥ ♦ ಎ.ಎಂ.ಮಂಜುನಾಥ ♦ ಡಿ. ಜಯಪ್ಪ ♦ ಗುಡ್ಡೇಶಪ್ಪ ♦ ಎ.ಹೆಚ್.ಚನ್ನಬಸಪ್ಪ ♦ ಮೌನೇಶ್ವರಾಚಾರ್ ♦ ಎಸ್.ಜಿ.ಷಣ್ಮುಖಪ್ಪ ♦ ಅಂಬಳ್ಳಿ ಬಸವರಾಜ್ ♦ ಎ.ಪಿ.ಚನ್ನಬಸಪ್ಪ ♦ ಎಸ್.ಎ.ಜಗದೀಶ್ ♦ ಎ.ಆರ್.ನಿಂಗರಾಜ್ ♦ ಎ.ಆರ್.ಬಸವರಾಜ್ ♦ ಗೌಡ್ರ ಹರೀಶ್ ♦ ಎಸ್.ಎನ್.ಶ್ರೀನಿವಾಸ್ ♦ ಆರ್.ದಿನೇಶ್ ♦ ಪಿ.ಮಹಾರುದ್ರಾಚಾರಿ ♦ ಎಸ್.ಪಿ.ಸಂತೋಷ್ ♦ ಗೌಡ್ರ ಬಸವರಾಜ್ ♦ ಎನ್.ಎಲ್.ಸಂತೋಷ್ ♦ ಆರ್.ಜೆ.ಪ್ರದೀಪ್ ♦ ಬಸವರಾಜ ಬಾವಿ ♦ ಸತೀಶ್ ವೆಟರ್ನರಿ ♦ ಎಸ್.ಬಿ.ಹರೀಶ್ ♦ ಮಾದೇಗೌಡ ♦ ಉಮೇಶ್ ಜೆ. ವಕೀಲರು, ♦ ಬಾಲಾಳ್ ಕುಮಾರ್ ಹಾಗೂ ಶಿರಮಗೊಂಡನಹಳ್ಳಿ ಗ್ರಾಮಸ್ಥರು.

# ಒಡಿಯೂರು ಗುರುದೇವ ಸೇವಾ ಬಳಗದಿಂದ ನಗರದಲ್ಲಿ ಇಂದಿನಿಂದ ಧಾರ್ಮಿಕ ಕಾರ್ಯಕ್ರಮ

ಒಡಿಯೂರು ಶ್ರೀ ಗುರುದೇವ ಸೇವಾ ಬಳಗದ ದಾವಣಗೆರೆ ಘಟಕದ 15ನೇ ವಾರ್ಷಿಕೋತ್ಸವದ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾಭವನದಲ್ಲಿ ಇಂದು ಮತ್ತು ನಾಳೆ ಹಮ್ಮಿಕೊಳ್ಳಲಾಗಿದೆ.

ದಿವ್ಯ ಸಾನ್ನಿಧ್ಯವನ್ನು ಶ್ರೀ ಗುರು ದೇವಾನಂದ ಸ್ವಾಮೀಜಿ ಹಾಗೂ ಸಾಧ್ವಿ ಶ್ರೀ ಮಾತಾನಂದಮಯಿ ವಹಿಸಲಿದ್ದಾರೆ.

ಇಂದು ಬೆಳಿಗ್ಗೆ 8 ಗಂಟೆಗೆ ನಗರದೇವತೆ ಶ್ರೀ ದುರ್ಗಾಂಬಿಕ ದೇವಿಗೆ ಪೂಜೆ ಹಾಗೂ ಸಂಕಲ್ಪ ಕಾರ್ಯಕ್ರಮ, ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ, ಸಂಜೆ 5 ಗಂಟೆಗೆ ಶ್ರೀಮತಿ ನಳಿನಿ ಅಚ್ಯುತ್ ಮತ್ತು ಸಂಗಡಿಗರಿಂದ ಭಕ್ತಿಗೀತೆಗಳ ಭಜನಾ ಕಾರ್ಯಕ್ರಮ ನಡೆಯಲಿದ್ದು, ಸಂಜೆ 6 ಗಂಟೆಗೆ ಉಭಯ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಧಾರ್ಮಿಕ ಸಮಾರೋಪ ಸಮಾರಂಭ ಜರುಗಲಿದೆ.

ಫೆ. 22 ರಂದು ಆವರಗೆರೆಯ ಸಿದ್ಧಲಿಂಗೇಶ್ವರ ಶಾಲೆಯ ಪಕ್ಕದಲ್ಲಿರುವ ನಿವೇಶನದಲ್ಲಿ ಶಿಲಾನ್ಯಾಸ ಕಾರ್ಯಕ್ರಮ ನಡೆಯಲಿದೆ.

# ಕುರಿ, ಮೇಕೆ ಘಟಕ ಅನುಷ್ಠಾನಕ್ಕಾಗಿ ಅರ್ಜಿ

ದಾವಣಗೆರೆ, ಫೆ.20- ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ವತಿಯಿಂದ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ ಕುರಿ, ಮೇಕೆ ಘಟಕ (10+01) ಅನುಷ್ಠಾನಕ್ಕಾಗಿ ನಿಗಮದ ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ 18 ರಿಂದ 60 ವರ್ಷ ವಯೋಮಾನದ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಇದೇ ದಿನಾಂಕ 24 ರೊಳಗಾಗಿ ಅರ್ಜಿ ಯನ್ನು ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ವನ್ನು ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

# ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ ವೀರಾಚಾರಿ



ದಾವಣಗೆರೆ, ಫೆ. 20- ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ ವೀರಾಚಾರಿ ಕೆ. ಅವರು ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಎನ್. ಸುರೇಶ್ ಬಾಬು, ಎ.ಬಿ.ಕರಿಬಸಪ್ಪ, ಕೆ. ಜಿ.ರವಿಕುಮಾರ್, ಜಿ.ಎಚ್.ಉಮೇಶ್, ಚಂದ್ರಕಲಾ, ರಾಮಚಂದ್ರಪ್ಪ, ಭಾಗ್ಯಮ್ಮ ಐ.ಎಸ್. ರುದ್ರಮನಿ, ಹಾಲಮ್ಮ ಕರಿಯಪ್ಪ, ಗಣೇಶಪ್ಪ, ರಾಮಚಂದ್ರ, ರೇವಣಸಿದ್ದಪ್ಪ, ವಿಜ ಯ್‌ಕುಮಾರ್, ಕಾರ್ಯದರ್ಶಿ ನಾಗರಾಜ್, ಎಸ್‌ಎ ವಿಜಯಕು ಮಾರ್, ಕೋಲ್ಕುಂಟೆ ಅಶೋಕ್, ಎ.ವಸಂತಕುಮಾರ್, ಡಿ.ಎಂ. ವೀರೇಂದ್ರ ಪಾಟೀಲ್, ಕೇಶವ ಮೂರ್ತಿ, ಜಿ.ಎ. ಮಂಜುನಾಥ್, ಎ.ಎಮ್ ಮಂಜುನಾಥ್, ಡಿ. ಜಯಪ್ಪ, ಗುಡ್ಡೇಶಪ್ಪ, ಎ.ಎಚ್, ಚನ್ನಬಸಪ್ಪ, ಮೌನೇಶ್ವರಚಾರ್, ಎಸ್.ಜಿ. ಷಣ್ಮುಖಪ್ಪ, ಅಂಬಳ್ಳಿ ಬಸವರಾಜ್, ಎ.ಪಿ. ಚನ್ನಬಸಪ್ಪ, ಎಸ್.ಎ. ಜಗದೀಶ್, ಎ.ಆರ್. ನಿಂಗರಾಜ್, ಎ.ಆರ್. ಬಸವರಾಜ್, ಗೌಡ್ರ ಹರೀಶ್, ಎಸ್.ಎನ್. ಶ್ರೀನಿವಾಸ್, ಆರ್.ದಿನೇಶ್, ಪಿ. ಮಹಾ ರುದ್ರಾಚಾರಿ, ಎಸ್.ಪಿ. ಸಂತೋಷ್, ಗೌಡ್ರ ಬಸವರಾಜ್, ಎನ್.ಎಲ್ ಸಂತೋಷ್, ಆರ್.ಜೆ. ಪ್ರದೀಪ್, ಬಸವರಾಜ ಬಾವಿ, ಸತೀಶ್ ವೆಟರ್ನರಿ, ಎಸ್‌ಬಿ ಹರೀಶ್, ಮಾದೇಗೌಡ, ಉಮೇಶ್ ಜೆ., ಬಾಲಾಳ್ ಕುಮಾರ್ ಇದ್ದರು.

# ಇಂದು ಪಾಲಿಕೆಯ ಆಯವ್ಯಯ ಸಾಮಾನ್ಯ ಸಭೆ

ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀಮತಿ ಜಯಮ್ಮ ಆರ್. ಗೋಪಿನಾಥ್ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಮಹಾನಗರಪಾಲಿಕೆಯ ಸಭಾಂಗಣದಲ್ಲಿ ಆಯ-ವ್ಯಯ ಸಾಮಾನ್ಯ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಪಾಲಿಕೆಯ ಪರಿಷತ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೀರಶೈವ ಸಮಾಜದ ಅಭ್ಯರ್ಥಿಗಳಿಗೆ ಹೆಚ್ಚು ಅವಕಾಶ ಕಲ್ಪಿಸಲು ಮನವಿ



## ಕಾಂಗ್ರೆಸ್ ವರಿಷ್ಠರಿಗೆ ಆಕಾಂಕ್ಷಿಗಳ ಒತ್ತಾಯ

ದಾವಣಗೆರೆ, ಫೆ. 20- ಮುಂಬರುವ ಚುನಾವಣೆಯಲ್ಲಿ ವೀರಶೈವ ಸಮಾಜದ ಹೆಚ್ಚಿನ ಆಕಾಂಕ್ಷಿಗಳಿಗೆ ಟಿಕೆಟ್ ನೀಡುವಂತೆ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸುವ ಬಗ್ಗೆ ಇತ್ತೀಚಿಗೆ ಬೆಂಗಳೂರಿನ ಬಸವ ಸಮಿತಿಯ ಅನುಭವ ಮಂಟಪದಲ್ಲಿ ನಡೆದ ವೀರಶೈವ ಲಿಂಗಾಯತ ಕಾಂಗ್ರೆಸ್ ಮುಖಂಡರು ಮತ್ತು 2023 ರ ಚುನಾವಣೆಯ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವೀರಶೈವ ಲಿಂಗಾಯತ ಆಕಾಂಕ್ಷಿಗಳಿಗೆ ಹೆಚ್ಚಿನ ಸ್ಥಾನಗಳನ್ನು ನೀಡುವಂತೆ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಕೆಪಿಸಿಸಿ ಮಾಜಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ ಸೇರಿದಂತೆ ಶಾಸಕರು, ಮಾಜಿ ಸಚಿವರು, 100 ಕ್ಕೂ ಹೆಚ್ಚು ಟಿಕೆಟ್ ಆಕಾಂಕ್ಷಿಗಳು ಭಾಗವಹಿಸಿದ್ದರು.

ಸ್ವಾತಂತ್ರ್ಯ ನಂತರ 1957 ರಿಂದ 2018 ರವರೆಗೆ ನಡೆದ ಚುನಾವಣೆಗಳ ಫಲಿತಾಂಶಗಳನ್ನು ಗಮನಿಸಿದರೆ ವೀರಶೈವ-ಲಿಂಗಾಯತರು, 1999 ರವರೆಗೆ ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸುತ್ತಾ ಬಂದಿರುವುದು ಕಂಡುಬರುತ್ತದೆ. ನಂತರದ ಬೆಳವಣಿಗೆಗಳಲ್ಲಿ ವೀರಶೈವ ಲಿಂಗಾಯತರು ಕಾಂಗ್ರೆಸ್ ಪಕ್ಷದಿಂದ ವಿಮುಖರಾಗಿ ಜನತಾ ಪಕ್ಷದ ಕಡೆಗೆ, ನಂತರ ಜನತಾ ಪಕ್ಷದಿಂದ ಬಿಜೆಪಿ ಬೆಂಬಲಿಸಿರುವುದು ಕಂಡುಬರುತ್ತದೆ. ಇದಕ್ಕೆ ಹಲವಾರು ಕಾರಣಗಳು. ಪಾರಂಪರಿಕವಾಗಿ ವೀರಶೈವ ಲಿಂಗಾಯತರು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಒಲವನ್ನು ಮತ್ತು ಶಕ್ತಿಯನ್ನು ತುಂಬಿದ್ದರೂ ಸಹ ಹೆಚ್ಚಿನ ಅವಕಾಶವನ್ನು ಕಲ್ಪಿಸದಿರುವುದರಿಂದ ಕಾಂಗ್ರೆಸ್ ಪಕ್ಷವು ಅಧಿಕಾರದಿಂದ ದೂರ ಇರಬೇಕಾಗಿ ಬಂದಿರುವುದು ಮೇಲಿನ ಚುನಾವಣೆಗಳ ಅಂಕಿ-ಅಂಶಗಳಿಂದ ದೃಢಪಟ್ಟಿದೆ.

ಈ ಎಲ್ಲಾ ಅಂಶಗಳನ್ನು ಕಾಂಗ್ರೆಸ್ ವರಿಷ್ಠರ ಗಮನಕ್ಕೆ ತಂದು ವೀರಶೈವ ಲಿಂಗಾಯತ ಸಮಾಜದವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದರ ಜೊತೆಗೆ ಕಾಂಗ್ರೆಸ್ ಪಕ್ಷದಿಂದ ವಿಮುಖರಾಗಿದ್ದ ವೀರಶೈವ ಲಿಂಗಾಯತ ಸಮಾಜವನ್ನು ಪುನಃ ಕಾಂಗ್ರೆಸ್ ಪಕ್ಷದ ಕಡೆಗೆ ಸೆಳೆಯಲು ಮತ್ತು ಈ ಅವಕಾಶವನ್ನು ಬಳಸಿಕೊಳ್ಳುವಂತೆ ವರಿಷ್ಠರನ್ನು ಒತ್ತಾಯಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ದಕ್ಷಿಣ ಕರ್ನಾಟಕ ಭಾಗದ ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 30 ರಿಂದ 40 ಸಾವಿರ ವೀರಶೈವ ಲಿಂಗಾಯತ ಮತದಾರರಿದ್ದು, ಬಹುತೇಕ ಈ ಮತಗಳೇ ನಿರ್ಣಾಯಕವಾಗಿರುತ್ತವೆ. ಈ ಹಿಂದಿನ ಚುನಾವಣೆಗಳ ಅಂಕಿ-ಅಂಶಗಳನ್ನು ಗಮನಿಸಿದರೆ, ಸುಮಾರು 15 ರಿಂದ 20 ಶಾಸಕರು ಈ ಜಿಲ್ಲೆಗಳಿಂದ ಆರಿಸಿ ಬರುತ್ತಿದ್ದರು. ಈ ಜಿಲ್ಲೆಗಳಿಂದ ಕಾಂಗ್ರೆಸ್ ಪಕ್ಷದಿಂದ ಅವಕಾಶ ಸಿಗದೇ ಕೇವಲ ಬೆರಳೆಣಿಕೆಯಷ್ಟು ಶಾಸಕರು ಆಯ್ಕೆಯಾಗುತ್ತಿದ್ದಾರೆ. ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ವೀರಶೈವ ಲಿಂಗಾಯತ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವಂತೆ ಒತ್ತಾಯಿಸಲು ಸಭೆ ಒಮ್ಮತದ ತೀರ್ಮಾನ ಕೈಗೊಂಡಿತು.

# ಪ್ರಧಾನಿ ಮೋದಿ ಪದಚ್ಯುತಿಗೆ 'ಡೀಪ್ ಸ್ಟೇಟ್' ಸಂಚು



## ಯುವ ಬ್ರಿಗೇಡ್ ಸ್ಥಾಪಕ ಚಕ್ರವರ್ತಿ ಸೂಲಿಬೆಲೆ

ದಾವಣಗೆರೆ, ಫೆ. 20 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಪದಚ್ಯುತಿಗೆ ವಿದೇಶದ 'ಡೀಪ್ ಸ್ಟೇಟ್' (ಪ್ರಭಾವಿಗಳ ಕೂಟ) ಸಂಚು ನಡೆಸಿದೆ. ಜಾತಿ - ಧರ್ಮ ಭೇದ ಮರೆತು ಇಂತಹ ಸಂಚಿನ ವಿರುದ್ಧ ಒಂದಾಗಬೇಕಿದೆ ಎಂದು ಯುವ ಬ್ರಿಗೇಡ್ ಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಕರೆ ನೀಡಿದ್ದಾರೆ.

ನಗರದ ಮೋತಿ ವೀರಪ್ಪ ಕಾಲೇಜಿನ ಆವರಣದಲ್ಲಿ ಯುವ ಬ್ರಿಗೇಡ್ ವತಿಯಿಂದ ಇಂದು ಆಯೋಜಿಸಲಾಗಿದ್ದ 'ಅನ್‌ಸ್ಟಾಪೆಬಲ್ ಯುವ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಅಮೆರಿಕದಲ್ಲಿ ಡ್ರಗ್ ಮಾಫಿಯ, ಔಷಧ ಮಾಫಿಯಾ, ಚಿತ್ರರಂಗ, ವ್ಯಾಪಾರ ವಲಯದ ಪ್ರಭಾವಿಗಳು ಸೇರಿಕೊಂಡು ಕೂಟ ರಚಿಸಿದ್ದಾರೆ. ಇವರೆಲ್ಲ ಬೇರೆ ಬೇರೆ ದೇಶಗಳ ಸರ್ಕಾರಗಳ ಬಗ್ಗೆ ನಿರ್ಧರಿಸುವ ತಂತ್ರ ನಡೆಸುತ್ತಾರೆ. ಇಂತಹ 'ಡೀಪ್ ಸ್ಟೇಟ್' ಮುಖ್ಯಸ್ಥರಲ್ಲಿ ಒಬ್ಬರಾದ ಜಾರ್ಜ್ ಸೊರೊಸ್, ಮೋದಿಯವರನ್ನು ಅಧಿಕಾರದಿಂದ ಕಿತ್ತು ಹಾಕುವುದೇ ಗುರಿ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಯಾವನೋ ಒಬ್ಬ ವಿದೇಶದಲ್ಲಿ ಕುಳಿತು ಇಲ್ಲಿನ ಪ್ರಧಾನಿ ಬದಲಿಸುತ್ತೇನೆ ಎಂದರೆ ಎಂತಹ ದಾರ್ಷ್ಟ್ಯ? ಭಾರತದಲ್ಲಿ ಜಾತಿ ಹಾಗೂ ಧರ್ಮದ ಬಗ್ಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ, ವಿದೇಶಿ ಶಕ್ತಿಗಳ ಇಂತಹ ಹುನ್ನಾರದ ವಿರುದ್ಧ ಭಾರತದ ಯುವಕರು ಒಂದಾಗಬೇಕು ಎಂದು ಸೂಲಿಬೆಲೆ ಕರೆ ನೀಡಿದರು.


ಡೀಪ್ ಸ್ಟೇಟ್‌ನ ಜಾರ್ಜ್ ಸೊರೊಸ್ ಕಂಪನಿಯಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಪುತ್ರಿ ಅಮೃತಾ ಸಿಂಗ್ ಕೆಲಸ ಮಾಡಿದ್ದರು. ಯುಪಿಎ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ನೇತೃತ್ವದ ಸಲಹಾ ಸಮಿತಿಯಲ್ಲಿದ್ದ ಹರ್ಷ ಮಂದಾರ್ ಹಾಗೂ ಭಾರತ್ ಜೋಡೋ ಯಾತ್ರೆಯಲ್ಲಿ ರಾಹುಲ್ ಗಾಂಧಿ ಜೊತೆಗಿದ್ದ ಸಲೀಲ್ ಶೆಟ್ಟಿ ಅವರು ಸೊರೊಸ್ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿರುವವರು ಎಂದು ಸೂಲಿಬೆಲೆ ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಹಿರೇಹಡಗಲಿಯ ಹಾಲ ಸಂಸ್ಥಾನ ಮಠದ ಶ್ರೀ ಅಭಿನವ ಹಾಲಸ್ವಾಮೀಜಿ ಮಾತನಾಡಿ, ನವಭಾರತದ ನಿರ್ಮಾಣ ಆರಂಭವಾಗಿದೆ. ಯುವಕರು ನವಭಾರತಕ್ಕೆ ಕಲಶ ಇಡುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಯುವ ಬ್ರಿಗೇಡ್‌ನ ಕಿರಣ್ ರಾಮ್, ಧರ್ಮ ಹೊನ್ನಾರಿ, ವರ್ಧಮಾನ್ ತ್ಯಾಗಿ, ಕಿರಣ್ ರಾಮ್ ಉಪಸ್ಥಿತರಿದ್ದರು.

ಇದಕ್ಕೂ ಮುಂಚೆ ರಾಜ್ಯದ ಉತ್ತರ ಹಾಗೂ ದಕ್ಷಿಣ ಭಾಗಗಳಿಂದ ಆರಂಭವಾಗಿದ್ದ ಅನ್‌ಸ್ಟಾಪೆಬಲ್ ಜಾಗೃತಿ ಬೈಕ್ ರ್‍ಯಾಲಿಗಳು ದಾವಣಗೆರೆಯಲ್ಲಿ ಸೇರಿದವು. ನಗರದ ಪ್ರಮುಖ ಬೀದಿಗಳಲ್ಲಿ ರ್‍ಯಾಲಿ ನಡೆದು, ವೇದಿಕೆ ಕಾರ್ಯಕ್ರಮದ ಸ್ಥಳ ತಲುಪಿತು.

# ಹಿರಿಯ ಚಿತ್ರ ನಿರ್ದೇಶಕ ಎಸ್.ಕೆ. ಭಗವಾನ್ ಇನ್ನಿಲ್ಲ



ಬೆಂಗಳೂರು, ಫೆ. 20 – ಹಿರಿಯ ಚಿತ್ರ ನಿರ್ದೇಶಕ ಹಾಗೂ ನಿರ್ಮಾಪಕ ಎಸ್.ಕೆ. ಭಗವಾನ್ ನಿಧನರಾಗಿ ದ್ದಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು. ದೊರೈರಾಜ್ ಅವರ ಜೊತೆಗೂಡಿ ಕನ್ನಡ ಚಿತ್ರರಂಗಕ್ಕೆ ಹಲವಾರು ಹಿಟ್ ಚಿತ್ರಗಳನ್ನು ನೀಡಿದ್ದ ಭಗವಾನ್, ಇತ್ತೀಚಿನ ದಿನಗಳಲ್ಲಿ ತೀವ್ರ ಅಸ್ವಸ್ಥರಾಗಿದ್ದರು. ಮೈಸೂರಿನಲ್ಲಿ ಫೆಬ್ರವರಿ 20, 1933ರಲ್ಲಿ ಅವರು ಜನಿಸಿದ್ದರು. ಅವರು ಜನಿಸಿದ ದಿನದಂದೇ ಚಿರನಿದ್ರೆಗೆ ಜಾರಿದ್ದಾರೆ.

1968ರಲ್ಲಿ ಅವರು ದೊರೈರಾಜ್ ಜೊತೆ ನಿರ್ದೇಶಿಸಿದ 'ಜೇಡರ ಬಲೆ' ಕನ್ನಡ ಚಿತ್ರರಂಗಕ್ಕೆ ಜೇಮ್ಸ್ ಬಾಂಡ್ ರೀತಿಯ ಚಿತ್ರ ಪರಿಚಯಿಸಿತು. ಕಸ್ತೂರಿ ನಿವಾಸ, ಎರಡು ಕನಸು, ಬಯಲು ದಾರಿ, ಗಿರಿ ಕನ್ಯೆ ಸೇರಿದಂತೆ ಹಲವು ಯಶಸ್ವಿ ಚಿತ್ರಗಳನ್ನು ಬೆಳ್ಳಿತೆರೆಗೆ ತಂದರು. ಇವರು ನಿರ್ದೇಶಿಸಿರುವ 30 ಚಿತ್ರಗಳಲ್ಲಿ ಡಾ.ರಾಜಕುಮಾರ್ ನಾಯಕರಾಗಿ ಅಭಿನಯಿಸಿದ್ದಾರೆ. ಎಸ್.ಕೆ. ಭಗವಾನ್ 65 ವರ್ಷದ ಸುದೀರ್ಘ ಸಿನಿಮಾ ರಂಗದ ಅನುಭವ ಹೊಂದಿದ್ದ ದಿಗ್ಗಜರಾಗಿದ್ದರು.

# ಉನ್ನತ ಅಧಿಕಾರಿಗಳಿಬ್ಬರ ವಜಾಕ್ಕೆ ಒತ್ತಾಯ



ದಾವಣಗೆರೆ, ಫೆ. 20- ಅನಾಗರಿಕರಂತೆ ಸಾಮಾಜಿಕ ಜಾಲತಾಣದಲ್ಲಿ ಕುಟುಕುವ ಮೂಲಕ ಬೀದಿ ರಂಪಕ್ಕೆ ಕಾರಣರಾಗುತ್ತಿರುವ ಉನ್ನತ ಹುದ್ದೆಯಲ್ಲಿರುವ ಐಪಿಎಸ್ ಅಧಿಕಾರಿಗಳಿಬ್ಬರನ್ನೂ ಕೂಡಲೇ ಸೇವೆಯಿಂದ ವಜಾಗೊಳಿಸುವಂತೆ ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್ ಚಂದ್ರ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇವರಿಬ್ಬರ ಬೀದಿ ಜಗಳ ಸಾರ್ವಜನಿಕರಿಗೆ ಮನರಂಜನೆಯಾಗಿದೆ. ಇವರಿಬ್ಬರ ಸಾಮಾಜಿಕ ಜಾಲತಾಣದ ಜಗಳ ನೋಡಿಯೂ ಮೌನವಹಿಸಿರುವ ಸರ್ಕಾರ ನಿಷ್ಕ್ರಿಯೆವಾಗಿದೆ ಎಂದು ತೋರಿಸಿಕೊಟ್ಟಿದೆ. ಈ ಪ್ರಕರಣದ ಬಗ್ಗೆ ಯಾವ ರೀತಿ ಕ್ರಮ ಕೈಗೊಂಡಿದೆ ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಪ್ರಮುಖ ಹುದ್ದೆಯಲ್ಲಿರುವ ಈ ಇಬ್ಬರೂ ಅಧಿಕಾರಿಗಳ ವರ್ತನೆ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆಯೋ, ಇಲ್ಲವೋ ಗೊತ್ತಿಲ್ಲ. ಆದರೆ ಸಾರ್ವಜನಿಕರಿಗೆ ಇವರ ನಡವಳಿಕೆ ಮತ್ತು ಸರ್ಕಾರದ ಅಸಹಾಯಕತೆ ನಗೆಗಡಲಿಗೆ ಕಾರಣವಾಗಿದೆ ಎಂದಿದ್ದಾರೆ.

ಕೂಡಲೇ ಈ ಇಬ್ಬರೂ ಅಧಿಕಾರಿಗಳನ್ನು ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸಬೇಕು. ಇಲ್ಲದಿದ್ದರೆ ಇವರ ಸೇವೆಯನ್ನು ಕೇಂದ್ರಕ್ಕೆ ರವಾನಿಸಬೇಕು. ಕೇಂದ್ರದ ಗೃಹಮಂತ್ರಿ ಅಮಿತ್ ಷಾ ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಿದರೆ ಅವರಿಂದ ಕೆಲವು ನೀತಿ ಸಂಹಿತೆಗಳನ್ನಾದರೂ ಕಲಿಯಬಹುದು ಎಂದು ತಿಳಿಸಿದ್ದಾರೆ.

ಇದೂ ಸಾಧ್ಯವಾಗದಿದ್ದರೆ ಕೂಡಲೇ ಸೇವೆಯಿಂದ ವಜಾಗೊಳಿಸುವಂತೆ ಸುಭಾಶ್ಚಂದ್ರ ಆಗ್ರಹಿಸಿದ್ದಾರೆ.

# ನೀತಿ ಆಯೋಗದ ಸಿಇಒ ಆಗಿ ಬಿ.ವಿ.ಆರ್. ಸುಬ್ರಮಣ್ಯಂ



ನವದೆಹಲಿ, ಫೆ. 20 – ಮಾಜಿ ಐಎಎಸ್ ಅಧಿಕಾರಿ ಬಿ.ವಿ. ಆರ್. ಸುಬ್ರಮಣ್ಯಂ ಅವರನ್ನು ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿ ನೇಮಿಸಲಾಗಿದೆ. ಇದುವರೆಗೂ ಈ ಜಾಗದಲ್ಲಿದ್ದ ಪರಮೇಶ್ವರನ್ ಅಯ್ಯರ್ ಅವರನ್ನು ವಿಶ್ವ ಬ್ಯಾಂಕ್ ಕಾರ್ಯಕಾರಿ ನಿರ್ದೇಶಕರಾಗಿ ನೇಮಿಸಲಾಗಿದೆ.

ಛತ್ತೀಸ್‌ಘಡ ತಂಡದ ಅಧಿಕಾರಿ ಸುಬ್ರಮಣ್ಯಂ ಅವರು ಇದುವರೆಗೂ ವ್ಯಾಪಾರ ಉತ್ತೇಜನ ಸಂಘಟನೆಯಾದ ಐ.ಟಿ.ಪಿ.ಒ. ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

# ಅದಾನಿ ಪೋರ್ಟ್ಸ್‌ನಿಂದ 1,500 ಕೋಟಿ ರೂ. ಸಾಲ ಪಾವತಿ

ನವದೆಹಲಿ, ಫೆ. 20 – ಅದಾನಿ ಸಮೂಹದ ಅದಾನಿ ಪೋರ್ಟ್ಸ್ ಹಾಗೂ ಎಸ್‌ಇಝಡ್ ಕಂಪನಿಯು 1,500 ಕೋಟಿ ರೂ.ಗಳ ಸಾಲ ಮರು ಪಾವತಿ ಮಾಡಿದೆ. ಷೇರುಗಳ ಮೌಲ್ಯ ತೀವ್ರ ಕುಸಿತದ ಪರಿಸ್ಥಿತಿಯಿಂದ ಹೊರ ಬರಲು ಕಂಪನಿ ಈ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಸೋಮವಾರ 1,500 ಕೋಟಿ ರೂ.ಗಳ ಸಾಲ ಮರು ಪಾವತಿ ಮಾಡಲಾಗಿದೆ. ಮಾರ್ಚ್ ಒಳಗೆ ಇನ್ನೂ 1,000 ಕೋಟಿ ರೂ.ಗಳನ್ನು ಪಾವತಿಸುವುದಾಗಿ ಕಂಪನಿ ಹೇಳಿದೆ.


## ಹೃದಯಪೂರ್ವಕ ಅಭಿನಂದನೆಗಳು



ಮುರುಡೇಶ್ವರದಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಮಟ್ಟದ 'ಕರಾವಳಿ ನೃತ್ಯೋತ್ಸವ-2023' ರಲ್ಲಿ ಭಾಗವಹಿಸಿ, ದ್ವಿತೀಯ ಬಹುಮಾನ ಪಡೆದಿರುವ ದಾವಣಗೆರೆಯ ನೃತ್ಯ ಸಂಯೋಜಕರಾದ ದಯಾನಂದ್ ಎಸ್. ಹಾಗೂ ಆನಂದ್ ಎಸ್. ಅವರ ನೇತೃತ್ವದ ಸುಪ್ರಸಿದ್ಧ ನೃತ್ಯ ತಂಡ 'ಡಿ-ವೈರಸ್ ಸ್ಪನ್ನರ್ನ್ಸ್' ಸಂಸ್ಥೆಯ ನೃತ್ಯ ವಿದ್ಯಾರ್ಥಿನಿ ಹಾಗೂ ತರಳಬಾಳು ಶಾಲೆಯ ವಿದ್ಯಾರ್ಥಿನಿ

ಕು|| ಎಮ್.ವಿ. ಗುಣಶ್ರೀ

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

- ಶ್ರೀನಿವಾಸರಾವ್ ಎಂ.ಜಿ.
- ಶ್ರೀಮತಿ ನಿರ್ಮಲ ಮತ್ತು ಎಂ.ಎಸ್. ವಿಠ್ಠಲ್, ಮಾಜಿ ಮಹಾಪೌರರು ಮತ್ತು ಅಧ್ಯಕ್ಷರು, ನಾಮದೇವ ಶಿಂಪಿ ಸಮಾಜ, ದಾವಣಗೆರೆ.
- ಗಣೇಶ್ ಎಂ.ವಿ.
- ಸ್ವಾತಿ ಎಂ.ವಿ. ✦ ಅಮೃತವರ್ಷಿಣಿ ಎಂ.ವಿ.
- ಶ್ರೀಮತಿ ತೇಜಸ್ವಿನಿ ಮತ್ತು ಪ್ರತೀಕ್ ರಾಶಿಂಕರ್, ಮೈಸೂರು.

ಹಾಗೂ ಸಿಬ್ಬಂದಿ ವರ್ಗದವರು

ಮಹೇಂದ್ರಕರ್ ಟೆಕ್ಸ್‌ಟೈಲ್ಸ್
ನರಸರಾಜ ರಸ್ತೆ, ದಾವಣಗೆರೆ.


# ಕಸಾಪ ತಾಲ್ಲೂಕು ಸಮ್ಮೇಳನದ ಸರ್ವಾಧ್ಯಕ್ಷರಿಗೆ ಆಹ್ವಾನ



ದಾವಣಗೆರೆ, ಫೆ. 20- ಹೊಸ ಬೆಳವನೂರು ಗ್ರಾಮದಲ್ಲಿ ಇದೇ ದಿನಾಂಕ 27ರಂದು ನಡೆಯುವ ದಾವಣಗೆರೆ ತಾಲ್ಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಸಾಹಿತಿ, ಹಿರಿಯ ಪತ್ರಕರ್ತ ಬಿ. ಎನ್. ಮಲ್ಲೇಶ್ ಅವರನ್ನು ಅಧಿಕೃತವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ನೇತೃತ್ವದಲ್ಲಿ ಬಿ.ಎನ್. ಮಲ್ಲೇಶ್ ನಿವಾಸಕ್ಕೆ ತೆರಳಿ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿಕೊಳ್ಳಲು ಅಧಿಕೃತವಾಗಿ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ವಾಮದೇವಪ್ಪ ಮಾತನಾಡಿ, ಬಿ.ಎನ್. ಮಲ್ಲೇಶ್ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಸೂಕ್ತವಾದದ್ದು. ಅವರ ಬಹುಮುಖ ಸಾಹಿತ್ಯ ಪ್ರತಿಭೆ, ಕನ್ನಡದ ಬಗ್ಗೆ ಅಪಾರ ಕಾಳಜಿ, ಅಭಿಮಾನ, ಅನುಭವ ಈ ಸಮ್ಮೇಳನದಲ್ಲಿ ಅನಾವರಣಗೊಳ್ಳಲಿ. ಎಲ್ಲಾ ಸಾಹಿತ್ಯ ಅಭಿಮಾನಿಗಳಿಗೆ ಅವರ ವಿಚಾರಧಾರೆ ಈ ಸಮ್ಮೇಳನದ ಮೂಲಕ ತಲುಪಲಿ ಎಂದು ಆಶಯ ವ್ಯಕ್ತಪಡಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಮಲ್ಲೇಶ್ ಮಾತನಾಡಿ, ನನ್ನಲ್ಲಿ ಕನ್ನಡದ ಬಗ್ಗೆ ಅಭಿಮಾನ ಮೂಡಿಸಿದ ವಿದ್ಯಾಗುರುಗಳಾದ ಡಾ.ಎಂ.ಜಿ. ಈಶ್ವರಪ್ಪ, ಡಾ. ಬರಗೂರು ರಾಮಚಂದ್ರಪ್ಪ ಹಾಗೂ ನನ್ನ ತಂದೆಯನ್ನು ಪ್ರೀತಿಯಿಂದ ಈ ಸಂದರ್ಭದಲ್ಲಿ ನೆನೆಸಿಕೊಳ್ಳುತ್ತಾ, ನನ್ನ ಈ ಹೆಗ್ಗಳಿಕೆಗೆ ಕಾರಣರಾದ ಗುರು-ಹಿರಿಯರಿಗೆ ನಮಿಸುತ್ತೇನೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು.

ಈ ವೇಳೆ ಸಮ್ಮೇಳನದ ಕುರಿತಾಗಿ ತಮ್ಮದೇ ಆಶಯ ವ್ಯಕ್ತಪಡಿಸಿ ಸಮ್ಮೇಳನಾಧ್ಯಕ್ಷ ಮೆರವಣಿಗೆಯ ಪೀಠದಲ್ಲಿ ನನ್ನನ್ನು ಕೂರಿಸುವ ಬದಲಾಗಿ ಕನ್ನಡ ತಾಯಿ ಭುವನೇಶ್ವರಿ ದೇವಿ ಭಾವಚಿತ್ರದೊಂದಿಗೆ ಶರಣರ ವಚನ ಸಾಹಿತ್ಯದ ಪುಸ್ತಕಗಳು, ವಿಶ್ವಮಾನ ಸಂದೇಶ ಸಾರಿದ ಕುವೆಂಪು, ಡಾ. ಜಿ.ಎಸ್. ಶಿವರುದ್ರಪ್ಪನವರ ಪುಸ್ತಕಗಳು, ಭಾರತದ ಸಂವಿಧಾನ ಪುಸ್ತಕ ಇಟ್ಟು ಮೆರವಣಿಗೆ ಮಾಡಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ, ಮಾಜಿ ಅಧ್ಯಕ್ಷ ಎ. ಆರ್. ಉಜ್ಜನಪ್ಪ, ತಾ. ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಜಿಲ್ಲಾ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಸಂಘಟನಾ ಕಾರ್ಯದರ್ಶಿ ಜಗದೀಶ್ ಕೂಲಂಬಿ, ಸೌಭಾಗ್ಯ, ಗ್ರಾಮದ ಹಿರಿಯರಾದ ಬಸವರಾಜಪ್ಪ, ಮಹೇಂದ್ರಪ್ಪ, ಮಲ್ಲಿಕಾರ್ಜುನ, ಮಹಾಂತೇಶ್, ಮಂಜಪ್ಪ, ಬಸವರಾಜಪ್ಪ, ಮಂಜಪ್ಪ, ಗ್ರಾ.ಪಂ. ಸದಸ್ಯರು, ಕೋಶಾಧ್ಯಕ್ಷ ರಾಘವೇಂದ್ರ ನಾಯರಿ, ಮಲ್ಲಮ್ಮ, ರುದ್ರಾಕ್ಷಿಬಾಯಿ, ಸತ್ಯಭಾಮ, ನಾಗರಾಜ್ ಸಿರಿಗೆರೆ, ದಾಗಿನಕಟ್ಟೆ ಪರಮೇಶ್ವರಪ್ಪ, ಪಾಲಾಕ್ಷಪ್ಪ ಗೋಪನಾಳು, ಬೇತೂರು ಷಡಾಕ್ಷರಪ್ಪ, ಶಿವಕುಮಾರ್, ಪರಿಮಳ ಜಗದೀಶ್, ಪಂಕಜಾ ಬಕ್ಕೇಶ್, ಸೌಭಾಗ್ಯ, ಮಮತಾ, ರೂಪಕಲಾ, ಪದ್ಮ, ಕಲ್ಪನಾ ಉಪಸ್ಥಿತರಿದ್ದರು.


## ವಿದೇಶ ಪ್ರವಾಸ - ಶುಭಾಶಯಗಳು




'ಆಸ್ಟ್ರೇಲಿಯಾ'ದ ಪ್ರವಾಸಿ ತಾಣಗಳನ್ನು ಆಸ್ವಾದಿಸಲು ದಿನಾಂಕ 21.2.2023ರಿಂದ ವಿದೇಶ ಪ್ರವಾಸ ಕೈಗೊಂಡಿರುವ ನಮ್ಮೆಲ್ಲರ ಆತ್ಮೀಯರಾದ

ಶ್ರೀ ಸ್ವರೂಪ್ ಕುಮಾರ್ ಎಂ.ಜೆ.

ಮತ್ತು ಮೊದಲ ಬಾರಿಗೆ ವಿದೇಶ ಪ್ರವಾಸ ಕೈಗೊಳ್ಳುತ್ತಿರುವ

ಶ್ರೀ ರಾಘವೇಂದ್ರ ಹಳ್ಳೇರಮನೆ

ಅವರುಗಳ ವಿದೇಶ ಪ್ರವಾಸಕ್ಕೆ ಹಾರ್ದಿಕ ಶುಭಾಶಯಗಳು...

- ವಿನಯ್‌ಕುಮಾರ್ ಡಿ.ವಿ. (ಆಸ್ಟ್ರೇಲಿಯಾ)
- ಮನೋಹರ ಎಂ.ಆರ್. ✦ ಪ್ರದೀಪ್ ಎನ್.ಎಸ್.
- ವಿನಯ್ (ಬ್ರದರ್) ✦ ಶ್ರೀಹರ್ಷ ✦ ಕುರ್ಕಿ ಶೈಲೇಂದ್ರ
- ವಿದೇಶ ಪ್ರವಾಸ ಕೈಗೊಂಡಿರುವವರ ಕುಟುಂಬ ವರ್ಗದವರು



## ಬಾಪೂಜಿ ವಿದ್ಯಾಸಂಸ್ಥೆ

2ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002

## ವಾಹನ ಹರಾಜು ನೋಟೀಸ್

ಬಾಪೂಜಿ ವಿದ್ಯಾಸಂಸ್ಥೆಯ ಎಸ್.ಎಸ್. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರ ಹೆಸರಿನಲ್ಲಿರುವ ಹಾಗೂ ದಾವಣಗೆರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ನೋಂದಣಿ ರದ್ದುಪಡಿಸಲ್ಪಟ್ಟ 'ಟಾಟಾ ಸ್ಕೂಲ್ ಬಸ್ (TATA School Bus) ಅನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ದಿನಾಂಕ 22ನೇ ಫೆಬ್ರವರಿ 2023 (22.02.2023)ರ ಬುಧವಾರ ಸಂಜೆ 6.00 ಗಂಟೆಗೆ ದಾವಣಗೆರೆ ಪಿ.ಜೆ. ಬಡಾವಣೆ, 2ನೇ ಮುಖ್ಯ ರಸ್ತೆಯಲ್ಲಿ ಇರುವ ಬಾಪೂಜಿ ವಿದ್ಯಾಸಂಸ್ಥೆಯ ಒಳಾಂಗಣದಲ್ಲಿ ಹರಾಜು ಮೂಲಕ ಮಾರಾಟ ಮಾಡಲಾಗುವುದು. ವಾಹನವನ್ನು ಸದರಿ ದಿನಾಂಕದಂದು ಬೆಳಿಗ್ಗೆ 10.00 ಗಂಟೆಯಿಂದ ಸಂಸ್ಥೆಯ ಮೇಲ್ಕಾಣಿಸಿದ ಕಛೇರಿ ಆವರಣದಲ್ಲಿ ನೋಡಬಹುದಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಖುದ್ದಾಗಿ ಮೇಲ್ಕಾಣಿಸಿದ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಹರಾಜಿನಲ್ಲಿ ಭಾಗವಹಿಸುವವರು ಕೆಳಕಂಡ ಷರತ್ತುಗೊಳಪಟ್ಟಿರುತ್ತಾರೆ.

(1) ಹರಾಜಿನಲ್ಲಿ ಭಾಗವಹಿಸುವವರು ರೂ.10,000.00 (ಹತ್ತು ಸಾವಿರ ರೂಪಾಯಿ)ಗಳನ್ನು ನಗದಾಗಿ ಹರಾಜಿಗೆ ಮುನ್ನ ಠೇವಣಿ ಇಟ್ಟು ರಸೀದಿ ಪಡೆದವರಾಗಿರಬೇಕು. (2) ಹರಾಜು ಯಾರಿಗೆ ನಿಲ್ಲುತ್ತದೆಯೋ ಅವರು ಕೊಳ್ಳಲು ಒಪ್ಪಿದ ಮೊಬಲಗಿನ ಶೇಕಡಾ 25 ಭಾಗ ಹಣವನ್ನು ಹರಾಜು ಮುಗಿದ ತಕ್ಷಣ ಡಿ.ಡಿ. ಮುಖಾಂತರ ಕೊಡತಕ್ಕದ್ದು. ಹಾಗೆ ಮಾಡದಿದ್ದಲ್ಲಿ ಹರಾಜು ರದ್ದುಗೊಳಿಸಲಾಗುತ್ತದೆ ಮತ್ತು ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (3) ಶೇಕಡಾ 25 ಭಾಗವನ್ನು ಕಟ್ಟಿದ ನಂತರ ಕೊಳ್ಳಲು ಒಪ್ಪಿರುವವರು ಉಳಿದ ಹಣವನ್ನು ಒಂದು ವಾರದೊಳಗೆ ಡಿ.ಡಿ. ಮುಖಾಂತರ ಪಾವತಿ ಮಾಡಿ ಸಂಬಂಧಿಸಿದ ವಾಹನವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಳ್ಳತಕ್ಕದ್ದು. (4) ಒಂದು ವೇಳೆ ಒಂದು ವಾರದಲ್ಲಿ ಉಳಿದ ಹಣವನ್ನು ಸಂಸ್ಥೆಗೆ ಕಟ್ಟಲು ತಪ್ಪಿದಲ್ಲಿ ಈ ವಿಷಯದ ಬಗ್ಗೆ ಯಾವ ನೋಟೀಸ್ ಕೊಡದೆ ಕಟ್ಟಿದ ಎಲ್ಲಾ ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (5) ಸವಾಲುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ಕೆಳ ಸಹಿದಾರರು ಕಾಯ್ದಿರಿಸಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಯಾವುದೇ ತಕರಾರುಗಳನ್ನು ಅಂಗೀಕರಿಸುವುದಿಲ್ಲ.

ಸಹಿ/- (ಡಾ. ಶಾಮನೂರು ಶಿವಶಂಕರಪ್ಪ)
ಗೌರವ ಕಾರ್ಯದರ್ಶಿಗಳು


# ವಿದ್ಯುತ್ ಅವಘಡ ಇಬ್ಬರ ಸಾವು

ದಾವಣಗೆರೆ, ಫೆ. 20- ಅಡಿಕೆ ತೋಟದಲ್ಲಿ ನೀರು ಹಾಯಿಸಲು ಹೋದಾಗ ಸಂಭವಿಸಿದ ವಿದ್ಯುತ್ ಅವಘಡದಿಂದ ಇಬ್ಬರು ವ್ಯಕ್ತಿಗಳು ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ತಾಲ್ಲೂಕಿನ ಬಾಡಾ ಗ್ರಾಮದಲ್ಲಿ ನಡೆದಿದೆ. ಅಡಿಕೆ ತೋಟದ ಮಾಲೀಕ ಮಂಜುನಾಥ (65), ಕೂಲಿ ಕಾರ್ಮಿಕ ಕತ್ತಲಗೆರೆ ಚಂದ್ರಪ್ಪ (45) ಸಾವಿಗೀಡಾದ ದುರ್ದೈವಿಗಳು. ತೋಟದ ಮಾಲೀಕ ಮಂಜುನಾಥ್ ಪಂಪ್‌ಸೆಟ್ ಆನ್ ಮಾಡಲು ಹೋದಾಗ ಮದರ್ ಬೋರ್ಡ್‌ಗೆ ಸ್ಪರ್ಶ ಉಂಟಾಗಿ ವಿದ್ಯುತ್ ತಗುಲಿದ್ದರಿಂದ ಈ ದುರ್ಘಟನೆ ಸಂಭವಿಸಿದೆ. ಇದೇ ವೇಳೆ ಮಂಜುನಾಥ್ ಅವರನ್ನು ರಕ್ಷಿಸಲು ಹೋದ ಕಾರ್ಮಿಕ ಚಂದ್ರಪ್ಪನಿಗೂ ವಿದ್ಯುತ್ ಸ್ಪರ್ಶ ಉಂಟಾಗಿ ಇಬ್ಬರೂ ಸ್ಥಳದಲ್ಲೇ ಅಸುನೀಗಿದ್ದಾರೆ.


## Congrats TOT 2022 Award and 13th year MDRT Award in a Row

*History in SBI Life Insurance in Karnataka Topper*

COT MDRT TOT

SBI Life — Apne liye. Apno ke liye.

3 Times / 13 Times / 2022

ಇವರು ಜೀವವಿಮಾ ರಂಗದಲ್ಲಿ ಸಾಧನೆಗೈದ ಫೈನಾನ್ಸಿಯಲ್ ಅಡ್ವೈಸರ್‌ಗೆ ನೀಡುವ ವಿಶ್ವ ದರ್ಜೆ ಶ್ರೇಷ್ಠ ಪ್ರಶಸ್ತಿ MDRT, COT ಮತ್ತು TOT ಅವಾರ್ಡ್ ಪಡೆದಿರುತ್ತಾರೆ. ಇವರು 2023ನೇ ಸಾಲಿನ USA ನಲ್ಲಿ ನಡೆಯಲಿರುವ ಫೈನಾನ್ಸಿಯಲ್ ಬಿಜಿನೆಸ್ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದಿರುತ್ತಾರೆ. ಉತ್ತಮ ಸೇವೆ ಮತ್ತು Tax planing ಇದರ ಬಗ್ಗೆ ಗ್ರಾಹಕರಿಗೆ ಮನದಟ್ಟು ಮಾಡಿಕೊಟ್ಟು ಗ್ರಾಹಕರ ಮೆಚ್ಚುಗೆ ಪಡೆದಿರುತ್ತಾರೆ. ಇವರು ದಾವಣಗೆರೆ ಜಿಲ್ಲೆಯ ಇತಿಹಾಸದಲ್ಲಿ ಪ್ರಪ್ರಥಮ TOT Advisor ಆಗಿ ಹೊರಹೊಮ್ಮಿರುತ್ತಾರೆ.

ಕರ್ನಾಟಕದಲ್ಲಿ ಪ್ರಥಮ ಸ್ಥಾನ ಮತ್ತು ಭಾರತದಲ್ಲಿ 2ನೇ ಸ್ಥಾನ ಪಡೆದಿರುತ್ತಾರೆ.

Million Congratulations to K.K. Murugesh



ಶ್ರೀಯುತ ಕೆ.ಕೆ. ಮುರುಗೇಶ್
MDRT, COT and TOT advisor,
SBI Life Insurance Co.Ltd.,
Davangere Branch

ಈ ಸಾಧನೆಗೆ ಶುಭ ಹಾರೈಸುವವರು :

ಕೆ.ಎಂ. ಶಿವಪ್ರಸಾದ್
Chief Business Manager
SBI Life Insurance co.ltd., Davangere.



ಸಂತೋಷ್ ಕುಮಾರ್ ನಾಯ್ಕ್
Senior Divisional Manager,
SBI Life Insurance Co. Ltd., Davangere.



ಅಂತರಾಷ್ಟ್ರೀಯ ಗೃಹಬಳಕೆ ವಸ್ತುಗಳ ಪ್ರದರ್ಶನ

## ಗೃಹಶೋಭೆ



10 Days

GRUHA SHOBHE
LIVING STYLE EXHIBITION

TIMING : 11 Am to 9 Pm

Cake Show — Special Attraction




ಫೆಬ್ರವರಿ 17 ರಿಂದ 26 ರವರೆಗೆ

ಸರ್ಕಾರಿ ಹೈಸ್ಕೂಲ್ ಮೈದಾನ
ಮಹಾನಗರ ಪಾಲಿಕೆ ಹತ್ತಿರ, ದಾವಣಗೆರೆ

ENTRY Rs. 10/- Children Below 10 Years Free Entry PARKING FREE


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte